26 August 2026 Wednesday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಹಾವು ವಿಷ ಜಂತುವಾದರೂ ತನ್ನ ಸಂತತಿಗೆ ಕಂಟಕವಲ್ಲ! ಆದರೆ ಮನುಷ್ಯ ಮತ್ಸರದಿಂದ ತನ್ನ ಆತ್ಮೀಯರಿಗೆ ಸಂಕಟ ತರುತ್ತಾನೆ!

-ಸ್ನೇಹಾ ಆನಂದ್



ಮತದಾರರ ಡಿಲಿಟ್ ಹಿಂದೆ ಆರ್‌ಎಸ್‌ಎಸ್: ಕಾಂಗ್ರೆಸ್ ವಕ್ತಾರ ಎಂ ಲಕ್ಷಣ್ — ಪುಟ ಸಂ. 2



ಕಜ್ಜಾಯದ ರುಚಿ ಇಳಿಸಿದ ಬೆಲ್ಲದ ರೇಟು: ಕಳೆಗುಂದಿದ ಗ್ರಾಮೀಣರ ಹಬ್ಬ — ಪುಟ ಸಂ. 3



ಉದ್ಯೋಗ ಮಾಡುವುದು ಮುಖ್ಯ ಮಾತ್ರವಲ್ಲ, ಉದ್ಯೋಗ ಸೃಷ್ಟಿಸುವುದು ಮುಖ್ಯ: ಸಿ.ಎಂ — ಪುಟ ಸಂ. 4

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 261 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ಮನೆ ಮುಂದೆ ಪಾರ್ಕಿಂಗ್ ಶುಲ್ಕಕ್ಕೆ ಸಚಿವ ರೆಡ್ಡಿ ವಿರೋಧ

**ಬೆಂಗಳೂರು:** ಬೆಂಗಳೂರಿನಲ್ಲಿ ಮನೆ ಮುಂದೆ ರಸ್ತೆಬದಿ ವಾಹನ ನಿಲ್ಲಿಸಿದರೆ ಪಾರ್ಕಿಂಗ್ ಶುಲ್ಕ ವಿಧಿಸುವ ಪ್ರಸ್ತಾವಕ್ಕೆ ಅರಣ್ಯ ಸಚಿವ ರಾಮಲಿಂಗಾರೆಡ್ಡಿ ಅವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ಪತ್ರ ಬರೆದು ವಿರೋಧಿಸಿದ್ದಾರೆ.



ವಾರ್ಷಿಕ 15,000 ರಿಂದ 25,000 ರೂ.ಗಳವರೆಗೆ ಪಾರ್ಕಿಂಗ್ ಶುಲ್ಕವಿಧಿಸುವ ಪ್ರಸ್ತಾವನೆ ಮಧ್ಯಮ ಮತ್ತು ಸಾಮಾನ್ಯ ಕುಟುಂಬಗಳಿಗೆ ಆರ್ಥಿಕ ಹೊರೆಯಾಗುತ್ತದೆ. ಇದನ್ನು ಮರುಪರಿಶೀಲಿಸುವಂತೆ ರಾಮಲಿಂಗಾರೆಡ್ಡಿ ಅವರು ಮುಖ್ಯಮಂತ್ರಿಗೆ ಒತ್ತಾಯಿಸಿದ್ದಾರೆ.

ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ವಾಹನಗಳ ಸಂಖ್ಯೆ ಮತ್ತು ಸಂಚಾರ ಸಮಸ್ಯೆಗಳ ನಡುವೆ ರಸ್ತೆಬದಿ ಪಾರ್ಕಿಂಗ್ ಅನ್ನು ನಿಯಂತ್ರಿಸುವ ಅಗತ್ಯವನ್ನು ಒಪ್ಪಿಕೊಂಡಿದ್ದಾರೆ. ಆದರೆ ಸಾಮಾನ್ಯ ನಾಗರಿಕರ ಆರ್ಥಿಕ ಪರಿಸ್ಥಿತಿಯನ್ನು ಕೂಡ ಪರಿಗಣಿಸುವುದು ಅಗತ್ಯ ಎಂದು ಹೇಳಿದ್ದಾರೆ.

ಅಗತ್ಯ ವಸ್ತುಗಳ ಬೆಲೆ ಏರಿಕೆ ಮತ್ತು ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್, ಜಿಎಸ್‌ಟಿ ಹಾಗೂ ಟೋಲ್‌ಗಳ ಮೇಲಿನ ಹೆಚ್ಚಿದ ವೆಚ್ಚಗಳಿಂದಾಗಿ ಮಧ್ಯಮ ವರ್ಗ ಮತ್ತು ಸಾಮಾನ್ಯ ಕುಟುಂಬಗಳು ಈಗಾಗಲೇ ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ಇಂತಹ ಸಂದರ್ಭದಲ್ಲಿ ಪಾರ್ಕಿಂಗ್ ಶುಲ್ಕ ವಿಧಿಸಿದರೆ ಜನರಿಗೆ ಮತ್ತಷ್ಟು ಹೊರೆಯಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಅಕ್ರಮ ಮತ್ತು ದೀರ್ಘಾವಧಿ ರಸ್ತೆ ಬದಿ ಪಾರ್ಕಿಂಗ್ ನಿಯಂತ್ರಿಸಬೇಕು. ಮನೆ ಆವರಣದಲ್ಲಿ ವಾಹನ ನಿಲ್ಲಿಸಲು ಜಾಗ ಇಲ್ಲದ ಸಾಮಾನ್ಯ ಕುಟುಂಬಗಳಿಗೆ ವಿನಾಯಿತಿ ನೀಡಬೇಕು. ಈ ಬಗ್ಗೆ ಬೆಂಗಳೂರು ನಗರದ ಶಾಸಕರು, ಸಂಘ–ಸಂಸ್ಥೆಗಳು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಡಿಕೆಶಿಗೆ ಮನವಿ ಮಾಡಿದ್ದಾರೆ.

# ಮತ್ತೆ 'ಸಂಪುಟ ಸರ್ಜರಿ'

### 4ರಿಂದ 5 ಸಚಿವರಿಗೆ ಕೋಕ್ | ಅಧಿವೇಶನ ಮುಗಿದ ಬೆನ್ನಲ್ಲೇ ಚಾಲನೆ

**ಬೆಂಗಳೂರು:** ವಿಧಾನಮಂಡಲ ಮುಂಗಾರು ಅಧಿವೇಶನ ಮೂರು ದಿನಗಳ ಮೊದಲೇ ಮುಗಿದ ಬೆನ್ನಲ್ಲೇ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ನೇತೃತ್ವದ ಸಚಿವ ಸಂಪುಟದಲ್ಲಿ ಮತ್ತೆ ಭಾರಿ ಬದಲಾವಣೆಯಾಗುವ ಕುರಿತು ಕಾಂಗ್ರೆಸ್ ಪಾಳಯದಲ್ಲಿ ಭಾರೀ ಚರ್ಚೆ ಆರಂಭವಾಗಿದೆ.

ಸಚಿವ ಸಂಪುಟದಲ್ಲಿ ಅವಕಾಶ ವಂಚಿತರಾಗಿರುವವರ ಬಂಡಾಯ ಶಮನಕ್ಕೆ ಮಂತ್ರಿಗಿರಿ ಭರವಸೆ ನೀಡಲಾಗಿದ್ದು, ಅಧಿವೇಶನ ಮುಗಿದ ಬೆನ್ನಲ್ಲೇ ಅವಕಾಶ ನೀಡುವ ವಾಗ್ದಾನ ಮಾಡಲಾಗಿದೆ. ಈಗ ಅದನ್ನು ಈಡೇರಿಸಲು ಸಿಎಂ ಡಿ.ಕೆ.ಶಿವಕುಮಾರ್ ಮುಂದಾಗಿದ್ದಾರೆ ಎನ್ನಲಾಗಿದೆ. ಹೀಗಾಗಿ 4ರಿಂದ 5 ಸಚಿವರಿಗೆ ಕೋಕ್ ನೀಡುವ ಸಾಧ್ಯತೆ ಹೆಚ್ಚಾಗಿದೆ.

ಆಗಸ್ಟ್ 13ರಿಂದ ಆಗಸ್ಟ್ 27ರ ವರೆಗೆ ಮುಂಗಾರು ಅಧಿವೇಶನ ನಡೆಸಲು ಆರಂಭದಲ್ಲಿ ತೀರ್ಮಾನಿಸಲಾಗಿತ್ತು. ಆದರೆ ಪ್ರತಿಪಕ್ಷಗಳ ಪ್ರತಿಭಟನೆ ಮತ್ತು ಗದ್ದಲದ ಹಿನ್ನೆಲೆಯಲ್ಲಿ ಮೂರು ದಿನ ಮುಂಚಿತವಾಗಿ ಸೋಮವಾರವೇ ವಿಧಾನಸಭೆ ಮತ್ತು ವಿಧಾನ ಪರಿಷತ್ ಕಲಾಪಗಳನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ.

ಇದರ ಬೆನ್ನಲ್ಲೇ ಸಚಿವ ಸಂಪುಟ ಪುನಾರಚನೆ ಕುರಿತ ಚರ್ಚೆ ಆರಂಭವಾಗಿದೆ. ಈ ಬಾರಿ ಐವರು ಸಚಿವರನ್ನು ಸಂಪುಟದಿಂದ ಕೈಬಿಟ್ಟು, ಹೊಸಬರಿಗೆ ಅವಕಾಶ ನೀಡುವ ಬಗ್ಗೆ ಹೈಕಮಾಂಡ್ ಮಟ್ಟದಲ್ಲಿ ಚರ್ಚೆ ನಡೆದಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಸಚಿವ ಸ್ಥಾನಕ್ಕಾಗಿ ಕೆಲವು ಹಿರಿಯ ನಾಯಕರು ಈಗಾಗಲೇ ಪಟ್ಟು ಹಿಡಿದಿದ್ದಾರೆ. ಇದೇ ವೇಳೆ ಸಂಪುಟದಿಂದ ಕೈಬಿಡಲಾಗುತ್ತದೆ ಎಂಬ ಚರ್ಚೆಯಿಂದ ಕೆಲವು ನಾಯಕರು ಅಸಮಾಧಾನಗೊಂಡಿದ್ದಾರೆ. ಸಂಪುಟ ಪುನಾರಚನೆಯ ಮೂಲಕ ಒಬ್ಬರು ಮಹಿಳೆ ಹಾಗೂ ಅಸಮಾಧಾನಗೊಂಡಿರುವ ನಾಯಕರಿಗೆ ಅವಕಾಶ ನೀಡುವ ಸಾಧ್ಯತೆ ಬಗ್ಗೆಯೂ ಚರ್ಚೆ ನಡೆಯುತ್ತಿದೆ.



ಸಂಪುಟದಲ್ಲಿ ಹಿರಿತನಕ್ಕೆ ಆದ್ಯತೆ ನೀಡದಿರುವುದು ಹಾಗೂ ಜಿಲ್ಲೆ, ಜಾತಿ ಸಮೀಕರಣ ವಿಚಾರದಲ್ಲೂ ಕೆಲವು ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಜನತಾ ಪರಿವಾರದ ಹಿನ್ನೆಲೆಯ 17 ಮಂದಿಗೆ ಸಚಿವ ಸ್ಥಾನ ನೀಡಿರುವ ಬಗ್ಗೆ ಅಸಮಾಧಾನವಿದೆ. ಈ ಬಗ್ಗೆ ಕೆಲವರು ಪ್ರಶ್ನೆಯನ್ನೂ ಎತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಿಎಂ ಡಿಕೆ ಶಿವಕುಮಾರ್ ಹಾಗೂ ಹೈಕಮಾಂಡ್ ನಾಯಕರ ನಡುವಿನ ಮಾತುಕತೆ ಬಳಿಕ ಸಂಪುಟ ಸರ್ಜರಿ ಕುರಿತು ಸ್ಪಷ್ಟ ಚಿತ್ರಣ ಹೊರಬೀಳುವ ಸಾಧ್ಯತೆಯಿದೆ.

### ಡಿಕೆಶಿ ದೆಹಲಿ ಯಾತ್ರೆ

**ಬೆಂಗಳೂರು:** ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಈಗಾಗಲೇ ರಾಜ್ಯದ ನಾಯಕರೊಂದಿಗೆ ಹೈಕಮಾಂಡ್ ನಾಯಕರು ಮಾತುಕತೆ ನಡೆಸಿದ್ದಾರೆ. ಹಿರಿಯ ಸಚಿವರನ್ನು ಸಂಪುಟದಿಂದ ಕೈಬಿಡುವ ಬಗ್ಗೆಯೂ ಚರ್ಚೆ ನಡೆದಿದೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಹೈಕಮಾಂಡ್ ಬುಲಾವ್ ನೀಡುವ ಸಾಧ್ಯತೆ ಇದೆ. ಈ ವಾರದೊಳಗೆ ಸಿಎಂ ದೆಹಲಿಗೆ ತೆರಳುವ ನಿರೀಕ್ಷೆಯಿದೆ. ಹೈಕಮಾಂಡ್ ನಾಯಕರೊಂದಿಗೆ ಸಂಪುಟ ಪುನಾರಚನೆ ಕುರಿತು ಚರ್ಚೆ ನಡೆಯಲಿದೆ ಎಂದು ತಿಳಿದು ಬಂದಿದೆ.

## ಬಿಡದಿ: ಸರ್ಕಾರಕ್ಕೆ ಇಕ್ಕಟ್ಟು

**ಅನುಮತಿ ಇಲ್ಲದೇ ಏನೂ ಮಾಡುವಂತಿಲ್ಲ: ಹೈಕೋರ್ಟ್**




**ಬೆಂಗಳೂರು:** ಹೈಕೋರ್ಟ್ ಅನುಮತಿಯಿಲ್ಲದೆ ಬಿಡದಿ ಟೌನ್‌ಶಿಪ್ ಪ್ರದೇಶದಲ್ಲಿ ಒಂದು ಇಟ್ಟಿಗೆ ಅಲುಗಾಡಿಸುವಂತಿಲ್ಲ ಹಾಗೂ ಒಂದೇ ಒಂದು ಮರ ಕಡಿಯುವಂತಿಲ್ಲ ಎಂದು ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿದೆ.

ಬಿಡದಿ ಸ್ಮಾರ್ಟ್ ಸಿಟಿ ಯೋಜನೆಗಾಗಿ ಭೂಸ್ವಾಧೀನ ಪ್ರಕ್ರಿಯೆ ಪ್ರಶ್ನಿಸಿ ನಾಲ್ವರು ರೈತರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನ್ಯಾಯಮೂರ್ತಿ ಆರ್.ನಟರಾಜ್ ಅವರ ಏಕಸದಸ್ಯ ಪೀಠದಲ್ಲಿ ಮಂಗಳವಾರ ನಡೆಯಿತು.

ಸರ್ಕಾರ ಪರಿಹಾರ ಮೊತ್ತ ನಿಗದಿಪಡಿಸಿದ ತಕ್ಷಣವೇ ಬುಲ್ಡೋಜರ್ ತೆಗೆದುಕೊಂಡು ಹೋದರೆ ಹೇಗೆ? ರಾತ್ರೋರಾತ್ರಿ ಆಸ್ತಿ ನಾಶಪಡಿಸುವ ಕೆಲಸಕ್ಕೆ ಸರ್ಕಾರ ಕೈಹಾಕಬಾರದು ಎಂದು ನ್ಯಾಯಪೀಠ ತರಾಟೆಗೆ ತೆಗೆದುಕೊಂಡಿದೆ. ಪರಿಹಾರ ಮೊತ್ತ ಪ್ರಕಟವಾದರೂ ಹೈಕೋರ್ಟ್ ಅನುಮತಿ ಪಡೆಯದೆ ಕೃಷಿಕರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳುವಂತಿಲ್ಲ ಎಂದು ಸೂಚನೆ ನೀಡಿತು.

ರಾಜ್ಯ ಸರ್ಕಾರದ ಪರ ಹಾಜರಾದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು, ಅಂತಿಮ ಪರಿಹಾರ ಮೊತ್ತವನ್ನು ನಿಗದಿಪಡಿಸುವವರೆಗೆ ಯಾವುದೇ ರೈತರನ್ನು ತೆರವುಗೊಳಿಸುವುದಿಲ್ಲ. ಪರಿಹಾರದ ವಿವರಗಳನ್ನು ಮೊದಲು ಹೈಕೋರ್ಟ್ ಪೀಠದ ಮುಂದಿಡಲಾಗುವುದು. ಬಳಿಕವೇ ಮುಂದಿನ ಪ್ರಕ್ರಿಯೆ ಮುಂದುವರಿಯಲಿದೆ ಎಂದು ಭರವಸೆ ನೀಡಿದರು.

ಮುಖ್ಯ ಅರ್ಜಿ ವಿಚಾರಣೆಯನ್ನು ಸೆಪ್ಟೆಂಬರ್ 29ಕ್ಕೆ ಮುಂದೂಡಿತು. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ಹೊಸ ಅರ್ಜಿಗಳ ವಿಚಾರಣೆಯನ್ನು ಸೆ.1ಕ್ಕೆ ನಿಗದಿಪಡಿಸಲಾಗಿದೆ.

## ಪಶುವೈದ್ಯಾಧಿಕಾರಿ ಹಗರಣ: ಅಭ್ಯರ್ಥಿಗಳಿಗೆ ಸಿಐಡಿ ನೋಟಿಸ್

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಪಶುವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಅಪರಾಧ ತನಿಖಾ ದಳದ (ಸಿಐಡಿ) ಅಧಿಕಾರಿಗಳು, ಎಲ್ಲಾ 329 ಅಭ್ಯರ್ಥಿಗಳಿಗೆ ನೋಟಿಸ್ ಜಾರಿ ಮಾಡಿದ್ದಾರೆ.

ಪಶುವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಬೃಹತ್ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಅಧಿಕಾರಿಗಳು 21ಕ್ಕೂ ಹೆಚ್ಚು ಸ್ಥಳಗಳಲ್ಲಿ ಏಕಕಾಲಕ್ಕೆ ಬೃಹತ್ ಶೋಧ ಕಾರ್ಯಾಚರಣೆ ನಡೆಸಿತ್ತು.

ಕೆಪಿಎಸ್‌ಸಿ ಮೇಲೂ ಇಡಿ ಅಧಿಕಾರಿಗಳು ದಾಳಿ ನಡೆಸಿ ತೀವ್ರ ಶೋಧ ನಡೆಸಿದ್ದರು. ಕೆಲವು ಅಭ್ಯರ್ಥಿಗಳನ್ನು ಇಡಿ ವಿಚಾರಣೆಗೆ ಒಳಪಡಿಸಿತ್ತು. ಈ ವೇಳೆ ಕೆಲವರು ಅಕ್ರಮ ನಡೆಸಿರುವುದಾಗಿ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾರೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಅಭ್ಯರ್ಥಿಗಳಿಗೂ ನೋಟಿಸ್ ನೀಡಿದೆ.




## ಅಂಬಾರಿ ಆನೆ ಅಭಿಮನ್ಯುವಿಗೆ ಗಜಪಯಣದಲ್ಲಿ ಬೀಳ್ಕೊಡುಗೆ

**ಮೈಸೂರು:** ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ 6 ಬಾರಿ ಚಿನ್ನದ ಅಂಬಾರಿ ಹೊತ್ತು ಯಶಸ್ವಿಯಾಗಿ ಜವಾಬ್ದಾರಿ ನಿರ್ವಹಿಸಿದ್ದ ಕ್ಯಾಪ್ಟನ್ ಅಭಿಮನ್ಯುವಿಗೆ ಬುಧವಾರ ಗಜಪಯಣದಲ್ಲಿ ಗೌರವಪೂರ್ವಕ ಬೀಳ್ಕೊಡುಗೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ದಸರಾ ಇತಿಹಾಸದಲ್ಲಿ ಅತ್ಯಂತ ಜನಪ್ರಿಯ ಹಾಗೂ ಗಣ್ಯ ಆನೆಗಳಲ್ಲಿ ಒಂದಾದ ಅಭಿಮನ್ಯುವಿಗೆ ವಿಶೇಷ ಹಾಗೂ ಭಾವಪೂರ್ಣ ಗೌರವ ಸಲ್ಲಿಸುವ ಕಾರ್ಯಕ್ರಮಕ್ಕೆ ಗಜಪಯಣ ಸಾಕ್ಷಿಯಾಗಲಿದೆ.

ಮೈಸೂರು ದಸರಾ ಮಹೋತ್ಸವದೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಅಭಿಮನ್ಯು, ದಸರಾ ಮಹೋತ್ಸವದಲ್ಲಿ ವಿವಿಧ ಪ್ರಮುಖ ಜವಾಬ್ದಾರಿಗಳನ್ನು ನಿರ್ವಹಿಸಿದ ನಂತರ ಚಿನ್ನದ ಅಂಬಾರಿ ಹೊರುವ ಪ್ರತಿಷ್ಠಿತ ಜವಾಬ್ದಾರಿಯನ್ನು 6 ಬಾರಿ ಯಶಸ್ವಿಯಾಗಿ ನಿರ್ವಹಿಸಿದ್ದಾನೆ. ಕಳೆದ ಆರು ವರ್ಷಗಳಿಂದ ಜಂಬೂ ಸವಾರಿಯಲ್ಲಿ ಚಿನ್ನದ ಅಂಬಾರಿಯನ್ನು ಹೊತ್ತು ಸಾಗಿದ ಅಭಿಮನ್ಯುವಿನ ಗಾಂಭೀರ್ಯ, ಶಾಂತ ಸ್ವಭಾವ, ಶಿಸ್ತು ಹಾಗೂ ನಿಯಂತ್ರಿತ ನಡಿಗೆ ಮೈಸೂರು ದಸರಾ ಜಂಬೂ ಸವಾರಿಯ ಪ್ರಮುಖ ಆಕರ್ಷಣೆಯಾಗಿ ಗುರುತಿಸಿಕೊಂಡಿದೆ.



ದಸರಾ ಮಹೋತ್ಸವದ ಹೊರತಾಗಿ, ಅರಣ್ಯ ಇಲಾಖೆಯ ವಿವಿಧ ವನ್ಯಜೀವಿ ನಿರ್ವಹಣೆ, ರಕ್ಷಣೆ ಹಾಗೂ ಕಾಡಾನೆಗಳ ಕಾರ್ಯಾಚರಣೆಗಳಲ್ಲಿ ಅಭಿಮನ್ಯು ಗಮನಾರ್ಹ ಸೇವೆ ಸಲ್ಲಿಸಿದೆ.

ಪ್ರಸ್ತುತ 60 ವರ್ಷ ವಯಸ್ಸು ತಲುಪಿರುವ ಹಿನ್ನೆಲೆಯಲ್ಲಿ ಮಾರ್ಗಸೂಚಿ ಅನ್ವಯ ಅಭಿಮನ್ಯುವನ್ನು ಸಕ್ರಿಯ ದಸರಾ ಕರ್ತವ್ಯಗಳಿಂದ ಗೌರವಪೂರ್ವಕವಾಗಿ ನಿವೃತ್ತಿಗೊಳಿಸಲಾಗುತ್ತಿದೆ.

## ಬಿಪಿಎಲ್ ಕಾರ್ಡ್ ಆದಾಯ ಮಿತಿ ಪರಿಷ್ಕರಣೆ: ಸಚಿವ ರಿಜ್ವಾನ್




**ಬೆಂಗಳೂರು:** ಬಿಪಿಎಲ್ ಕಾರ್ಡ್ ಪಡೆಯಲು ನಿಗದಿಪಡಿಸಿರುವ ವಾರ್ಷಿಕ ಆದಾಯ ಮಿತಿಯನ್ನು ಪರಿಷ್ಕರಿಸುವ ಕುರಿತು ಸರ್ಕಾರ ಪರಿಶೀಲನೆ ನಡೆಸುತ್ತಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ರಿಜ್ವಾನ್ ಅರ್ಷದ್ ತಿಳಿಸಿದ್ದಾರೆ.

ಪ್ರಸ್ತುತ ಬಿಪಿಎಲ್ ಕಾರ್ಡ್ ಪಡೆಯಲು ವಾರ್ಷಿಕ ಆದಾಯ ಮಿತಿ 1.20 ಲಕ್ಷ ರೂಪಾಯಿ ಇದೆ. ಆದಾಯ ಅರ್ಹತಾ ಮಿತಿಯನ್ನು ಪರಿಷ್ಕರಿಸುವ ವಿಚಾರ ವ್ಯಾಪಕ ಪರಿಣಾಮ ಹೊಂದಿದೆ. ಈ ಬಗ್ಗೆ ಸಮಗ್ರ ಸಮಾಲೋಚನೆ ಅಗತ್ಯವಿದೆ. ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಅರ್ಹ ಯಾವುದೇ ಫಲಾನುಭವಿಗೆ ಅವರ ಹಕ್ಕಿನ ಸೌಲಭ್ಯ ವಂಚನೆಯಾಗದಂತೆ ಮುಖ್ಯಮಂತ್ರಿ ಅವರೊಂದಿಗೆ ಈ ವಿಚಾರವನ್ನು ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳಿದರು.

ರದ್ದುಗೊಂಡಿರುವ ಬಿಪಿಎಲ್ ಕಾರ್ಡ್ಗಳನ್ನು ಮರುಪರಿಶೀಲಿಸಿ, ಅರ್ಹ ಫಲಾನುಭವಿಗಳು ತಮ್ಮ ಸೌಲಭ್ಯಗಳಿಂದ ವಂಚಿತರಾಗದಂತೆ ನೋಡಿಕೊಳ್ಳಲು ಹಾಗೂ ನಕಲಿ ಕಾರ್ಡ್ಗಳು, ಅನರ್ಹ ಫಲಾನುಭವಿಗಳು ಮತ್ತು ಇತರ ಅಕ್ರಮಗಳನ್ನು ಪತ್ತೆಹಚ್ಚಲು ಇಲಾಖೆಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

## ಪ್ರದೋಷ್ ಮಾಫಿ ಸಾಕ್ಷಿಗೆ ಅಸ್ತು: ದರ್ಶನ್‌ಗೆ ಸಂಕಷ್ಟ



**ಬೆಂಗಳೂರು:** ರೇಣುಕಾಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿ ಸಿದಂತೆ ನಟ ದರ್ಶನ್‌ಗೆ ಅತಿದೊಡ್ಡ ಸಂಕಷ್ಟ ಎದುರಾಗಿದೆ. ಕೊಲೆ ಪ್ರಕರಣದ 14ನೇ ಆರೋಪಿ ಪ್ರದೋಷ್ ಸಲ್ಲಿಸಿದ್ದ

ಪುಟ 2ಕ್ಕೆ

## ಹನೂರು ಎನ್‌ಕೌಂಟರ್ ಕೇಸ್ ಸಿಐಡಿಗೆ ಹಸ್ತಾಂತರ

**ಬೆಂಗಳೂರು:** ಚಾಮರಾಜನಗರ ಜಿಲ್ಲೆಯ ಹನೂರು ಎನ್‌ಕೌಂಟರ್ ಪ್ರಕರಣದ ತನಿಖೆಯನ್ನು ಅಪರಾಧ ತನಿಖಾ ದಳಕ್ಕೆ (ಸಿಐಡಿ) ವರ್ಗಾಯಿಸಲಾಗಿದೆ. ಈ ಕುರಿತು ರಾಜ್ಯ ಡಿಜಿಪಿ ಡಾ. ಎಂ.ಎ.ಸಲೀಂ ಆದೇಶ ಹೊರಡಿಸಿದ್ದಾರೆ.

ಹನೂರು ಎನ್‌ಕೌಂಟರ್ ಮತ್ತು ಗುಂಡಿನ ದಾಳಿ ಘಟನೆಗೆ ಸಂಬಂಧಿಸಿದಂತೆ ಒಟ್ಟು ನಾಲ್ಕು ಎಫ್‌ಐಆರ್‌ಗಳು ದಾಖಲಾಗಿವೆ. ಕೇಸ್‌ಗೆ ಸಂಬಂಧಿತ ದಾಖಲೆಪತ್ರಗಳನ್ನು ಸಿಐಡಿಗೆ ಹಸ್ತಾಂತರಿಸುವಂತೆ ಚಾಮರಾಜನಗರ ಪೊಲೀಸರಿಗೆ ಸೂಚಿಸಲಾಗಿದೆ. ನಾಲ್ಕು ಎಫ್‌ಐಆರ್‌ಗಳ ಪೈಕಿ ಎರಡು ಹನೂರು ಪೊಲೀಸ್ ಠಾಣೆಯಲ್ಲಿ, ಒಂದು ರಾಮಾಪುರದಲ್ಲಿ ಹಾಗೂ ಮತ್ತೊಂದು ಕೊಳ್ಳೇಗಾಲದಲ್ಲಿ ದಾಖಲಾಗಿವೆ.



## ಮೋಡ ಬಿತ್ತನೆಗೆ 27 ಕೋಟಿ

**3–4 ದಿನದಲ್ಲಿ ಆರಂಭ: ಸಚಿವ ಚಲುವರಾಯಸ್ವಾಮಿ**

**ಬೆಂಗಳೂರು:** ರಾಜ್ಯದಲ್ಲಿ ಮೋಡ ಬಿತ್ತನೆ ಕಾರ್ಯ 27 ಕೋಟಿ ರೂ. ವೆಚ್ಚದಲ್ಲಿ 3–4 ದಿನಗಳಲ್ಲಿ ಆರಂಭ ಆಗಲಿದೆ ಎಂದು ನೀರಾವರಿ ಸಚಿವ ಚಲುವರಾಯಸ್ವಾಮಿ ತಿಳಿಸಿದರು.

ವಿಧಾನಸೌಧದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೋಡ ಬಿತ್ತನೆ ಬಗ್ಗೆ ಈಗಾಗಲೇ ಕ್ಯಾಬಿನೆಟ್‌ನಲ್ಲಿ ಚರ್ಚೆ ಆಗಿದೆ. ನೀರಾವರಿ ಇಲಾಖೆ ಮೂಲಕ ಮೋಡ ಬಿತ್ತನೆ ಮಾಡುತ್ತೇವೆ. ಏಜೆನ್ಸಿ ಜೊತೆ ಚರ್ಚೆ ನಡೆದಿದೆ. ಮಾನಿಟರ್ ಮತ್ತು ಟೆಕ್ನಿಕಲ್ ಸಮಿತಿ ನೇಮಕ ಆಗಬೇಕು. ಸಮಿತಿ ವರದಿ ಪಡೆದು ಮುಂದಿನ ಪ್ರಕ್ರಿಯೆ ಮಾಡುತ್ತೇವೆ ಎಂದರು.

4 ಕಂದಾಯ ವಿಭಾಗದಲ್ಲಿ ಮೋಡ ಬಿತ್ತನೆ ಮಾಡುತ್ತಿದ್ದೇವೆ. ಮೋಡ ಬಿತ್ತನೆ ಯಶಸ್ವಿಯಾಗುವ ಸಾಧ್ಯತೆ ಇದೆ. ಈ ಹಿಂದೆ 3 ಬಾರಿ ಮೋಡ ಬಿತ್ತನೆ ಆಗಿದೆ. ಜನರಿಗೆ ಅನುಕೂಲ ಆಗಬಹುದು ಅಂತ ಮೋಡ ಬಿತ್ತನೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ತಮಿಳುನಾಡಿಗೆ 9 ಸಾವಿರ ಕ್ಯೂಸೆಕ್ ನೀರು ಬಿಡಲು ಕಾವೇಇ ಪ್ರಾಧಿಕಾರ ಆದೇಶ ಮಾಡಿದೆ. ಸುಪ್ರೀಂ ಕೋರ್ಟ್ನಲ್ಲಿ ಮುಂದಿನ ವಾರ ಕೇಸ್ ಇದೆ. ಆದೇಶ ಪಾಲನೆ ಮಾಡಿ ಸುಪ್ರೀಂಕೋರ್ಟ್ಗೆ ಮನವಿ ಸಲ್ಲಿಸುತ್ತೇವೆ ಎಂದರು.

## ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಪಾದಯಾತ್ರೆ

### ರಾಯಚೂರಿನಿಂದ ಬಳ್ಳಾರಿಗೆ ಸೆ.1ರಿಂದ 10 ದಿನಗಳ 200 ಕಿ.ಮೀ. ಯಾತ್ರೆ: ಬಿ.ವೈ.ವಿ

**ಬೆಂಗಳೂರು:** ರಾಜ್ಯ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳನ್ನು ವಿರೋಧಿಸಿ ಬಿಜೆಪಿ ಸೆಪ್ಟೆಂಬರ್ 1ರಿಂದ 10ರವರೆಗೆ ರಾಯಚೂರಿನಿಂದ ಬಳ್ಳಾರಿಗೆ 10 ದಿನಗಳ ಪಾದಯಾತ್ರೆ ಕೈಗೊಂಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ತಿಳಿಸಿದರು.

ರೈತರ ಸಂಕಷ್ಟ, ನಿರುದ್ಯೋಗ, ಮೀಸಲಾತಿ ಸಮಸ್ಯೆಯನ್ನು ರಾಜ್ಯ ಸರ್ಕಾರ ಕಡೆಗಣಿಸಿದೆ. ನೇಮಕಾತಿಯಲ್ಲಿನ ಭ್ರಷ್ಟಾಚಾರದ ಆರೋಪಗಳ ಜೊತೆಗೆ ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವ ಬಿ.ನಾಗೇಂದ್ರ ಅವರನ್ನು ರಾಜ್ಯ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುವುದನ್ನು ವಿರೋಧಿಸಿ ಬಿಜೆಪಿ ಪಾದಯಾತ್ರೆ ಆಯೋಜಿಸಿದೆ ಎಂದು ಹೇಳಿದರು.

ಈ ಜನವಿರೋಧಿ, ಬಡವರ ವಿರೋಧಿ, ರೈತ ವಿರೋಧಿ, ಯುವಜನ ವಿರೋಧಿ ಕಾಂಗ್ರೆಸ್ ಸರ್ಕಾರದ ನಿಜವಾದ ಬಣ್ಣ ಬಹಿರಂಗಪಡಿಸುವುದು ಮತ್ತು ರಾಜ್ಯದ ಜನರಲ್ಲಿ ಜಾಗೃತಿ ಮೂಡಿಸುವುದು ಈ ಪಾದಯಾತ್ರೆಯ ಉದ್ದೇಶವಾಗಿದೆ ಎಂದು ಹೇಳಿದರು.



ಕರ್ನಾಟಕ ರಾಜ್ಯ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಗರಣದಲ್ಲಿ ನಾಗೇಂದ್ರ ಅವರ ಪಾತ್ರದ ಆರೋಪದ ಮೇಲೆ ಅವರನ್ನು ಸಂಪುಟದಿಂದ ತೆಗೆದುಹಾಕುವಂತೆ

ಪುಟ 2ಕ್ಕೆ

### ದೋಸ್ತಿ ಜೆಡಿಎಸ್ ಬೆಂಬಲ

**ಬೆಂಗಳೂರು:** ಬಿಜೆಪಿ ನೇತೃತ್ವದ ಪಾದಯಾತ್ರೆಗೆ ಜೆಡಿಎಸ್ 'ಸಂಪೂರ್ಣ ಬೆಂಬಲ' ನೀಡಲಿದೆ. ಜೆಡಿಎಸ್ ನಾಯಕರು ಉದ್ಘಾಟನಾ ಮತ್ತು ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ರಾಯಚೂರಿನಲ್ಲಿ ಸೆಪ್ಟೆಂಬರ್ 1ರಂದು ಪಾದಯಾತ್ರೆ ಪ್ರಾರಂಭವಾಗಲಿದೆ. ಸುಮಾರು 200 ಕಿ.ಮೀ. ನಡೆಯಲಿದೆ. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಉದ್ಘಾಟಿಸಲಿದ್ದಾರೆ. ಬಳ್ಳಾರಿಯಲ್ಲಿ ಮುಕ್ತಾಯಗೊಳ್ಳಲಿದೆ ಎಂದು ಬಿ.ವೈ.ವಿಜಯೇಂದ್ರ ತಿಳಿಸಿದರು.

ರಾಜ್ಯ ಸರ್ಕಾರ

ಪುಟ 2ಕ್ಕೆ

## ಕಾವೇರಿ: ರಾಜ್ಯಕ್ಕೆ ತೀವ್ರ ಹಿನ್ನಡೆ

### ಸಿಡಬ್ಲ್ಯೂಆರ್‌ಸಿ ಆದೇಶ ಪಾಲಿಸಲು ಸಿಡಬ್ಲ್ಯೂಎಂಎ ಸೂಚನೆ

**ನವದೆಹಲಿ:** ಕಾವೇರಿ ನದಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕಕ್ಕೆ ಮತ್ತೆ ತೀವ್ರ ಹಿನ್ನಡೆಯಾಗಿದೆ. ನೆರೆ ರಾಜ್ಯ ತಮಿಳುನಾಡಿಗೆ ಮುಂದಿನ 15 ದಿನಗಳ ಕಾಲ ಪ್ರತಿದಿನ 9,000 ಕ್ಯೂಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯೂಆರ್‌ಸಿ) ನೀಡಿದ್ದ ಆದೇಶವನ್ನು ಪಾಲಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯೂಎಂಎ) ಮಂಗಳವಾರ ಕರ್ನಾಟಕಕ್ಕೆ ಸೂಚಿಸಿದೆ.

ತಮಿಳುನಾಡಿಗೆ ಹರಿಸುವ ನೀರಿನ ಪ್ರಮಾಣವನ್ನು ಪ್ರತಿದಿನ 6,000 ಕ್ಯೂಸೆಕ್‌ಗೆ ಇಳಿಸಬೇಕು ಎಂದು ಸಭೆಯಲ್ಲಿ ಕರ್ನಾಟಕ ಮನವಿ ಮಾಡಿತ್ತು. ಆದರೆ, ಪ್ರಾಧಿಕಾರ ಈ ಮನವಿಯನ್ನು ಪುರಸ್ಕರಿಸಿಲ್ಲ. ಮಂಗಳವಾರದಿಂದ ಜಾರಿಗೆ ಬರುವಂತೆ ಪ್ರತಿದಿನ 9,000 ಕ್ಯುಸೆಕ್ ನೀರು ಹರಿಸಲು ಆದೇಶಿಸಲಾಗಿದೆ. ಇದರಂತೆ ಮುಂದಿನ 15 ದಿನಗಳಲ್ಲಿ ಒಟ್ಟು 11.66 ಟಿಎಂಸಿ ನೀರನ್ನು ತಮಿಳುನಾಡಿಗೆ ಬಿಡಬೇಕಾಗಿದೆ.



ಸಿಡಬ್ಲ್ಯೂಆರ್‌ಸಿ ಮುಖ್ಯಸ್ಥ ವಿನೀತ್ ಗುಪ್ತಾ ಅವರ ನೇತೃತ್ವದಲ್ಲಿ ನಡೆದ 141ನೇ ಸಭೆಯಲ್ಲಿ ತಮಿಳುನಾಡಿಗೆ ಮುಂದಿನ 15 ದಿನಗಳ ಕಾಲ ಪ್ರತಿದಿನ 9,000 ಕ್ಯೂಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಕರ್ನಾಟಕ ಸರ್ಕಾರಕ್ಕೆ ಸೂಚಿಸಿತ್ತು.

### 28ಟಿಎಂಸಿಗೆ ತ.ನಾಡು ಬೇಡಿಕೆ

**ನವದೆಹಲಿ:** ತಮಿಳುನಾಡು 28 ಟಿಎಂಸಿ ನೀರಿನ ಬೇಡಿಕೆ ಇಟ್ಟಿತ್ತು. ಪ್ರಾಧಿಕಾರ ಅವರ ಬೇಡಿಕೆಗೂ ಒಪ್ಪಿಲ್ಲ. ಮುಂದೆ ಉತ್ತಮ ಮಳೆಯಾಗಬಹುದು ಎಂದು ಹವಾಮಾನ ಇಲಾಖೆ ಆಶಯ ವ್ಯಕ್ತಪಡಿಸಿದೆ. ಈ ಹಿನ್ನೆಲೆಯಲ್ಲಿ ನೀರು ಹರಿಸಲು ಸೂಚಿಸಿದೆ ಎಂದು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ ತಿಳಿಸಿದರು.

ದೆಹಲಿಯಲ್ಲಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಕಚೇರಿಯಲ್ಲಿ ಮಂಗಳವಾರ ನಡೆದ ಸಭೆಯ

ಪುಟ 2ಕ್ಕೆ

# ಮತದಾರರ ಡಿಲಿಟ್ ಹಿಂದೆ ಆರ್‌ಎಸ್‌ಎಸ್

## ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪ | ಕೇಂದ್ರದ ಅಣತಿಯಂತೆ ಚುನಾವಣಾ ಆಯೋಗ ಕೆಲಸ

ಮೈಸೂರು: ಕೇಂದ್ರ ಬಿಜೆಪಿ ಸರ್ಕಾರದ ಅಣತಿಯಂತೆ ಚುನಾವಣಾ ಆಯೋಗ ಕೆಲಸ ಮಾಡುತ್ತಿದ್ದು, ದೇಶದಲ್ಲೇ ಅತಿಹೆಚ್ಚು ಮತದಾರರನ್ನು ರಾಜ್ಯದಲ್ಲಿ ಕೈ ಬಿಡಲಾಗಿದ್ದು, ಇದರ ಹಿಂದೆ ಆರ್ ಎಸ್ ಎಸ್ ಕೈವಾಡ ಇದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದರು.

ಮೈಸೂರಿನ ಇಂದಿರಾಗಾಂಧಿ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ದೇಶದಲ್ಲೇ ಅತಿಹೆಚ್ಚು 1ಕೋಟಿ 8ಲಕ್ಷ ಮತದಾರರನ್ನು ರಾಜ್ಯದಲ್ಲಿ ಅಳಿಸಿ ಹಾಕಲಾಗಿದೆ. ದೇಶದಾದ್ಯಂತ ಮತದಾನದ ಹಕ್ಕನ್ನು ಕದ್ದು ಎಸ್ ಐಆರ್ ಜಾರಿಯಲ್ಲಿ ಸಕ್ಸಸ್ ಆಗಿ ಅಧಿಕಾರ ಹಿಡಿದಿದ್ದಾರೆ. ಈ ಬಗ್ಗೆ ಎರಡು ತಿಂಗಳಿಂದ ಹಲವಾರು ಬಾರಿ ಎಚ್ಚರಿಸುವ ಕೆಲಸ ಮಾಡಿದ್ದೇವೆ. ಜನರು ಒಂದು ಪರ್ಸೆಂಟ್ ಎಚ್ಚೆತ್ತುಕೊಳ್ಳಲಿಲ್ಲ. ಚುನಾವಣೆಯಲ್ಲಿ ಮತ ಹಾಕಲು ಹೋದಾಗ ಮತದಾರರಿಗೆ ಇದರ ಅರಿವು ಆಗಿ ಆಗ ಆಕ್ರೋಶ ವ್ಯಕ್ತಪಡಿಸಲಿದ್ದಾರೆ ಎಂದರು.

ಬರೋಬ್ಬರಿ ಒಟ್ಟು 1.8ಲಕ್ಷ ಮತದಾರರನ್ನು ಕೈ ಬಿಡಲಾಗಿದೆ. ಅದರಲ್ಲಿ 44.64 ಲಕ್ಷ ಮಂದಿಗೆ ನೋಟೀಸ್ ನೀಡಿದ್ದು, 28 ಲಕ್ಷ ಮಾತದಾರರು



ಮ್ಯಾಪಿಂಗ್ ಆಗಿಲ್ಲ. ಯಾವ ಮಾನದಂಡದ ಮೇಲೆ ನೀವು ಇದೆನೆಲ್ಲಾ ಮಾಡುತ್ತಿದ್ದರೆ ಎಸ್ ಐಆರ್ ಗೊಂದಲ, ಸಮಸ್ಯೆಗಳನ್ನು ಹೇಗೆ ಹೇಳಬೇಕೆಂಬುದು ಸೇರಿ ನಮ್ಮ ಯಾವುದೇ ಮಾತು ಕೇಳುವ ಸ್ಥಿತಿಯಲ್ಲಿ ರಾಜ್ಯ ಚುನಾವಣಾ ಆಯೋಗ ಇಲ್ಲ. ರಾಜ್ಯ ಚುನಾವಣಾ ಅಧಿಕಾರಿಗಳು ಸುಳ್ಳು ಹೇಳುತ್ತಾ ಪ್ರಶ್ನೆಗೂ ಅವಕಾಶ ನೀಡುತ್ತಿಲ್ಲ. 2002ರಲ್ಲಿ ಮತದಾನದ ಎಲ್ಲಿ ಮಾಡಿದ್ದಾರೆಂಬ ಮಾಹಿತಿ ಕೊಡುವುದೇ ಮ್ಯಾಪಿಂಗ್ ಆಗಿದೆ. ಆದರೆ, ಅದನ್ನು 2025ರಲ್ಲಿ ಕೇಳಿದರೆ ಹೇಗೆ? ಬಿಎಲ್ ಎಗಳು ನಮ್ಮ ಮಾತು ಕೇಳಿದರೂ ಬಿಎಲ್ ಒ ನಮ್ಮ ವ್ಯಾಪ್ತಿಗೆ ಬರಲಿಲ್ಲ. 2026 ಜೂ.28 ಜು.26 ರವರೆಗೂ ಅವಕಾಶ ನೀಡಿ, ತರಾತುರಿ ಸಮಯದ ಅಭಾವದಲ್ಲಿ ಬಿಎಲ್ ಒಗಳು ಅರ್ಜಿ ವಿತರಿಸಲಿಲ್ಲ, ಖಾಲಿ ಅರ್ಜಿಗಳನ್ನೇ ಹಿಂದುರುಗಿಸುವ ಕೆಲಸ ಮಾಡಿದರು. ಅನಂತರ 10 ದಿನ ಹೆಚ್ಚುವರಿಯಾಗಿ ನೀಡಿದರೂ ಅದು ಪ್ರಯೋಜನಕ್ಕೆ ಬರಲಿಲ್ಲ ಎಂದರು.

15.17ಲಕ್ಷ ಗೈರು ಎಂದಿದ್ದಾರೆ. ಯಾವ ರೀತಿ ಗೈರು ಎಂಬ ಸ್ಪಷ್ಟತೆಯಿಲ್ಲ. ನೇರವಾಗಿ ಕಾಂಗ್ರೆಸ್ ಮತಗಳನ್ನೇ ಹುಡುಕಿ ತೆಗೆದಿದ್ದು, ಇದರ ಹಿಂದೆ ಆರ್ ಎಸ್ ಎಸ್ ನವರೇ ನೇರವಾಗಿ ಭಾಗಿಯಾಗಿದ್ದಾರೆ. ಮತಪರಿಷ್ಕರಣೆ ಸರ್ವರ್ ಅನ್ನು ಹೈದರಾಬಾದ್ ಖಾಸಗಿ ಕಂಪನಿಗೆ ನೀಡಿದ್ದಾರೆ. ಎಎಸ್ ಡಿಡಿಒ ಅಡಿಯಲ್ಲಿ ನಾನಾ ಕಾರಣ ನೀಡಿ ಮತದಾನದ ಹಕ್ಕು ಕಸಿದುಕೊಂಡಿದ್ದಾರೆ. 65.45 ಲಕ್ಷ ಮಂದಿ ವರ್ಗಾವಣೆ ಗೊಂಡಿದ್ದಾರೆ ಎಂದಿದ್ದು ಎಲ್ಲಿಗೆ ಹೋಗಿದ್ದಾರೆಂಬುದನ್ನು ಸ್ಪಷ್ಟಪಡಿಸಬೇಕಿದೆ.

2002–25ರ ಅವಧಿಯಲ್ಲಿ 16.4ಲಕ್ಷ ಸಾವನ್ನಪ್ಪಿದ್ದಾರೆ ಎಂದು ಹೇಳಿದ್ದಾರೆ. ಆದರೆ, ನಮ್ಮ ರಾಜ್ಯದ ಜನಸಂಖ್ಯೆ ಮಾಹಿತಿ ಪ್ರಕಾರ ಪ್ರತಿ ವರ್ಷ 4.7ಲಕ್ಷ ದಿಂದ 5 ಲಕ್ಷ ಮಂದಿ ಸಾವನ್ನಪ್ಪುತ್ತಿರುವ ಮಾಹಿತಿಯಿದೆ. ಇದರ ಪ್ರಕಾರ ಹೋದರೆ 98ಲಕ್ಷ ಮಂದಿ ಸಾವನ್ನಪ್ಪಿದ್ದಾರೆ. ಆದರೆ, ಎಸ್‌ಐಆರ್ ನಲ್ಲಿ 16 ಲಕ್ಷ ಕಡಿಮೆ ಹೇಳಿದ್ದೀರಿ. ಇದು ಹೇಗೆ ಸಾಧ್ಯ?, ನಕಲಿ 7ಲಕ್ಷ ಮತದಾರರು ಯಾವ ರೀತಿ ನಕಲಿ ಎಂಬ ಮಾಹಿತಿಯೇ ಇಲ್ಲ. ಹೀಗೆ ಅಸ್ಪಷ್ಟತೆಯಿಂದ ಕೂಡಿದ ಎಸ್ ಐಆರ್ ಇದಾಗಿದೆ ಎಂದು ಹೇಳಿದರು.

ಎಎಸ್ ಡಿಡಿಒ ದೂ ಕಾಪಿ ನಮಗೆ ಕೊಟ್ಟಿಲ್ಲ. ಮೈಸೂರಿನಲ್ಲಿ 70 ಸಾವಿರ ಒಂದೇ ಕೋಮಿನ ಮತದಾರರ ತೆಗೆಯುವ ಕೆಲಸ ಆಗುತ್ತಿದೆ. ಶೇ.20ರಷ್ಟು ಮತದಾರರನ್ನು ತೆಗೆದಿದ್ದಾರೆ. ಬೆಂಗಳೂರು ಒಂದರಲ್ಲೇ 45 ರಷ್ಟು ಮತದಾರರ ತೆಗೆದಿದ್ದಾರೆ.ಮೈಸೂರಲ್ಲಿ ಉಡುಪಿಯಲ್ಲಿ ಬಿಜೆಪಿ ಇರುವ ಕಾರಣಕ್ಕೆ ಶೇ.5ರಷ್ಟು ಮಾತ್ರ ತೆಗೆಯಲಾಗಿದೆ. ಹೀಗಾಗಿ ರಾಜ್ಯ ಸರ್ಕಾರ ಎಸ್‌ಐಆರ್ ಪ್ರಕ್ರಿಯೆ ವಿರುದ್ಧ ಸುಪ್ರೀಂಕೋರ್ಟ್ ಗೆ ಹೋಗುವ ಕೆಲಸ ಮಾಡಬೇಕಿದೆ ಎಂದರು.

ಕಾಂಗ್ರೆಸ್ ಸಮಿತಿ ನಗರಾಧ್ಯಕ್ಷ ಮೂರ್ತಿ, ಪ್ರಧಾನ ಕಾರ್ಯದರ್ಶಿ ಗಿರಿಶ್, ಜಿಲ್ಲಾ ಕಾಂಗ್ರೆಸ್ ಸಮಿತಿ ಮಾದ್ಯಮ ವಕ್ತಾರ ಮಹೇಶ್, ಗೋಪಿನಾಥ್, ಚಂದ್ರು, ಮಹದೇವಸ್ವಾಮಿ, ಒಬಿಸಿ ಘಟಕದ ವಿನೋದ್ ಸುದ್ದಿಗೋಷ್ಠಿಯಲ್ಲಿದ್ದರು.

### ಎರಡು ಕ್ಷೇತ್ರದಲ್ಲೂ ಮತದಾರ

ನಮ್ಮ ಪಕ್ಷದ ಕಾರ್ಯಕರ್ತರಾದ ಎಚ್.ಎನ್.ಹೇಮಂತಕುಮಾರ್ ಎರಡು ಕ್ಷೇತ್ರದಲ್ಲಿ ಮತದಾರರ ಗುರುತಿನ ಚೀಟಿ ಹೊಂದಿದ್ದರು. ಇದರಲ್ಲಿ ಈ ಸಾರಿ ಚಾಮರಾಜ ಕ್ಷೇತ್ರ 332 ಅರ್ಜಿ ಬರೆದು ಕೊಟ್ಟಿದ್ದಾರೆ. ಬೆಳವಾಡಿ ಗ್ರಾಮದ 72 ಕ್ರಮಸಂಖ್ಯೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅರ್ಜಿ ಪಡೆದು ವಾಪಾಸ್ ಕೊಡದಿದ್ದರೂ ಅವರ ಹೆಸರಿನಲ್ಲಿ ಮತದಾರರ ಚೀಟಿ ಬಂದಿದೆ. ಇದು ಹೇಗೆ ಸಾಧ್ಯವಾಯಿತು. ಇದೇ ಮಾದರಿಯಲ್ಲಿ ಅನೇಕರು ಬದುಕಿದ್ದರೂ ಸಾಯಿಸುವ ಕೆಲಸ ಆಗಿದೆ ಎಂದು ಲಕ್ಷ್ಮಣ್ ಹೇಳಿದರು.

### 12ವರ್ಷದಿಂದ ಏನೂ ಆಗಿಲ್ಲ

ಮೈಸೂರು: ಕೇಂದ್ರದಲ್ಲಿ ಬಿಜೆಪಿ ಬಂದೂ 12 ವರ್ಷ ಆಗಿದೆ. ರಾಜಮನೆತನ ಎಂಬ ಕಾರಣಕ್ಕೆ ಇಲ್ಲಿನ ಜನರು ಬಿಜೆಪಿ ಬೆಂಬಲಿಸಿಕೊಂಡು ಬಂದಿದ್ದಾರೆ. ಆದರೆ, ಇಲ್ಲಿನ ಸಂಸದರು ಮೈಸೂರಿನ ವಿಮಾನ ನಿಲ್ದಾಣದಲ್ಲಿ ಕೇಂದ್ರ ವಿಮಾನಯಾನ ಸಚಿವರ ಸಭೆ ನಡೆಸಿದ ಉದ್ದೇಶ ಏನೆಂದು ಬಹಿರಂಗ ಪಡಿಸಲಿ. ಸುಮ್ಮನೆ ಮುಂದೆ ಅಭಿವೃದ್ಧಿ ಆಗಲಿದೆ ಎಂದು ಹೇಳುವುದಕ್ಕೆ? ರನ್ ವೇ ವಿಸ್ತರಣೆಗೆ 320ಕೋಟಿ ರೂ. ರಾಜ್ಯ ಸರ್ಕಾರ ಕೊಟ್ಟಿದೆ. ಕೇಂದ್ರ ಬಿಜೆಪಿ ನಯಾಪೈಸೆ ಕೊಟ್ಟಿಲ್ಲ. ಚೆನ್ನೈ, ಹೈದರಾಬಾದ್ ಎರಡು ವಿಮಾನ ಬಿಟ್ಟರೆ ಎಲ್ಲವೂ ನಿಂತೂ ಹೋಗಿದೆ. ಸುಮ್ಮನೆ ಪ್ರಚಾರ ಬಿಟ್ಟು ದಸರೆ ವೇಳೆಯಲ್ಲಾದರೂ ಹೆಚ್ಚುವರಿ ವಿಮಾನ ತರುವ ಕೆಲಸ ಸಂಸದರು ಮಾಡಲಿ ಎಂದು ಲಕ್ಷ್ಮಣ್ ಕಿಡಿಕಾರಿದರು.

### ಕಾವೇರಿ ವಿಚಾರವಾಗಿ ಸೋಮಣ್ಣ ಮಾತನಾಡಲಿ

ಮೈಸೂರು: ಕಾವೇರಿ ನೀರು ಹಂಚಿಕೆ ಪ್ರಾಧಿಕಾರ ಕೇಂದ್ರ ಜಲಶಕ್ತಿ ಇಲಾಖೆ ಅಡಿಗೆ ಬರುತ್ತದೆ. ಹೀಗಾಗಿ ಕೇಂದ್ರದ ಸಚಿವರಾದ ವಿ.ಸೋಮಣ್ಣ ರಾಜ್ಯದ ಪರವಾಗಿ ಮಾತನಾಡುವ ಕೆಲಸ ಮಾಡಬೇಕಿತ್ತು ಎಂದು ಲಕ್ಷ್ಮಣ್ ತಿಳಿಸಿದರು.

ಕಾವೇರಿ ವಿಚಾರವಾಗಿ 9 ಸಾವಿರ ಕ್ಯೂಸೆಕ್ಸ್ ನೀರು ಬಿಡಿ ಎಂದಿರುವುದು ಅವೈಜ್ಞಾನಿಕ ಪ್ರಸ್ತುತ 75 ಟಿಎಂಸಿ ನೀರಿನ ಪೈಕಿ 20 ಟಿಎಂಸಿ ನೀರು ಡೆಡ್ ಸ್ಟೋರೆಜ್ ಆಗಿದೆ. 32 ಟಿಎಂಸಿ ಕುಡಿಯುವುದಕ್ಕೆ ಬೇಕು. ಅಲ್ಲದೆ, ಪ್ರಸ್ತುತ 35 ಟಿಎಂಸಿ ಮಳೆ ಬಿದ್ದಿದ್ದು, ಕೇವಲ 35ಟಿಎಂಸಿ ನೀರಿನ ಹಂಚಿಕೆ ಬಗ್ಗೆ ಮಾತ್ರ ಚರ್ಚೆ ಮಾಡಬೇಕಿತ್ತು. ನಾವು ಬಳಕೆಗೆ ಉಳಿಸಿಕೊಂಡಿರುವ ನೀರಿನಲ್ಲೂ ಪಾಲು ಕೇಳಲು ಬಿಡಬಾರದಿತ್ತು. ಬಿಜೆಪಿ ರಾಜಕೀಯ ಬಿಟ್ಟು ಕೇಂದ್ರ ಜಲಶಕ್ತಿ ಕೇಂದ್ರದ ಮೂಲಕ ನಿಯೋಗ ಕಳುಹಿಸಿ ವಾಸ್ತವ ಅರಿಯುವ ಕೆಲಸ ಮಾಡಲಿ ಎಂದರು. ರಾಹುಲ್ ಗಾಂಧಿ ಕುರಿತು ಮಾತನಾಡುವ ಸೋಮಣ್ಣಗೆ ಕನಿಷ್ಠ ಸಾಮಾನ್ಯ ಪ್ರಜ್ಞೆ ಸಹ ಇಲ್ಲ. ಹಿಂದೆ ಕುಮಾರ ಸ್ವಾಮಿಯವರು ಹೇಳಿದ ಒಂದೇ ಒಂದು ಮಾತಿಗೆ ತೆಪ್ಪಗಾದರೂ ಈಗ ಸುಮ್ಮನೆ ಸುಳ್ಳು ಹೇಳುತ್ತಿ ದ್ದಾರೆಯೇ ವಿನಃ ರಾಜ್ಯಕ್ಕೆ ಯಾವುದೇ ಯೋಜನೆ ತರುವ ಕೆಲಸ ಮಾಡಿಲ್ಲ. ಮೊದಲು ಅದನ್ನು ಮಾಡಿ ಎಂದರು.

> ಸಚಿವ ನಾಗೇಂದ್ರ ರಾಜೀನಾಮೆಗೆ ಬಿಜೆಪಿ ಆಗ್ರಹಿಸಿ ಸದನ ನಡೆಸಲು ಬಿಡದಿರುವುದು ದೊಡ್ಡ ದುರಂತ. ಏಕೆಂದರೆ ಕೇಂದ್ರ ಬಿಜೆಪಿಯಲ್ಲಿ 74 ಮಂದಿ ಪೈಕಿ ಅದರಲ್ಲೂ 33 ಸಚಿವರ ವಿರುದ್ಧ ಕ್ರಿಮಿನಲ್ ಕೇಸ್, ಮೂವರ ಮೇಲೆ ಕೊಲೆ ಕೇಸ್, ನಾಲ್ಕು ಮಂದಿ ಕೊಲೆಯತ್ನ, ಐವರು ಕಮ್ಯೂನಲ್ ಡಿಸಾರ್ಟ್ ಮೇಲಿದೆ. ಮೊದಲು ಅವರ ರಾಜೀನಾಮೆ ಪಡೆಯಿರಿ ಅನಂತರ ನಾಗೇಂದ್ರ ರಾಜೀನಾಮೆ ನೀಡುತ್ತಾರೆ.
>
> –ಎಂ.ಲಕ್ಷ್ಮಣ್ ಕೆಪಿಸಿಸಿ ವಕ್ತಾರ

### ಸರ್ಕಾರದ ವಿರುದ್ಧ ಪಾದಯಾತ್ರೆ

ಒತ್ತಾಯಿಸಲು ಬಿಜೆಪಿ ಈ ಪಾದಯಾತ್ರೆಯನ್ನು ಬಳಸಿಕೊಳ್ಳಲಿದೆ. ಭ್ರಷ್ಟ ಸಚಿವ ನಾಗೇಂದ್ರ ಅವರನ್ನು ಸಂಪುಟದಿಂದ ಕೈಬಿಡಬೇಕೆಂಬ ಬೇಡಿಕೆಯೊಂದಿಗೆ ಪ್ರಾರಂಭಿಸಿ, ಈ ಎಲ್ಲಾ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಲು ನಾವು ನಿರ್ಧರಿಸಿದ್ದೇವೆ ಎಂದು ತಿಳಿಸಿದರು.

### ದೋಸ್ತಿ ಜೆಡಿಎಸ್ ಬೆಂಬಲ

ಮೀಸಲಾತಿಯೊಂದಿಗೆ ಆಟವಾಡುತ್ತಿದೆ. ಒಬಿಸಿ ಮೀಸಲಾತಿ ಬಗ್ಗೆ ಸ್ಪಷ್ಟವಾದ ನಿಲುವು ತೆಗೆದುಕೊಳ್ಳುವಲ್ಲಿ ವಿಫಲವಾಗಿದೆ. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ವಾಲ್ಮೀಕಿ ಸಮುದಾಯಕ್ಕೆ ಮೀಸಲಾತಿಯನ್ನು ಶೇಕಡಾ ಮೂರರಿಂದ ಏಳಕ್ಕೆ ಹೆಚ್ಚಿಸಿತ್ತು. ಪಾದಯಾತ್ರೆಯ ಸಮಯದಲ್ಲಿ ಬಿಜೆಪಿ ಉತ್ತರ ಕರ್ನಾಟಕ ಮತ್ತು ನೀರಾವರಿ ಯೋಜನೆಗಳ ಸಮಸ್ಯೆಗಳನ್ನು ಸಹ ಎತ್ತುತ್ತದೆ ಎಂದು ವಿಜಯೇಂದ್ರ ತಿಳಿಸಿದರು.

### ದರ್ಶನ್‌ಗೆ ಸಂಕಷ್ಟ

ಮಾಫಿ ಸಾಕ್ಷಿ ಅರ್ಜಿಯನ್ನು ಬೆಂಗ ಳೂರಿನ 59ನೇ ಸಿಸಿಹೆಚ್ ಕೋರ್ಟ್ ಅಂಗೀಕರಿಸಿದೆ. ಆರೋಪಿ ಪ್ರದೋಷ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಕೋರ್ಟ್, ಪ್ರದೋಶ್ ಅರ್ಜಿಯನ್ನು ಅಂಗೀಕರಿಸಿದ್ದು ಪ್ರದೋಷ್ ನನ್ನು ಸಾಕ್ಷಿಯನ್ನಾಗಿ ಪರಿಗಣಿಸಿದೆ. ಅಲ್ಲದೆ ಪ್ರದೋಶ್ ಗೆ ಕೆಲ ಷರತ್ತು ವಿಧಿಸಿರುವ ಕೋರ್ಟ್, ಸಂಪೂರ್ಣ ಸತ್ಯಾಂಶಗಳನ್ನು ಬಹಿರಂಗಪಡಿಸ ಬೇಕು. ಮುಚ್ಚಿಟ್ಟರೆ ಮಾಫಿ ಸಾಕ್ಷಿ ಯಿಂದ ಆರೋಪಿಯನ್ನಾಗಿ ಮಾಡ ಲಾಗುವುದು ಎಂದು ಹೇಳಿದೆ. ಇನ್ನು ಪ್ರಕ್ರಿಯೆ ಮುಗಿಯುವವರೆಗೂ ಪ್ರದೋಶ್ ಜೈಲಿನಲ್ಲಿಯೇ ಇರಬೇಕು. ಷರತ್ತು ಉಲ್ಲಂಗಿಸಿ ಸುಳ್ಳು ಸಾಕ್ಷಿ ಹೇಳಿದರೇ ಕೇಸ್ ದಾಖಲಿಸಲಾಗುವುದು ಎಂದು ನ್ಯಾಯಾಲಯ ತಿಳಿಸಿದೆ.

### 28ಟಿಎಂಸಿಗೆ ತ.ನಾಡು ಬೇಡಿಕೆ

ಬಳಿಕ ಮಾತನಾಡಿದ ಗೌರವ್ ಗುಪ್ತಾ, ಒಂದೂವರೆ ಗಂಟೆಗಳ ಕಾಲ ಸಭೆ ಮಾಡಿದ್ದೇವೆ. ನಿನ್ನೆ ಕೊಟ್ಟಿರುವ ಶಿಫಾರಸು ಪಾಲಿಸಲು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಸೂಚಿಸಿದೆ.

ಈ ಬೆಳವಣಿಗೆಯನ್ನ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಗಮನಕ್ಕೆ ತರುತ್ತೇವೆ. ಕಾನೂನು ಹೋರಾಟದ ಬಗ್ಗೆ, ಕಾನೂನು ತಂಡ ನಿರ್ಧಾರ ಮಾಡಲಿದೆ ಎಂದು ಗೌರವ್ ಗುಪ್ತಾ ಹೇಳಿದರು.

ಸಭೆಯಲ್ಲಿ ರಾಜ್ಯದಿಂದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ ಹಾಗೂ ಕಾವೇರಿ ನೀರಾವರಿ ನಿಗಮ ಎಂಡಿ ಮಹೇಶ್ ಭಾಗಿಯಾಗಿದ್ದರು. ತಮಿಳುನಾಡಿನಿಂದ ನೀರಾವರಿ ಕಾರ್ಯದರ್ಶಿ ಪ್ರಶಾಂತ್, ಕಾವೇರಿ ತಾಂತ್ರಿಕ ಸಮಿತಿ ಅಧ್ಯಕ್ಷ ಸುಬ್ರಹ್ಮಣ್ಯಂ ಅವರು ಭಾಗಿಯಾಗಿದ್ದರು.

## ಕಸಾಪ; ಸಾಹಿತ್ಯಿಕ, ಸಾಂಸ್ಕೃತಿಕ, ಆರ್ಥಿಕ ಗಟ್ಟಿಗೊಳಿಸಲು ಬದ್ಧ

ಮೈಸೂರು: ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾದ ಮೇಲೆ ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಆರ್ಥಿಕವಾಗಿ ಗಟ್ಟಿಗೊಳಿಸುವ ದಿಸೆಯಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುವೆ ಎಂದು ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಸಿ.ಸೋಮಶೇಖರ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಭರವಸೆ ನೀಡಿದರು.



ನಾಡು–ನುಡಿ ಸಮ್ಮೇಳನ, ಮಕ್ಕಳ ಸಮ್ಮೇಳನ, ಲೇಖಕಿಯರ ಸಮ್ಮೇಳನ ಆಯೋಜಿಸುವ ಮೂಲಕ ಕಸಾಪಕ್ಕೆ ವೈಭವ ಮರುಕಳಿಸುವಂತೆ ಶ್ರಮಿಸುವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕನ್ನಡವೆಂದರೆ ಮಮತೆ ಹಾಗೂ ನಿಷ್ಠೆ. ಇದಕ್ಕೆ ಬದ್ಧನಾಗಿರುವೆ. ಮುಖ್ಯವಾಗಿ ಕಸಾಪ ಅಧ್ಯಕ್ಷನಾದ ಮೇಲೆ ಜನ ಸಂವೇದನೆಗೆ ಹಾಗೂ ಜನಸ್ಪಂದನೆಗೆ ಆದ್ಯತೆ ನೀಡುವೆ ಎಂದು ತಿಳಿಸಿದರು. ಸಂಸ್ಕೃತಿ ಮತ್ತು ಪ್ರಗತಿ ಒಂದೇ ನಾಣ್ಯದ ಎರಡು ಮುಖಗಳು. ಸಂಸ್ಕೃತಿಯು ಪ್ರಗತಿಯ ಆಧಾರಸ್ತಂಭ. ಹೀಗಾಗಿ ಕನ್ನಡದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಕನ್ನಡದ ಪ್ರಗತಿಗೆ ಕಟಿಬದ್ಧನಾಗಿರುವೆ ಎಂದು ಹೇಳಿದರು.

ಕನ್ನಡದಲ್ಲಿ ಕಲಿತು ಕೆಎಲ್‌ಇ ಸಂಸ್ಥೆಯಲ್ಲಿ ವಾಣಿಜ್ಯ ಶಾಸ್ತ್ರ ಉಪನ್ಯಾಸಕನಾಗಿ ಮೂರು ವರ್ಷಗಳವರೆಗೆ ಕಾರ್ಯ ನಿರ್ವಹಿಸಿದ ನಂತರ ಯುಪಿಎಸ್ ಸಿ ಪರೀಕ್ಷೆಗಳನ್ನು ಕನ್ನಡದಲ್ಲೇ ಬರೆದು ಪಾಸಾಗಿ ಅಸಿಸ್ಟಂಟ್ ಕಲೆಕ್ಟರ್ ಹುದ್ದೆಗೆ ಆಯ್ಕೆ ಆದೆ.ಅದೇ ಸಂದರ್ಭದಲ್ಲಿ ನಾನು ಕರ್ನಾಟಕ ಲೋಕ ಸೇವಾ ಆಯೋಗ ದಿಂದ ಅಸಿಸ್ಟೆಂಟ್ ಕಮೀಷನರ್ ಆಗಿ ಆಯ್ಕೆ ಆದೆ.. ಕನ್ನಡ ನಾಡು ನುಡಿ ಸಂಸ್ಕೃತಿ ಮೇಲಿನ ಅಭಿಮಾನದಿಂದ ಕೇಂದ್ರ ಸರ್ಕಾರ ಸೇವೆಯನ್ನು ಬಿಟ್ಟು ಕರ್ನಾಟಕ ಆಡಳಿತ ಸೇವೆಯಲ್ಲಿಯೇ ಮುಂದುವರೆದೆ.ತುಮಕೂರಿನ ಜಿಲ್ಲಾಧಿಕಾರಿಯಾಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕನಾಗಿ ದುಡಿದೆ. ಅಲ್ಲದೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದೆ. ಕನ್ನಡದಲ್ಲಿಯೇ ಸಹಿ ಮಾಡುತ್ತಿದ್ದು, ಸಹೋದ್ಯೋಗಿಗಳು ಇಂಗ್ಲಿಷಿನಲ್ಲಿ ಟಿಪ್ಪಣಿ ತಂದರೆ ಹಿಂದಿರುಗಿಸಿ ಕನ್ನಡದಲ್ಲಿ ಟಿಪ್ಪಣಿ ಸಲ್ಲಿಸಲು ಹೇಳುತ್ತಿದ್ದೆ.

ಇದರಿಂದ ಕನ್ನಡ, ಸಂಸ್ಕೃತಿ ಹಾಗೂ ಸಾಹಿತ್ಯಕ್ಕೆ ಸಂಬಂಧಪಟ್ಟ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಯಿತು ಎಂದು ವಿವರಿಸಿದರು.

ನಿವೃತ್ತ ಅಧಿಕಾರಿಗೆ ಸಾಹಿತ್ಯ ಒಲವು ಇರಬಾರದೆ? ಸಾಹಿತ್ಯ ಮತ್ತು ಆಡಳಿತ ಹಾಲ ತೊರೆಗೆ ಬೆಲ್ಲದ ಕೆಸರು ಇದ್ದಂತೆ. ಅಧಿಕಾರಿಯಾಗಿ ನಿವೃತ್ತನಾದರೂ ಸಾಹಿತಿಯಾಗಿ ಅನೇಕ ಕೃತಿಗಳನ್ನು ರಚಿಸಿರುವೆ. ಇದರಿಂದ ಆಡಳಿತ ಕೌಶಲ ಹಾಗೂ ಸಾಹಿತ್ಯ ಪ್ರೇಮವುಳ್ಳವನಾಗಿದ್ದು ಕಸಾಪಕ್ಕೆ ಆರ್ಥಿಕ ಭದ್ರತೆ ಒದಗಿಸುವೆ ಎಂದು ಪ್ರತಿಪಾದಿಸಿದರು.ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ನಾಗಿ ಕನ್ನಡ ಅಸ್ಮಿತೆಗೆ ಆದ್ಯತೆ ನೀಡುತ್ತ,ಗಡಿ ಭಾಗದಲ್ಲಿ ಸಂಸ್ಕೃತಿ ಪ್ರಸಾರಕ್ಕೆ ಪ್ರೋತ್ಸಾಹ ನೀಡುತ್ತಾ ಗಡಿನಾಡ ಶಾಲೆಗಳ ಕುರಿತು ಸದಾ ಕಾಳಜಿ ವಹಿಸಿದ್ದೇನೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಡಿ.ಎನ್.ಲೋಕಪ್ಪ, ಡಾ. ಎಂಜಿಆರ್ ಅರಸು, ಮ.ಗು.ಸದಾನಂದಯ್ಯ, ಡಾ. ರಘುರಾಮ ವಾಜಪೇಯಿ, ಡಾ.ಕೆ.ಬಿ.ಲಿಮನಗರಾಜು, ಜಯಪ್ಪ ಹೊನ್ನಾಳಿ, ನೂರು ಮಹ್ಮದ್ ಮರ್ಚೆಂಟ್, ಶೋಭಾ ಜಯಪ್ರಕಾಶ್, ಕೆ.ವಿ.ಮಲ್ಲೇಶ್, ಎ.ಪಿ.ವಿರೂಪಾಕ್ಷಪ್ಪ, ಡಿ.ಜಿ.ಸೋಮಶೇಖರ ಮೂರ್ತಿ, ಲಕ್ಷ್ಮಿ ಗೌಡರ, ಮೈ.ನಾ.ಲೋಕೇಶ್, ಎಂ.ಬಿ.ಸಂತೋಷ್ ಹಾಗೂ ತೀರ್ಥಪ್ರಸಾದ್ ಹಾಜರಿದ್ದರು.

## ಪುನೀತ್ ಕೆರೆಹಳ್ಳಿ ಪ್ರತಿಭಟನೆ, ಬಂಧನ

ಮೈಸೂರು: ಕಸಾಯಿಖಾನೆಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದ ಪುನೀತ್ ಕೆರೆಹಳ್ಳಿ ನೇತೃತ್ವದ ಹಿಂದೂ ಸಂಘಟನೆಗಳ ಕಾರ್ಯ ಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಬಿಡುಗಡೆಗೊಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಸೇರಿದ ಕಾರ್ಯ ಕರ್ತರು ಘೋಷಣೆಗಳನ್ನು ಕೂಗಿದರು. ಪುನೀತ್ ಕೆರೆಹಳ್ಳಿಯಲ್ಲಿ ಮಾತನಾಡಿ, ನಾವು ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತೇವೆ. ಆದರೆ, ಜಿಲ್ಲಾಧಿಕಾರಿ ಹಾಗೂ ನಗರ ಪೊಲೀಸ್ ಆಯುಕ್ತರು ಸ್ಥಳಕ್ಕೆ ಆಗಮಿಸಿ ಮೈಸೂರಿನಲ್ಲಿ ನಡೆಯುತ್ತಿರುವ ಕಸಾಯಿಖಾನೆಗಳ ವಿರುದ್ಧ ಯಾವ ರೀತಿಯ ಕ್ರಮವಹಿಸುತ್ತಾರೆ ಎಂದು ಸ್ಪಷ್ಟಪಡಿ ಸಬೇಕು ಎಂದು ಒತ್ತಾಯಿಸಿದರು.

ಎಲ್ಲರೂ ಗುಂಪಾಗಿ ನಿಂತು, "ಯಾರೇ ಬರಲಿ ಒಗ್ಗಟ್ಟಿರಲಿ' ಎಂದು ಘೋಷಣೆ ಕೂಗಿದರು. ನಾವು ಹಿಂದು ತ್ವಕ್ಕಾಗಿ ಸಾಯಲು ಸಿದ್ಧ, ಬಂಧನಕ್ಕೆ ಹೆದರುವುದಿಲ್ಲ ಎಂದರು. ಈ ವೇಳೆ ಪೊಲೀಸರು ಪ್ರದೀಪ್ ಕೆರೆಹಳ್ಳಿ ಯನ್ನು ಬಂಧಿಸಲು ಮುಂದಾದರು. ಹಿಂದೂತ್ವ ಕಾರ್ಯ ಕರ್ತರು ಪುನೀತ್ ಕೆರೆಹಳ್ಳಿಯಲ್ಲಿ ಸುತ್ತುವರಿದು ಬಂಧಿ ಸಲು ಬಿಡಲಿಲ್ಲ. ಸ್ಥಳದಲ್ಲೇ ಮಲಗಿ ಆಕ್ರೋಶ ವ್ಯಕ್ತಪಡಿಸಿ ದರು. ವಂದೇ ಮಾತರಂ, ಪೊಲೀಸ್ ದೌರ್ಜನ್ಯಕ್ಕೆ ಧಿಕ್ಕಾರ ಘೋಷಣೆ ಕೂಗಿದರು. ಪೊಲೀಸರು ಒಬ್ಬೊಬ್ಬ ರನ್ನೇ ಎಳೆದೊಯ್ದರು. ಈ ವೇಳೆ ನೂಕಾಟ ತಳ್ಳಾಟ ನಡೆಯಿತು. ಪುನೀತ್ ಕೆರೆಹಳ್ಳಿ ಮಾತನಾಡಿ, ಶಾಂತಿಯು



ತವಾಗಿ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ಆಯುಕ್ತರಿಗೆ ಮನವಿ ನೀಡಲು ಬಂದವರನ್ನು ಯಾವುದೇ ಮಾತುಕತೆ ನಡೆಸದೆ ವಶಕ್ಕೆ ಪಡೆದಿದ್ದಾರೆ. ನಮಗೆ ಕರೆ ಹಾಕಿ ಸವಾಲು ಹಾಕಿದವನ ವಿರುದ್ಧ ಕ್ರಮವಹಿಸಿಲ್ಲ. ಮುಂದಿನ ದಿನಗಳಲ್ಲಿ ಮೈಸೂರಿಗೆ ಸಹಸ್ರಾರು ಕಾರ್ಯಕರ್ತರೊಂ ದಿಗೆ ಆಗಮಿಸುತ್ತೇವೆ. ಮೈಸೂರು ಭಾಗದಿಂದ ವ್ಯಕ್ತಿ ಯೊಬ್ಬ ಕರೆಮಾಡಿ ಗೋಹತ್ಯೆ ಕುರಿತು ಪ್ರಚೋದನಾಕಾರಿ ಹೇಳಿಕೆ ನೀಡಿದ್ದಾರೆ. ಈ ಬಗ್ಗೆ ಅಧಿಕಾರಿಗಳು ನಮ್ಮ ಮನವಿ ಪಡೆದು, ಸ್ಪಷ್ಟನೆ ನೀಡದಿದ್ದರೆ ನಾವು ಮೈಸೂರು ಬಿಟ್ಟು ತೆರಳುವುದಿಲ್ಲ. ಮಂಡಿಮೊಹಲ್ಲಾದಲ್ಲಿರುವ ಖಾಸಾಯಿ ಖಾನೆ ಸ್ಥಳಾಂತರಕ್ಕೆ ಈ ಭಾಗದ ಶಾಸಕರು ಸ್ಪಂದಿಸುತ್ತಿಲ್ಲ ಎಂಬ ಆರೋಪವಿದೆ. ಹಿಂದೂ ಕಾರ್ಯಕರ್ತರ ಭಾವನೆಗೆ ಬೆಲೆ ಕೊಡುವ ಕೆಲಸ ಮಾಡಬೇಕೆಂದು ಆಗ್ರಹಿಸಿದರು.

## ಶಿಕ್ಷಕಿ ಹುದ್ದೆ ಆಯ್ಕೆ ವೇಳೆ ನಿಯಮ ಪಾಲಿಸಿದ್ದೇವೆ

**ಎಚ್.ಡಿ.ಕೋಟೆ:** ತಾಲೂಕಿನ ಅರಳಿಕಟ್ಟೆ ಹಾಡಿಯಲ್ಲಿ ಖಾಲಿಯಿದ್ದ ಅಂಗನವಾಡಿ ಶಿಕ್ಷಕಿಯರ ಹುದ್ದೆಯ ಭರ್ತಿ ವೇಳೆ ನಿಯಮಾನುಸಾರ ಕ್ರಮವಹಿಸಿ ಆಯ್ಕೆ ಪ್ರಕ್ರಿಯ ಪೂರ್ಣಗೊಳಿಸಿದ್ದೇವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸ್ಪಷ್ಟನೆ ನೀಡಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಯೋಜನಾಧಿಕಾರಿ ದೀಪಾ,

ಶಿಕ್ಷಕಿ ಹುದ್ದೆ ಆಯ್ಕೆಯಲ್ಲಿ ನಮ್ಮನ್ನು ಪರಿಗಣಿಸದೆ ಮತ್ತೊಬ್ಬರಿಗೆ ಮಣೆ ಹಾಕಲಾಗಿದೆ ಎಂದು ಇತ್ತೀಚೆಗೆ ಮಾಧ್ಯಮದ ಮುಂದೆ ಆರೋಪಿಸಿ ವರದಿ ಮಾಡಿಸಲಾಗಿತ್ತು. ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಆಯ್ಕೆ ಪ್ರಕ್ರಿಯೆಯನ್ನು ದಿ.ನ.8.2025 ರಂದು ಆಯ್ಕೆ ಪ್ರಕ್ರಿಯೆ ಪ್ರಾರಂಭಿಸಿ ಅರ್ಜಿ ಕರೆಯಲಾಗಿತ್ತು. ಅದರಂತೆ ಡಿ08.2025ರವರೆಗೆ ಅಂತರ್ಜಾಲದಲ್ಲಿ ಆಕಾಂಕ್ಷಿಗಳು ಅರ್ಜಿ ಸಲ್ಲಿಸಿದ್ದರು. ಅರ್ಜಿ ಸ್ವೀಕೃತಿ ದಿನಾಂಕ ಮುಗಿದ ನಂತರ 14 ಅರ್ಜಿಗಳು ಸ್ವೀಕೃತಗೊಂಡಿದ್ದವು. ಕಂದಾಯ ಇಲಾಖೆಯ ದಾಖಲೆಗಳಾದ ವಾಸಸ್ಥಳ ದೃಢೀಕರಣ, ಜಾತಿ ಪ್ರಮಾಣ ಪತ್ರ ಹಾಗೂ ಪಿಯು ಬೋರ್ಡ್ನ ದ್ವಿತೀಯ ಪಿಯುಸಿ ಅಂಕಪಟ್ಟಿ ಪರಿಗಣಿಸಿ ದೀಪಿಕಾ ಎಂಬ ಅಭ್ಯರ್ಥಿಯನ್ನು ಆಯ್ಕೆ ಮಾಡಿದ್ದೇವೆ ಹೊರತು ಅನ್ಯಮಾರ್ಗ ಅನುಸರಿಸಿಲ್ಲ ಎಂದಿದ್ದಾರೆ. ಅಂತಿಮವಾಗಿ ಆಯ್ಕೆಯಾಗಿರುವ ಅಭ್ಯರ್ಥಿ ದ್ವಿತೀಯ ಪಿಯುಸಿಯಲ್ಲಿ ಶೇ.80 ತೆಗೆದಿದ್ದಾರೆ. ಅಂತರ್ಜಾಲದ ಮೂಲಕ ಅರ್ಜಿಯೇ ನಮ್ಮ ಲಾಗಿನ್ ಗೆ ಬಂದಿಲ್ಲ ಎಂದು ಅಧಿಕಾರಿ ಹೇಳುತ್ತಿದ್ದಾರೆ ಎಂದು ಕೆಲ ವ್ಯಕ್ತಿಗಳು ಆರೋಪಿಸಿ ವಿಡಿಯೋ ಮೂಲಕ ಸುದ್ದಿ ಮಾಧ್ಯಮದಲ್ಲಿ ಬಿತ್ತರಿಸಲಾಗಿದೆ.

ರೇಣುಕಾ ಎಂಬ ಅಭ್ಯರ್ಥಿ ದ್ವಿತೀಯ ಪಿಯುಸಿಯಲ್ಲಿ ಶೇ.43 ಪಡೆದಿದ್ದಾರೆ. ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿದ ನಂತರ ಇದೇ ವರ್ಷ ಫೆ.16ರಿಂದ ಜೂ. 23ರವರೆಗೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು. ಆಯ್ಕೆ ಸಂಬಂಧ ಯಾವುದೇ ಆಕ್ಷೇಪಣೆ ಬಂದಿಲ್ಲ. ಸತ್ಯ ಮರೆಮಾಚಿ ಇದೀಗ, ನಮ್ಮ ಮೇಲೆ ಮಾಡಿರುವ ಆರೋಪ ನಿರಾಧಾರ. ಇಲಾಖೆಯ ನಿಯಮಾವಳಿ ಪ್ರಕಾರ ಪಾರದರ್ಶಕವಾಗಿ ನೇಮಕ ಪ್ರಕ್ರಿಯೆ ನಡೆದಿದೆ ಎಂದು ತಿಳಿಸಿದ್ದಾರೆ.

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸ್ಪಷ್ಟನೆ**

Department of Women and Child Development

### ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ತಾಕೀತು

## ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸಮರ್ಪಕ ಸೇವೆ ಒದಗಿಸಿ

ಚಾಮರಾಜನಗರ, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಸಿಮ್ಸ್), ಜಿಲ್ಲಾ ಆಸ್ಪತ್ರೆ ಸೇರಿದಂತೆ ಜಿಲ್ಲೆಯ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಬಡರೋಗಿಗಳಿಗೆ ಸಮರ್ಪಕ ವೈದ್ಯಕೀಯ ಚಿಕಿತ್ಸೆ ಒದಗಿಸುವಂತೆ ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ತಾಕೀತು ಮಾಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಕೇಂದ್ರ ಪುರಸ್ಕೃತ ಯೋಜನೆಗಳ ಜಿಲ್ಲಾಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಾಮಾನ್ಯವಾಗಿ ಸರ್ಕಾರಿ ಆಸ್ಪತ್ರೆಗಳಿಗೆ ಬರುವವರು ಬಡವರಾಗಿದ್ದು, ವೈದ್ಯಕೀಯ ಚಿಕಿತ್ಸಾ ಸೇವೆ ಸಕಾಲಕ್ಕೆ ದೊರೆಯದಿರುವ ಬಗ್ಗೆ ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಬಂದಿವೆ. ವೈದ್ಯರು ಆಸ್ಪತ್ರೆಗಳಲ್ಲಿ ಲಭ್ಯರಿದ್ದು, ರೋಗಿಗಳಿಗೆ ಸ್ಪಂದಿಸಬೇಕು. ನಿಗದಿತ ಅವಧಿಯಲ್ಲಿ ವೈದ್ಯರು ಕಡ್ಡಾಯವಾಗಿ ಆಸ್ಪತ್ರೆಯಲ್ಲಿಯೇ ಇರಬೇಕು. ರೋಗಿಗಳಿಗೆ ವೈದ್ಯರು ಸಿಗದೆ ಇರುವ ದೂರುಗಳು ಮತ್ತೆ ಕೇಳಿ ಬಂದಲ್ಲಿ ಸಹಿಸುವುದಿಲ್ಲ ಎಂದು ಸಂಸದರು ಎಚ್ಚರಿಕೆ ನೀಡಿದರು.

ವೈದ್ಯಕೀಯ ಕಾಲೇಜಿನ ಡೀನ್ ಅವರು ಪ್ರತಿನಿತ್ಯ ವೈದ್ಯರ ಹಾಜರಾತಿಯನ್ನು ಕಟ್ಟುನಿಟ್ಟಾಗಿ ಪರಿಶೀಲಿಸಬೇಕು. ಕರ್ತವ್ಯದ ಪೂರ್ಣ ಅವಧಿಯಲ್ಲಿ ವೈದ್ಯರು ಇದ್ದು ರೋಗಿಗಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ವೈದ್ಯರ ಗೈರು ಹಾಜರಿಯನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ. ಇನ್ನು ಮುಂದೆ ಕಟ್ಟುನಿಟ್ಟಾಗಿ ವೈದ್ಯರ ಸೇವೆ ದೊರೆಯಬೇಕು ಎಂದು ಸೂಚನೆ ನೀಡಿದರು.

ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಸವಾರರಿಗೆ ತೊಂದರೆಯಾಗದಂತೆ ರಸ್ತೆಯ ಎರಡೂ ಬದಿಯಲ್ಲಿ ಹಾಗೂ ಡಿವೈಡರ್ಗಳಲ್ಲಿ ರಿಫ್ಲೆಕ್ಟರ್ ಹಾಕಬೇಕು. ರಸ್ತೆಗಳು ಕೂಡುವ ಜಂಕ್ಷನ್ ಸ್ಥಳಗಳಲ್ಲಿ ವೃತ್ತ ನಿರ್ಮಿಸಬೇಕು. ಸೈನ್ ಬೋರ್ಡ್ ಗಳನ್ನು ಅಳವಡಿಸಬೇಕು. ರಸ್ತೆಗಳ ಕಟಿಂಗ್ ಕ್ರಾಸ್‌ಗಳಲ್ಲಿ ಮಿರರ್ ಹಾಕಬೇಕು. ಟೋಲ್ ಕಲೆಕ್ಷನ್ ಬಗ್ಗೆ ಸ್ಥಳೀಯರಿಂದ ದೂರುಗಳು ಬರದಂತೆ ನೋಡಿಕೊಳ್ಳಬೇಕು. ಆಧಾರ್ ಕಾರ್ಡ್ ಆಧಾರದಲ್ಲಿ ಸ್ಥಳೀಯರಿಗೆ ಪಾಸ್ ವ್ಯವಸ್ಥೆ ಮಾಡಬೇಕು. ರಾಷ್ಟ್ರೀಯ ಹೆದ್ದಾರಿಗಳ ಬದಿಯಲ್ಲಿರುವ ಶಾಲೆಗಳ ಮುಂಭಾಗ ವಾಹನಗಳ ವೇಗ ತಗ್ಗಿಸಲು ರಸ್ತೆ ಡುಬ್ಬ ನಿರ್ಮಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಕುಡಿಯುವ ನೀರಿನ ಕಾಮಗಾರಿ ಪ್ರಗತಿ



ಪರಿಶೀಲಿಸಿದ ವೇಳೆ ಅಧಿಕಾರಿಗಳು ಮಾಹಿತಿ ನೀಡಿ ಅಮೃತ್ 2.0 ಯೋಜನೆಯಡಿ ಕುಡಿಯುವ ನೀರು ಸರಬರಾಜು ಮಾಡುವ ಪೈಪ್ ಲೈನ್ ಅಳವಡಿಕೆ ಕಾಮಗಾರಿ ಗುಂಡ್ಲುಪೇಟೆ ತಾಲೂಕಿನಲ್ಲಿ ಪೂರ್ಣ ಗೊಂಡಿದೆ. ಚಾಮರಾಜನಗರ ತಾಲೂಕಿನಲ್ಲಿ ಒಂದು ವಾರದೊಳಗೆ ಪೂರ್ಣಗೊಳಿಸಲಾಗುವುದು ಹಾಗೂ ಕೊಳ್ಳೇಗಾಲ ಮತ್ತು ಹನೂರು ತಾಲೂಕುಗಳಲ್ಲಿ ಮುಂದಿನ 15 ದಿನದೊಳಗೆ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದರು.

ಬಳಿಕ ಮಾತನಾಡಿದ ಸಂಸದರು ಹನೂರು ಭಾಗದ ಹಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಅಗತ್ಯವಿರುವ ಗ್ರಾಮಗಳಿಗೆ ಟ್ಯಾಂಕರ್ಗಳಲ್ಲಿ ನೀರು ಸರಬರಾಜು ಮಾಡಬೇಕು. ಜಿಲ್ಲೆಯ ನಗರ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಜನರಿಗೆ ಕುಡಿಯುವ ನೀರಿಗೆ ತೊಂದರೆಯಾಗದಂತೆ ನಿಗಾ ವಹಿಸಬೇಕು. ಗಾಳಿಪುರದಲ್ಲಿ ಕುಡಿಯುವ ನೀರಿಗಾಗಿ 12 ವರ್ಷಗಳ ಹಿಂದೆ ವಾಟರ್‌ಟ್ಯಾಂಕ್ ಕಟ್ಟಿ ಹಾಗೆಯೇ ಬಿಡಲಾಗಿದ್ದು, ಇದರ ಬಳಕೆಯಾಗಿಲ್ಲ. ಇದರಿಂದ ಜನರ ತೆರಿಗೆ ಹಣ ಪೋಲಾಗಿದೆ. ಕುಡಿಯುವ ನೀರು ಸರಬರಾಜು ವಿಚಾರದಲ್ಲಿ ಅಧಿಕಾರಿಗಳು ಯಾವುದೇ ಸಬೂಬು ಹೇಳುವಂತಿಲ್ಲ. ಜನರಿಗೆ ಆದ್ಯತೆ ಮೇರೆಗೆ ಕುಡಿಯುವ ನೀರು ಒದಗಿಸುವಂತೆ ತಿಳಿಸಿದರು.

ಜಿಲ್ಲೆಯ ಕಾಡಂಚಿನ ಪುದೂರು, ಪಾಲಾರ್ ಹಾಗೂ ಆಲಂಬಾಡಿ ಗ್ರಾಮ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಜನರು ಮನೆ ಕಟ್ಟಿಕೊಳ್ಳಲು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಿಂದ ಹಕ್ಕುಪತ್ರ ನೀಡಿದ್ದರೂ ಮನೆ ಕಟ್ಟುವ ಕಾಮಗಾರಿಗೆ ಬೇಕಾಗಿರುವ ಸಾಮಗ್ರಿಗಳನ್ನು ಅರಣ್ಯದೊಳಗೆ ತರಲು ಅರಣ್ಯಾಧಿಕಾರಿಗಳು ಅಡ್ಡಿಪಡಿಸುತ್ತಿರುವ ಬಗ್ಗೆ ದೂರುಗಳನ್ನು ಗಮನಿಸಲಾಗಿದೆ. ತಾವು ಭೇಟಿ ನೀಡಿದ ವೇಳೆಯು ಜನರು ಈ ಬಗ್ಗೆ ಮನವಿ ಮಾಡಿಕೊಂಡಿದ್ದಾರೆ. ಮನೆ ನಿರ್ಮಾಣಕ್ಕೆ ಅರಣ್ಯ ಇಲಾಖೆ ತೊಂದರೆ ನೀಡುತ್ತಿರುವುದು ಸರಿಯಲ್ಲ. ಬಡವರು ಸೂರು ಕಟ್ಟಿಕೊಳ್ಳಲು ಅಧಿಕಾರಿಗಳು ಅವಕಾಶ ಮಾಡಿಕೊಡಬೇಕು ಎಂದು ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಸೂಚನೆ ನೀಡಿದರು.

ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ಕೃಷಿ, ತೋಟಗಾರಿಕೆ, ಲೋಕೋಪಯೋಗಿ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಆಹಾರ, ಗಣಿ ಇಲಾಖೆ, ಬಿಎಸ್.ಎನ್.ಎಲ್ ಸೇರಿದಂತೆ ವಿವಿಧ ಇಲಾಖೆಗಳ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲಿಸಿದರು. ಕಾಡಾ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷರಾದ ಎಚ್.ವಿ. ಚಂದ್ರು, ಚೂಡಾ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುನ್ನಾ, ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಉಪ ಕಾರ್ಯದರ್ಶಿ ಡಿ.ಸಿ. ಶೃತಿ, ಜಿಲ್ಲಾಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ಸರ್ವರ್ ಸಮಸ್ಯೆ ಬಗೆಹರಿಸಿ ಪಡಿತರ ವಿತರಣೆ ಮಾಡಿ



▸▸ **ಆಹಾರ ಇಲಾಖೆ ಉಪ ನಿರ್ದೇಶಕರಿಗೆ ಮನವಿ**

ಚಾಮರಾಜನಗರ : ಸರ್ವರ್ ಸಮಸ್ಯೆ ಬಗೆಹರಿಸಿ ಪಡಿತರ ವಿತರಣೆಗೆ ಅವಕಾಶ ಮಾಡಿಕೊಡುವಂತೆ ಜಿಲ್ಲಾ ಪಡಿತರ ವಿತರಕರ ಸಂಘದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಉಪನಿರ್ದೇಶಕಿ ಡಾ. ವಸುಂದರ ಹೆಗ್ಗಡೆ ಅವರಿಗೆ ಮನವಿ ಸಲ್ಲಿಸಲಾಯಿತು.

ಆಗಸ್ಟ್ 2026 ರ ಮಾಹೆಯ ಪಡಿತರ ವಿತರಣೆಯು ಕೇಂದ್ರ ಸರ್ಕಾರದ ಆಗಸ್ಟ್ ಮತ್ತು ಸೆಪ್ಟೆಂಬರ್ ಎರಡು ತಿಂಗಳ ಪಡಿತರ ವಿತರಣೆ ಮಾಡಬೇಕಾಗಿರುತ್ತದೆ. ಪಡಿತರದಾರರ ಹೆಬ್ಬೆಟ್ಟನ್ನು ಎರಡು ಬಾರಿ ಪಡೆದು ಪಡಿತರ ವಿತರಣೆ ಮಾಡಬೇಕಾಗಿರುತ್ತದೆ. ಇದು ಸರ್ಕಾರದ ಆದೇಶವಾಗಿರುತ್ತದೆ. ಆದ ಕಾರಣ ಕಳೆದ ಒಂದು ವಾರದಿಂದ ಸರ್ವರ್ ಸಮಸ್ಯೆ ಆಗಿರುತ್ತದೆ. ಪ್ರತಿ ಕಾರ್ಡಿಗೂ 15 ರಿಂದ 20 ನಿಮಿಷಗಳು ಬೇಕಾಗಿರುತ್ತದೆ. ಈ ತಿಂಗಳು ಈಗಾಗಲೇ ಎಲ್ಲಾ ನ್ಯಾಯಬೆಲೆ ಅಂಗಡಿಗಳು ಶೇ. 70 ರಷ್ಟು ವಿತರಣೆಯಾಗಿರುವುದಿಲ್ಲ. ಇನ್ನೂ ಉಳಿದಿರುವುದು ಕೇವಲ 5 ದಿನಗಳು ಮಾತ್ರ ಇನ್ನೂ ಸರ್ವರ್ ಕೊಡದೇ ಇದ್ದರೆ ಪಡಿತರ ವಿತರಣೆ ಮಾಡುವುದು ಯಾವಾಗ. ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರದಾರರು ಕೂಲಿ ಕೆಲಸಕ್ಕೆ ಹೋಗದೆ ನ್ಯಾಯಬೆಲೆ ಅಂಗಡಿ ಮುಂದೆ ನಿಂತರೆ ಇದಕ್ಕೆ ಯಾರು ಜವಾಬ್ದಾರರರು. ಪಡಿತರದಾರರು ಮನಬಂದಂತೆ ಸರ್ವರ್ ಯಾವಾಗ ಬರುತ್ತೆ ನಮಗೆ ಪಡಿತರ ಯಾವಾಗ ಕೊಡುತ್ತೀರ ಕೊಡದೆ ಇದ್ದರೆ ನಾವು ಏನು ಊಟ ಮಾಡುವುದು ಎಂದು ಮನಬಂದಂತೆ ನ್ಯಾಯಬೆಲೆ ಅಂಗಡಿ ಮಾಲೀಕರನ್ನು ಹಾಗೂ ಅಧಿಕಾರಿಗಳನ್ನು ಕೇಳುತ್ತಿದ್ದಾರೆ ದಯಮಾಡಿ ಈ ಸಮಸ್ಯೆಯನ್ನು ಪರಿಹರಿಸಿ ಗ್ರಾಹಕರಿಗೆ ಪಡಿತರ ವಿತರಣೆ ಅವಕಾಶ ಮಾಡಿಕೊಡುವಂತೆ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಉಪನಿರ್ದೇಶಕಿ ಡಾ. ವಸುಂದರ ಹೆಗ್ಗಡೆ ಅವರಿಗೆ ಸಲ್ಲಿಸಿರುವ ಮನವಿಯಲ್ಲಿ ಕರ್ನಾಟಕ ರಾಜ್ಯ ಪಡಿತರ ವಿತರಕರ ಸಂಘದ ರಾಜ್ಯ ಉಪಾಧ್ಯಕ್ಷ ದುಂಡಯ್ಯ, ಜಿಲ್ಲಾಧ್ಯಕ್ಷ ಗಿರೀಶ್ ಉಡಿಗಾಲ ಒತ್ತಾಯಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಡಿತರ ವಿತರಕರ ಸಂಘದ ಜಿಲ್ಲಾ ಖಜಾಂಚಿ ಚೆಂಗುಮಣಿ, ಆರ್.ಎಂ.ಸಿದ್ದರಾಜು, ಕಿಟ್ಟಿ, ಹೆಗ್ಗೋಠಾರ ಮಹದೇವಸ್ವಾಮಿ, ವಿನೋದ್ ಹೊನ್ನಳ್ಳಿ, ನಂದೀಶ್ ಹೊಸಹಳ್ಳಿ ಇತರರು ಹಾಜರಿದ್ದರು.

# ಗ್ರಾಮಗಳಲ್ಲಿ ಜಾಬ್ ಕಾರ್ಡ್ ಮೇಳ



ಗುಂಡ್ಲುಪೇಟೆ: ವಿಬಿಜಿ ರಾಮ್‌ಜಿ ಯೋಜನೆಯಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಅಕುಶಲ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ಕಲ್ಪಿಸಲಾಗುತ್ತಿದೆ ಎಂದು ಚಿಕ್ಕಾಟಿ ಗ್ರಾಮ ಪಂ.ಪಂ. ಅಭಿವೃದ್ಧಿ ಅಧಿಕಾರಿ ಶಕುಂತಲಾ ತಿಳಿಸಿದರು.

ತಾಲೂಕಿನ ಚಿಕ್ಕಾಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಕ್ಕಾಟಿ, ತೊಂಡವಾಡಿ ಹಾಗೂ ಅರೇಪುರ ಗ್ರಾಮಗಳಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ಆಯೋಜಿಸಿದ್ದ ಜಾಬ್ ಕಾರ್ಡ್ ಮೇಳದಲ್ಲಿ ಮಾತನಾಡಿದ ಅವರು, ಮನೆ ಮನೆಗೆ ಹಾಗೂ ಮಹಿಳಾ ಸ್ವಸಹಾಯ ಸಂಘಗಳಿಗೆ ಭೇಟಿ ನೀಡಿ ಯೋಜನೆಯ ಕುರಿತು ಮಾಹಿತಿ ನೀಡಿದರು. ಉದ್ಯೋಗ ಚೀಟಿ ಹೊಂದಿರುವ ಕುಟುಂಬಗಳಿಗೆ ವಾರ್ಷಿಕ 125 ದಿನಗಳ ಉದ್ಯೋಗ ಕಲ್ಪಿಸಲಾಗುತ್ತಿದ್ದು, ಮಹಿಳೆಯರು ಹಾಗೂ ಪುರುಷರಿಗೆ ದಿನಕ್ಕೆ ತಲಾ 382 ರೂ. ಸಮಾನ ಕೂಲಿ ನೀಡಲಾಗುತ್ತದೆ. ಗ್ರಾಮೀಣ ಪ್ರದೇಶದ ಅಕುಶಲ ಕಾರ್ಮಿಕರು ಯೋಜನೆಯ ಸದುಪಯೋಗ ಪಡೆದುಕೊಳ್ಳುವಂತೆ ಸಲಹೆ ನೀಡಿದರು. ತಾಲೂಕಿನ ಯೋಜನಾ ಮಾಹಿತಿ, ಶಿಕ್ಷಣ ಮತ್ತು ಸಂವಹನ ಸಂಯೋಜಕ ಹರೀಶ್ ಮಾತನಾಡಿ, ವಿಬಿಜಿ ರಾಮ್‌ಜಿ ಯೋಜನೆಯಡಿ ಉದ್ಯೋಗ ಚೀಟಿ ಹೊಂದಿರುವ ಕುಟುಂಬಗಳು 5 ಲಕ್ಷ ರೂ. ವರೆಗೆ ವೈಯಕ್ತಿಕ ಸೌಲಭ್ಯಗಳನ್ನು ಪಡೆದುಕೊಳ್ಳಬಹುದಾಗಿದೆ. ಇದರಿಂದ ಕುಟುಂಬಗಳ ಜೀವನಮಟ್ಟ ಸುಧಾರಣೆಗೆ ಪೂರಕವಾಗಲಿದೆ ಎಂದರು. ಈ ಸಂದರ್ಭದಲ್ಲಿ ಗ್ರಾಪಂ ದ್ವಿತೀಯ ದರ್ಜೆ ಲೆಕ್ಕ ಸಹಾಯಕ ರವಿ, ಬಿಲ್ ಕಲೆಕ್ಟರ್ ಚಿಕ್ಕರಾಜು, ಬಿಎಫ್‌ಟಿ ರವಿ, ಡಿಇಒ ನಾಗರತ್ನ, ಎನ್‌ಆರ್‌ಎಲ್‌ಎಂ ಯೋಜನೆಯ ಸಿಬ್ಬಂದಿ, ಗ್ರಾಮ ಪಂಚಾಯಿತಿ ಸಿಬ್ಬಂದಿ ಉಪಸ್ಥಿತರಿದ್ದರು.

# ಕಜ್ಜಾಯದ ರುಚಿ ಇಳಿಸಿದ ಬೆಲ್ಲದ ರೇಟು

## ಕಳೆಗುಂದಿದ ಗ್ರಾಮೀಣರ ಹಿರಿಯಮ್ಮನ ಹಬ್ಬ

▸▸ **ಶಿವಕುಮಾರ ತುಂಬಸೋಗೆ**

ಎಚ್.ಡಿ.ಕೋಟೆ: ಬೆಲ್ಲದ ಬೆಲೆ ದಿಢೀರ್ ಏರಿಕೆಯಿಂದ ಶ್ರಾವಣ ಮಾಸದ ಮೂರನೇ ಭಾನುವಾರ ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ಗ್ರಾಮಗಳಲ್ಲಿ ಆಚರಿಸುವ ಹಿರಿಯಮ್ಮನ ಹಬ್ಬಕ್ಕೆ ತಯಾರಿಸುವ ಕಜ್ಜಾಯದ ರುಚಿ ಕಡಿಮೆಯಾಗುವ ಸಾಧ್ಯತೆಯಿದೆ.

ಹಿರಿಯಮ್ಮ ಅಥವಾ ಇದಿಯಮ್ಮ ಹಬ್ಬಕ್ಕೆ ಕಜ್ಜಾಯವೇ ಪ್ರಮುಖವಾಗಿದ್ದು, ತಯಾರಿಕೆಗೆ ಬಹುಮುಖ್ಯವಾಗಿ ಬೇಕಾಗುವ ಬೆಲ್ಲದ ಬೆಲೆ ಕೆಜಿಗೆ 75ರೂ.ನಿಂದ 80ರೂ.ಗೆ ಏರಿಕೆ ಕಂಡಿರುವುದು ಪಾಕ ತಯಾರಕರು ಚಿಂತೆ ಗೀಡಾಗುವಂತೆ ಮಾಡಿದೆ.

ಮನೆಯಲ್ಲಿರುವ ಮಕ್ಕಳಿಗೆ ಒಳಿತು ಮಾಡಲು, ಮಕ್ಕಳಾಗದ ದಂಪತಿಗಳಿಗೆ ಮಕ್ಕಳನ್ನು ಕರುಣಿಸುವಂತೆ ಹಳ್ಳಿಗಾಡಿನಲ್ಲಿ ಅನಾದಿ ಕಾಲದಿಂದಲೂ ಈ ಹಬ್ಬ ಆಚರಿಸುವುದು ವಾಡಿಕೆ. ವಿವಾಹಿತ ಹೆಣ್ಣು ಮಕ್ಕಳು ಗಂಡ, ಮಕ್ಕಳ ಸಮೇತ ತವರು ಮನೆಗೆ ಬಂದು ಸ್ವತಃ ತಾವೇ ಕಜ್ಜಾಯ ತಯಾರಿಸಿರುವುದು ಪ್ರತೀತಿ. ಮನೆಯನ್ನೆಲ್ಲ ಸ್ವಚ್ಛಗೊಳಿಸಿ, ಅಂಗಳದಲ್ಲಿ ರಂಗೋಲಿ ಬಿಡಿಸಿ, ಮುಸ್ಸಂಜೆ ವೇಳೆಯಲ್ಲಿ ಹೆಣ್ಣುಮಕ್ಕಳು ಗಂಗೆ ಪೂಜೆ ನೆರವೇರಸಿದ ನಂತರ ತುಂಬೆ, ಕಳ್ಳುವು, ಕಕ್ಕೆಹೂ, ಎಳ್ಳುವು, ಗೌರಿಪುಷ್ಪ ಹೂವಿನ ಸಮೇತ ಕಳಶ ಹೊತ್ತು ಮನೆಗೆ ಬರುತ್ತಾರೆ. ಬಾಳೆ ಎಲೆಯಲ್ಲಿ ಕಳಶವಿರಿಸಿ, ಅಲಂಕಾರಮಾಡಿ ಮಾಂಗಲ್ಯ, ಓಲೆ, ಜುಮುಕಿ ತೊಡಿಸಿ ಕಜ್ಜಾಯ, ತುಪ್ಪ, ಮುದ್ದೆ, ಅನ್ನ, ಸಾಂಬಾರಿನ ಎಡೆ ಇರಿಸಿ ಕಳಶಕ್ಕೆ ಮನೆಯವರೆಲ್ಲರೂ ಪೂಜೆ ಸಲ್ಲಿಸುತ್ತಾರೆ. ಮರುದಿನ ಪೂಜೆ ಸಲ್ಲಿಸಿ ಕಲ್ಪವೃಕ್ಷದಲ್ಲಿ ಕಳಶ ವಿಸರ್ಜಿಸುತ್ತಾರೆ.

**ಗ್ರಾಮೀಣ ಹಬ್ಬಗಳ ಆಚರಣೆಯ ಹಲವು ಪ್ರಯೋಜನಗಳು:** ಸಾಮಾನ್ಯವಾಗಿ ಗ್ರಾಮೀಣರು ಆಚರಿಸುವ ಪ್ರತಿಯೊಂದು ಹಬ್ಬಗಳಿಗೂ ವೈಜ್ಞಾನಿಕ ಹಾಗೂ ಧಾರ್ಮಿಕ ನಂಟಿದೆ. ಶ್ರಾವಣ ಮಾಸದಲ್ಲೇ ಬಿಡುವ ತುಂಬೆ ಹೂವು ಮನಸ್ಸಿಗೆ ಶಾಂತಿ, ಧನಾತ್ಮಕ ಶಕ್ತಿ ತರುವುದರ ಜೊತೆಗೆ ಶಿವನಿಗೆ ಪ್ರಿಯವಾದ ದಳಗಳಲ್ಲೊಂದು. ಹಿರಿಯಮ್ಮ/ಇದಿಯಮ್ಮನ ಹಬ್ಬದ ಪ್ರಯುಕ್ತ ತುಂಬೆ ಹೂವನ್ನು ಪೂಜೆಗಾಗಿ ಮನೆಗೆ ತಂದು ಧನಾತ್ಮಕ ಶಕ್ತಿ ಪಡೆಯುತ್ತಾರೆ. ತುಂಬೆ ರಸವು ಚರ್ಮ ಸಮಸ್ಯೆಗೂ ಪರಿಹಾರ ಮಾರ್ಗವಾಗಿದ್ದು, ತುರಿಕೆ, ಊತ, ಕೀಲು ನೋವನ್ನು ಉಪಶಮನ ಮಾಡುತ್ತದೆ. ಕಳಶದಲ್ಲಿರುವ ಪ್ರತಿಯೊಂದು ಹೂವುಗಳು ವಿಶಿಷ್ಟ ಗುಣಗಳನ್ನು ಹೊಂದಿವೆ.



> ಈ ಹಬ್ಬಕ್ಕೆ ಕಜ್ಜಾಯವೇ ಪ್ರಮುಖ. ಬೆಲ್ಲದ ಹೊರತು ಬೇರೆ ಪದಾರ್ಥದಿಂದ ಪಾಕ ಮಾಡಲು ಸಾಧ್ಯವಿಲ್ಲ. ಹಬ್ಬದ ನಂತರ ಕಳೆದ ವರ್ಷವೂ ನಮ್ಮ ನೆಂಟರಿಸ್ಟರ ಮನೆಗಳಿಗೆ ಕಜ್ಜಾಯ ಕೊಡುತ್ತಿದ್ದೆವು. ಹಬ್ಬದ ಹೊತ್ತಿನಲ್ಲಿ ಬೆಲ್ಲದ ಬೆಲೆ ದಿಢೀರ್ ಏರಿಕೆಯಿಂದ ಕಡಿಮೆ ಕಜ್ಜಾಯ ತಯಾರಿಸಿ, ಪೂಜೆಗೆ ಬರುವವರಿಗಷ್ಟೇ ಕೊಡುವಂತಾಗಿದೆ.
>
> ▸▸ **–ರತ್ನಮ್ಮ** ಪಾಕ ತಯಾರಕರು.

ಜೀರ್ಣಾಂಗಗಳ ಕೆಲಸವನ್ನು ಚುರುಕು ಮಾಡಲು, ರಕ್ತಹೀನತೆ ತಡೆಗಟ್ಟಿ ಹಿಮೋಗ್ಲೋಬಿನ್ ಮಟ್ಟ ಹೆಚ್ಚಸಲು, ರಕ್ತ ಶುದ್ಧೀಕರಿಸಲು, ರೋಗನಿರೋಧಕ ಶಕ್ತಿ ಹೆಚ್ಚಿಸಲು, ಮೆಗ್ನೀಷಿಯಂ ಮತ್ತು ಪೊಟ್ಯಾಷಿಯಂಗಳ ಮೂಲಕ ಮೂಳೆಗಳ ಆರೋಗ್ಯ ಕಾಪಾಡುವ ಗುಣಗಳನ್ನು ಹೊಂದಿರುವ ಬೆಲ್ಲ ಬಳಸಿ ಮಾಡುವ ಕಜ್ಜಾಯ ಸೇವನೆಯಿಂದ ಆರೋಗ್ಯ ಕಾಪಾಡಬಹುದು. ಹೂವುಗಳಿಂದ ಧನಾತ್ಮಕ ಹಾಗೂ ಔಷಧೀಯ ಲಾಭ ಪಡೆದರೆ, ಕಜ್ಜಾಯದಿಂದ ವೈಜ್ಞಾನಿಕವಾಗಿ ಆರೋಗ್ಯ ಕಾಪಾಡುವುದೇ ಇದಿಯಮ್ಮ/ಹಿರಿಯಮ್ಮನ ಹಬ್ಬದ ವಿಶೇಷ.



# ಮತದಾರರ ಪಟ್ಟಿ ಪರಿಷ್ಕರಣೆ

## ಮುಂದಿನ ಪ್ರಕ್ರಿಯೆಗೂ ಸಹಕರಿಸಲು ಜಿಲ್ಲಾಧಿಕಾರಿ ಮನವಿ

ಚಾಮರಾಜನಗರ: ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ-2026ಕ್ಕೆ ಸಂಬಂಧಿಸಿದಂತೆ ಮಾನ್ಯತೆ ಪಡೆದ ನೊಂದಾಯಿತ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಯಿತು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು, ಭಾರತ ಚುನಾವಣಾ ಆಯೋಗದ ನಿರ್ದೇಶನದ ಮೇರೆಗೆ ಕರಡು ಮತದಾರರ ಪಟ್ಟಿಯನ್ನು ಪ್ರಚುರಪಡಿಸಲಾಗಿದೆ. ಜಿಲ್ಲಾಧಿಕಾರಿ ಕಚೇರಿ, ಎಲ್ಲಾ ತಾಲೂಕುಗಳ ತಹಶೀಲ್ದಾರ್ ಕಚೇರಿ ಹಾಗೂ ಜಿಲ್ಲೆಯ ಎಲ್ಲಾ ಮತಗಟ್ಟೆಗಳಲ್ಲಿ ಈ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಮುಂದಿನ ಪರಿಷ್ಕರಣಾ ಪ್ರಕ್ರಿಯೆಗೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸಂಪೂರ್ಣವಾಗಿ ಸಹಕರಿಸುವಂತೆ ಮನವಿ ಮಾಡಿದರು.

**ಮತದಾರರ ಪರಿಶೀಲನೆ ಹಾಗೂ ವ್ಯಾಪಕ ಪ್ರಚಾರಕ್ಕೆ ಸೂಚನೆ**

ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇದೆಯೋ ಇಲ್ಲವೋ ಎಂಬುದರ ಬಗ್ಗೆ ಎಲ್ಲಾ ಅರ್ಹ ಮತದಾರರು ಖಚಿತಪಡಿಸಿಕೊಳ್ಳಬೇಕು ಹಾಗೂ ಈ ಸಂಬಂಧ ಹಕ್ಕು ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು. ಅಲ್ಲದೆ, ಈ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ಕಾಗಿ ಮಾನ್ಯತೆ ಪಡೆದ ನೊಂದಾಯಿತ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ತಾವು ನಿಯೋಜಿಸಿರುವ ಬಿ.ಎಲ್.ಎ-2 ರವರ ಮೂಲಕ ಸಾರ್ವಜನಿಕರಿಗೆ ವ್ಯಾಪಕ ಪ್ರಚಾರ ನೀಡುವಂತೆ ಕೋರಿದರು.

ಈ ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಎಚ್.ಎಸ್. ತೋಂಟಧಾರ್ಯಸ್ವಾಮಿ, ಬಿ.ಎಂ. ಕೃಷ್ಣಮೂರ್ತಿ, ಎಸ್. ಬಾಲಸುಬ್ರಮಣ್ಯ, ಸಯ್ಯದ್ ಅಕ್ರಂ, ಎ.ಎಚ್. ನಸ್ರುಲ್ಲಾ ಖಾನ್, ಭೈರಲಿಂಗಸ್ವಾಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

### ಜಿಲ್ಲೆಯ ಮತದಾರರ ಅಂಕಿ-ಅಂಶಗಳ ವಿವರ

**ಜಿಲ್ಲೆಯಲ್ಲಿ 4,30,786 ಪುರುಷರು, 4,49,390 ಮಹಿಳೆಯರು ಹಾಗೂ 48 ಇತರರು ಸೇರಿದಂತೆ ಒಟ್ಟು 8,80,224 ಮತದಾರರಿದ್ದಾರೆ. ಈ ಪೈಕಿ ಮತದಾರರು ಭರ್ತಿ ಮಾಡಿ ನೀಡಿದ ಒಟ್ಟು 7,91,949 ಗಣತಿ ನಮೂನೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ. ಉಳಿದ 88,275 ಮಂದಿಯನ್ನು ಗೈರಾಗಿರುವ ಮತದಾರರು, ಸ್ಥಳಾಂತರಗೊಂಡವರು, ಮರಣ ಹೊಂದಿದವರು, ಎರಡು ಕಡೆ ನೊಂದಣಿಯಾದ ಮತದಾರರು ಹಾಗೂ ಇತರರು ಎಂದು ಪಟ್ಟಿಯಲ್ಲಿ ಗುರುತಿಸಲಾಗಿದೆ ಎಂದು ಮಾಹಿತಿ ನೀಡಿದರು.**



### ಹೆಸರು ಸೇರ್ಪಡೆಗೆ ಅವಕಾಶ, ಕರಡು ಪಟ್ಟಿ ವಿತರಣೆ

**ಅರ್ಹ ಮತದಾರರ ಹೆಸರು ಪಟ್ಟಿಯಲ್ಲಿ ಕೈಬಿಟ್ಟು ಹೋಗಿದ್ದಲ್ಲಿ ಮತದಾರರು ನಮೂನೆ-6 ಅನ್ನು ಘೋಷಣಾ ಪತ್ರ ಹಾಗೂ ಅಗತ್ಯ ದಾಖಲೆಗಳೊಂದಿಗೆ ನೀಡಿ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸಲು ಅವಕಾಶ ನೀಡಲಾಗಿದೆ. ಅಕ್ಟೋಬರ್ 1ನ್ನು ಅರ್ಹತಾ ದಿನಾಂಕವೆಂದು ಪರಿಗಣಿಸಿ 18 ವರ್ಷ ತುಂಬಿದ ಹೊಸ ಮತದಾರರನ್ನು ಪಟ್ಟಿಗೆ ಸೇರಿಸಲು ಫಾರಂ-6 ಅನ್ನು ನೀಡುವ ಕಾರ್ಯ ಮುಂದುವರೆದಿದೆ ಎಂದು ಸ್ಪಷ್ಟಪಡಿಸಿದರು. ಇದೇ ವೇಳೆ ಪ್ರಚುರಪಡಿಸಲಾಗಿರುವ ಕರಡು ಮತದಾರರ ಪಟ್ಟಿಯನ್ನು ಮಾನ್ಯತೆ ಪಡೆದ ನೊಂದಾಯಿತ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಜಿಲ್ಲಾಧಿಕಾರಿಯವರು ವಿತರಿಸಿದರು.**

# ಆ.28ಕ್ಕೆ ರಾಜ್ಯ ಐಕ್ಯತಾ ಸಮಾವೇಶ

ಮೈಸೂರು: ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಮನ್ವಯ ಸಮಿತಿ ವತಿಯಿಂದ ಆ. 28 ರ ಬೆಳಗ್ಗೆ 10.30ಕ್ಕೆ ಬೆಂಗಳೂರು ಅರಮನೆ ಮೈದಾನದ ಶೃಂಗಾರ್ ಪ್ಯಾಲೆಸ್‌ನಲ್ಲಿ 6 ನೇ ರಾಜ್ಯ ಮಟ್ಟದ ಐಕ್ಯತಾ ಸಮಾವೇಶ ಆಯೋಜಿಸಲಾಗಿದೆ ಎಂದು ಕೇಂದ್ರ ಸಮಿತಿ ಉಪಾಧ್ಯಕ್ಷ ಪ್ರಕಾಸ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಮನೋರಕ್ಷಿತ ಬಂತೇಜಿ ಸಾನ್ನಿಧ್ಯ ವಹಿಸುವರು, ಸಿಎ ಡಿ.ಕೆ. ಶಿವಕುಮಾರ್ ಉದ್ಘಾಟಿಸುವರು, ಡಿಸಿಎಂ ಡಾ.ಜಿ. ಪರಮೇಶ್ ಅಧ್ಯಕ್ಷತೆ ವಹಿಸುವರು, ಮಾಜಿ ಸಿಎಂ ಸಿದ್ದರಾಮಯ್ಯ, ಸಚಿವರಾದ ಕೆ.ಎಚ್. ಮುನಿಯಪ್ಪ, ಸತೀಶ್ ಜಾರಕಿಹೊಳಿ, ಪ್ರಿಯಾಂಕ್ ಖರ್ಗೆ, ಶಿವರಾಜ್ ತಂಗಡಗಿ, ಪಿ.ಎಂ. ನರೇಂದ್ರ ಸ್ವಾಮಿ, ಬಿ. ನಾಗೇಂದ್ರ, ರುದ್ರಪ್ಪ ಲಮಾಣಿ, ಕೆ.ಎಸ್. ಬಸವಂತಪ್ಪ, ಟಿ.ರಘುಮೂರ್ತಿ ಇನ್ನಿತರರು ವೇದಿಕೆಯಲ್ಲಿರುವರೆಂದರು. ರಾಜ್ಯದಲ್ಲಿಎಸ್‌ಸಿ, ಎಸ್‌ಟಿ ನೌಕರರು, ಅಧಿಕಾರಿ ವರ್ಗದವರು ಎದುರಿಸುತ್ತಿರುವ ಸಮಸ್ಯೆಗಳು ಬೇರೆ ಸ್ವರೂಪದ್ದಾಗಿದ್ದು, ವಿದ್ಯಾರ್ಥಿವಂತರು, ಉನ್ನತ ಅಧಿಕಾರದಲ್ಲಿರುವವರಾಗಿದ್ದರೂ ದೌರ್ಜನ್ಯ ಎಸಗಲಾಗುತ್ತಿದೆ. ಎಲ್ಲ ರೀತಿಯ ಸಮಸ್ಯೆ ಕುರಿತು ಸಮಾವೇಶದಲ್ಲಿ ಸರ್ಕಾರದ ಗಮನ ಸೆಳೆಯಲಾಗುವುದೆಂದರು. ಜಿಲ್ಲಾಧ್ಯಕ್ಷ ಸಿ.ಪುಟ್ಟಸ್ವಾಮಿ, ಡಿ.ಪುಟ್ಟಸ್ವಾಮಿ, ಹರೀಶ್‌ಕುಮಾರ್ ಹಾಜರಿದ್ದರು.



# ಹಸಿರಿನ ಅರಿವು: ಪ್ರಕೃತಿಯ ಬಗ್ಗೆ ಪಾಠ



ರಾಮನಗರ: ನಗರದ ಪಟೇಲ್ ಆಂಗ್ಲ ಶಾಲೆಯಲ್ಲಿ ಹಸಿರಿನ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ವಿದ್ಯಾರ್ಥಿಗಲಲ್ಲಿ ನಿಸರ್ಗವನ್ನು ಕಾಪಾಡಿಕೊಳ್ಳುವ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಈ ವೇಳೆ ಮಾತನಾಡಿದ ಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಪಟೇಲ್ ಸಿ ರಾಜು, ಚಿಕ್ಕ ಮಕ್ಕಳಲ್ಲಿ ಹಸಿರು ಸಿರಿಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು "ಸರಳ ಇಂಗ್ಲೀಷ್ ಕಲಿಕೆ" ಶಿಕ್ಷಕರಿಂದ ಚಟುವಟಿಕೆಯ ರೂಪದಲ್ಲಿ ಆಯೋಜಿಸಲಾಗಿದೆ. ಭೂಮಿಯ ಉಳಿವಿಗಾಗಿ ಹಸಿರು ಅಗತ್ಯವಿದೆ. ಮಕ್ಕಳು ಸೂಕ್ಷ್ಮ ವಿಚಾರಗಳನ್ನು ಗಮನಿಸುವುದು, ಮರ-ಗಿಡಗಳನ್ನು ರಕ್ಷಿಸುವುದರ ಬಗ್ಗೆ ಅರಿವು ಮೂಡಿಸಿಕೊಂಡಿದ್ದಾಖುಎ. ನೀರನ್ನು ಮಿತವಾಗಿ ಬಳಸುವ ಬಗ್ಗೆಯೂ ಜಾಗೃತಿ ಮೂಡಿಸಲಾಗಿದೆ ಎಂದರು. ಕಾರ್ಯಕ್ರಮದ ಅಂಗವಾಗಿ ಶಾಲೆಯ ಮಕ್ಕಳು ಕಿರು ಚಿತ್ರಗಳನ್ನು ರಚಿಸಿ ಪ್ರದರ್ಶಿಸಿದರು.

# ಕಸಾಪ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ




ಮೈಸೂರು: ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ನಿವೃತ್ತ ಐಎಎಸ್ ಅಧಿಕಾರಿ ಡಾ.ಸಿ. ಸೋಮಶೇಖರ್ ಅವರಿಂದ ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಜಿಲ್ಲೆಯ ಕನ್ನಡಾಭಿಮಾನಿಗಳು ತಮಗೆ ಮತ ನೀಡುವಂತೆ ಬೆಂಬಲಿಗರೊಡನೆ ಸುದ್ದಿಗೋಷ್ಠಿ ನಡೆಸಿ ಮನವಿ ಮಾಡಿದರು.

ಈ ವೇಳೆ ಚಿಂತಕ ಮ.ಗು. ಸದಾನಂದಯ್ಯ ಮಾತನಾಡಿ, ಡಾ.ಸಿ. ಸೋಮಶೇಖರ್ ದಕ್ಷ, ಪ್ರಾಮಾಣಿಕ ಹಾಗೂ ಕ್ರಿಯಾಶೀಲರಾಗಿದ್ದಾರೆ. ತಾವು ಅಧಿಕಾರದಲ್ಲಿದ್ದಾಗ ಕೈಗೊಂಡ ಜನಪರ ಕಾರ್ಯಗಳಿಂದಾಗಿ ರಾಜ್ಯದಾದ್ಯಂತ ಎಲ್ಲರಿಗೂ ಚಿರಪರಿಚಿತರಾಗಿದ್ದಾರೆ. ಇವರು ರಾಜ್ಯಾಧ್ಯಕ್ಷರಾದಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನ ಹಿರಿಮೆ, ಗರಿಮೆ ಇನ್ನಷ್ಟು ಹೆಚ್ಚಲಿದೆ. ಹೀಗಾಗಿ ಸದಸ್ಯರು ಇವರನ್ನೇ ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು.

ಡಾ.ಎಂ.ಜಿ.ಆರ್. ಅರಸ್ ಮಾತನಾಡಿ, ಡಾ.ಸಿ. ಸೋಮಶೇಖರ್ ಅವರನ್ನೇ ಸರ್ವಾನುಮತದಿಂದ ಆಯ್ಕೆ ಮಾಡುವುದಾಗಿ ರಾಜ್ಯದಾದ್ಯಂತ ಬೆಂಬಲ ವ್ಯಕ್ತವಾಗಿದೆ. ಹೀಗಾಗಿ ಮೈಸೂರು ಭಾಗದ ಮತದಾರರು ಸಹಾ ಕೈಗೂಡಿಸಬೇಕೆಂದು ಕೋರಿದರು. ಉದ್ಯಮಿ ಕೆ.ಬಿ. ಲಿಂಗರಾಜು ಮಾತನಾಡಿ, ಡಾ.ಸಿ. ಸೋಮಶೇಖರ್ ಅವರ ನಡವಳಿಗೆ ಎಲ್ಲರಿಗೂ ಪ್ರಿಯವಾದುದಾಗಿದ್ದು, ಇವರ ಆಯ್ಕೆ ಖಚಿತ ಎಂಬ ವಿಶ್ವಾಸ ತಮಗಿದೆ ಎಂದರು.

ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ ಮಾತನಾಡಿ, ಡಾ.ಸಿ. ಸೋಮಶೇಖರ್ ಕನ್ನಡಪರ ಮನಸ್ಸಿನವರಾಗಿದ್ದು, ಮೈಸೂರು, ಚಾಮರಾಜನಗರ ಭಾಗದಲ್ಲಿ ಮತದಾರರ ಬೆಂಬಲ ವ್ಯಕ್ತವಾಗಿದೆ. ಇವರ ಆಯ್ಕೆಯಿಂದ ಪರಿಷತ್ ಇನ್ನಷ್ಟು ಕ್ರಿಯಾಶೀಲವಾಗುತ್ತದೆ ಎಂದು ಭರವಸೆ ವ್ಯಕ್ತಪಡಿಸಿದರು. ಎಂ.ಚಂದ್ರಶೇಖರ್, ಡಿ. ಎನ್.ಲೋಕಪ್ಪ ಇನ್ನಿತರರು ಹಾಜರಿದ್ದರು.

## ಕನ್ನಡ ಚಲನಚಿತ್ರ ಗೀತೆಗಳ ಸಂಗೀತ ಕರೋಕೆ ಕಾರ್ಯಕ್ರಮ

# ಜಾನಪದ ಕಲೆಗಳನ್ನು ಉಳಿಸಿ ಬೆಳಸಿ : ಎಂ.ರಾಮಚಂದ್ರ

ಚಾಮರಾಜನಗರ : ಜಿಲ್ಲೆಯು ಜಾನಪದ ಕಲೆಗಳ ತವರೂರಾಗಿದ್ದು, ಜಾನಪದ ಕಲೆಗಳನ್ನು ಉಳಿಸಿ ಬೆಳಸಬೇಕು ಎಂದು ಎಂದು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಹೇಳಿದರು.

ನಗರದ ವರವಟ ಡಾ.ರಾಜ್ ಮಾರ್ ರಂಗ ಮಂದಿರದಲ್ಲಿ ಸುನಿಲ್ ಸಿದ್ಧಾರ್ಥ ಮಾಯಾನ ದನ ಮೆಲೋಡಿಸ್ ಚಾಮರಾಜನಗರ ಅರ್ಪಿಸುವ ಮಾಯಾನಂದನ' ಮ್ಯೂಸಿಕ್ ಲೆಜೆಂಡ್ಸ್ ಡಾ.ಪಿ.ಬಿ. ಶ್ರೀನಿವಾಸ್, ಡಾ.ಕೆ.ಜೆ. ಯೇಸುದಾಸ್, ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ, ಡಾ.ಎಸ್. ಜಾನಕಿ ಹಾಗೂ ಕೆ.ಎಸ್.ಚಿತ್ರ ಅವರ ಕನ್ನಡ ಚಲನಚಿತ್ರ ಗೀತೆಗಳ ಸಂಗೀತ ಕರೋಕೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ 'ಮಾತನಾಡಿದರು. ಆಧುನಿಕ ಬದುಕಿನ ಭರಾಟೆಯಲ್ಲಿ ಬಹಳಷ್ಟು ಗ್ರಾಮೀಣ ಸೊಗಡಿನ ಕಲೆಗಳು ನಶಿಸಿ ಹೋಗುತ್ತಿವೆ. ಜಿಲ್ಲೆಯಲ್ಲಿ ಶ್ರೀ ಮಹದೇಶ್ವರ, ಶ್ರೀಮಂಟೇಸ್ವಾಮಿ, ಸಿದ್ದಪ್ಪಾಜಿ, ಬಿಳಿಗಿರಿರಂಗಸ್ವಾಮಿ ಹಾಡುಗಳು ಪ್ರಸಿದ್ಧಿ ಹೊಂದಿವೆ. ಹಿಂದೆ ಮದುವೆ, ಇನ್ನಿತರ ಶಾಸ್ತ್ರ ಕಾರ್ಯಕ್ರಮಗಳಲ್ಲಿ ಶೋಬಾನೆ ಜಾನಪದ ಕೇಳುತ್ತಿದ್ದೇವೆ ಅದು ಇತ್ತೀಚೆಗೆ ಮರೆಯಾಗಿದೆ ಇಂತಹ ಜಾನಪದಗಳಿಗೆ ಅವಕಾಶ ಕೊಟ್ಟು ಜಾನಪದ ಕಲೆಗಳಿಗೆ ಅವಕಾಶ ಮಾಡಿಕೊಟ್ಟು ಉಳಿಸಿ ಬೆಳೆಸುವ ಕೆಲಸ ಆಗಬೇಕಿದೆ ಎಂದರು.




ಚಾಮರಾಜನಗರ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲ ಪ್ರಕಾರಗಳ ಕಲಾವಿದರು ಇದ್ದು, ವಿಶಿಷ್ಟ ಜಾನಪದ ಕಲೆಗಳನ್ನು ಹೊಂದಿದ್ದು, ಜಿಲ್ಲೆಯ ಕಲಾವಿದರು. ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಜಾನಪದ ಹಾಡುಗಳು ಹಾಡಿ ಜಿಲ್ಲೆಯನ್ನು ಕೀರ್ತಿಯನ್ನು ಬೆಳಗಿಸಿದ್ದಾರೆ. ಜಿಲ್ಲೆಯ ವರನಟ ಡಾ.ರಾಜ್ ಕುಮಾರ್ ಅವರು ಚಿತ್ರರಂಗದಲ್ಲಿ ಉತ್ತುಂಗಕ್ಕೇರಿ ದೇಶದಲ್ಲಿ ಹೆಸರು ಮಾಡಿದ್ದರು ಅಂತಹ ಮಹಾ. ಕಲಾವಿದನ್ನು ಜಿಲ್ಲೆಯು ಕೊಡುಗೆ ಕೊಟ್ಟಿದೆ ಎಂದರು.

**ಮನಸ್ಸಿಗೆ ನೆಮ್ಮದಿ ನೀಡುವ ಸಂಗೀತ:** ಕಾರ್ಯ ಕ್ರಮ ಉದ್ಘಾಟಿಸಿದ ಮಾಜಿ ಶಾಸಕ ಎಸ್ ಬಾಲರಾಜು ಮಾತನಾಡಿ ಸಂಗೀತ ಮನಸ್ಸಿಗೆ ಅಪಾರವಾದ ಮೌಲ್ಯದ, ನೆಮ್ಮದಿ, ಹೊಸ ಚೈತನ್ಯವನ್ನು ನೀಡುತ್ತದೆ. ಇದು ಕೇವಲ ಮನರಂಜನ' ಮಾತ್ರವಲ್ಲದೆ ಮಾನಸಿಕ ಒತ್ತಡವನ್ನು ಕಡಿಮೆ ಮಾಡುವ ದಿವ್ಯೌಷಧಿಯಂತೆ ಕೆಲಸ ಮಾಡುತ್ತದೆ ಎಂದರು. ಜಿಲ್ಲೆಯು ಜಾನಪದ ಕವರೂರು ಆಗಿದ್ದು, ಜಿಲ್ಲೆಯಲ್ಲಿ ಎಲ್ಲಾ ಪ್ರಕಾರ'ಗಳ ಕಲಾವಿದರು ಹೆಚ್ಚಾಗಿದ್ದಾರೆ. ಸುನಿಲ್ ಸಿದ್ಧಾರ್ಥ ಮಾಯಾವಂದನ ಮಲೋಡಿನ್ ಅರ್ಪಿಸುವ ಮಾಯಾನಂದನ ಮ್ಯೂಸಿಕ್ ಲ್ಜೆಂಡ್ಸ್ ಇಂತಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ನಡೆಯಬೇಕು ಈ ಕಾರ್ಯಕ್ರಮ ಯಶಸ್ವಿಂ ಮಾಗಲಿ ಎಂದು ಶುಭ ಕೋರಿದರು. ಕಾರ್ಯಕ್ರಮದಲ್ಲಿ ರೈಲ್ವೆ ಮಂಡಳಿ ಮಾಜಿ ಸದಸ್ಯ ಮಾಂಬಳ್ಳಿ ನಂಜುಂಡಸ್ವಾಮಿ, ಪರಿಸರ ಪ್ರೇಮಿ ಸಿ.ಎಂ.ವೆಂಕಟೇಶ್, ಗಣಿ ಉದ್ಯಮಿ ಮಹದೇವ್ ಬುದ್ಧ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಎಂ.ಎನ್.ಶಿವಪ್ರಸಾದ್ ಮಾಯಾನಂ ದನ ತಂಡದ ಸುನಿಲ್ ಸಿದ್ಧಾರ್ಥ, ರವಿ, ವೇಣು ಗೋಪಾಲ್, ಜಾನಪದ ಗಾಯಕ ಸಿ. ಎಂ.ನರಸಿಂಹ ಮೂರ್ತಿ,ಅನುಪಮ ಟ್ರಸ್ಟ್ ಅಧ್ಯಕ್ಷ ಡಾ. ಪಿ.ಪ್ರೇಮ ಉಪನ್ಯಾಸಕ ಡಾ.ನಂಜುಂಡಯ್ಯ, ಬಿ.ಹೇಮಂತ್ ಇತರರು ಹಾಜರಿದ್ದರು,

# ಆ.28ಕ್ಕೆ ಗಾಯನ ಕಾರ್ಯಕ್ರಮ

ಮೈಸೂರು: ಗಾನಚಂದನ ಕಲಾ ಬಳಗದ ವತಿಯಿಂದ ಆ. 28 ರ ಸಂಜೆ 5 ರಿಂದ ರಾತ್ರಿ 9.30 ರವರೆಗೆ ನಗರದ ಜೆಎಲ್‌ಬಿ ರಸ್ತೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ಡಾ.ಎಸ್. ಜಾನಕಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲು ಮರೆಯಾದ ಮಾತೆ – ಸಂಗೀತದ ಸೀತೆ ಶೀರ್ಷಿಕೆಯ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವ್ಯವಸ್ಥಾಪಕ ಆರ್. ಸುಧೀಂದ್ರ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ವೇಳೆ ಎಸ್. ಜಾನಕಿ ಅವರು ಹಾಡಿರುವ ಗೀತೆಗಳನ್ನು ಪ್ರಸ್ತುತ ಪಡಿಸಲಾಗುವುದು. ನಾಗರಾಜ್ ವಿ. ಭೈರಿ ಮುಖ್ಯ ಅತಿಥಿಗಳಾಗಿರಲಿದ್ದು, ಜಾನಕಿ ಅವರು ಹಲವಾರು ಚಿತ್ರಗಳಲ್ಲಿ ಧ್ವನಿ ನೀಡಿರುವ ಬೇಬಿ ರೇಖಾ, ಎಚ್.ಕೆ. ಸೋಮಶೇಖರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಡಾ. ನಟಶೇಖರ್ ವೇದಿಕೆಯಲ್ಲಿರುವರು. ಇದು ಸಂಪೂರ್ಣ ಉಚಿತ ಪ್ರವೇಶದ ಕಾರ್ಯಕ್ರಮವಾಗಿದೆ ಎಂದರು. ವಿಶ್ವನಾಥ್ ಶಾಸ್ತ್ರಿ, ನಟರಾಜ್, ಅಶ್ವಿನಿ ಪ್ರಶಾಂತ್, ಶಶಿಕಲಾ, ಶ್ರೀನಿವಾಸ್, ಎಚ್.ಎಸ್. ಗೋಪಾಲಕೃಷ್ಣ ಇದ್ದರು.



# ಉದ್ಯೋಗ ಮಾಡುವುದು ಮುಖ್ಯ ಮಾತ್ರವಲ್ಲ, ಉದ್ಯೋಗ ಸೃಷ್ಟಿಸುವುದು ಮುಖ್ಯ: ಸಿ.ಎಂ ಡಿಕೆಶಿ

**ಆರ್ಯವೈಶ್ಯ ಸಮುದಾಯದ ಬದುಕು ಬವಣೆಗಳನ್ನು ಹತ್ತಿರದಿಂದ ಬಲ್ಲೆ | ಡಿಸೆಂಬರ್‌ನಲ್ಲಿ ಆಯೋಜನೆಯಾಗಿರುವ ಗ್ಲೋಬಲ್ ಆಕ್ಸಿಲೇಟರ್ ಸಮ್ಮಿಟ್‌ಗೆ ಶುಭ ಹಾರೈಕೆ**



**ಬೆಂಗಳೂರು:** ಆರ್ಯವೈಶ್ಯರು ಉದ್ಯೋಗ ಸೃಷ್ಟಿ ಮಾಡುವ ಸಮುದಾಯ. ಸಾವಿರಾರು ಮಂದಿಗೆ ಉದ್ಯೋಗ ಕೊಟ್ಟಿದ್ದೀರಿ. ನಿಮ್ಮ ವೃತ್ತಿ ಬಿಡಬೇಡಿ. ಉದ್ಯೋಗ ಮುಖ್ಯ ಮಾತ್ರವಲ್ಲ, ಉದ್ಯೋಗ ಸೃಷ್ಟಿಸುವುದೂ ಮುಖ್ಯ, ಇದೇ ವಿಚಾರದಲ್ಲಿ ಡಿಸೆಂಬರ್‌ನಲ್ಲಿ ಗ್ಲೋಬಲ್ ಆಕ್ಸಿಲೇಟರ್ ವಿಷನ್ ಸಮ್ಮಿಟ್ ಆಯೋಜನೆಯಾಗಿದ್ದು, ಯಶಸ್ವಿಯಾಗಲಿ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶುಭಹಾರೈಸಿದರು.

ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಕರ್ನಾಟಕ ಆರ್ಯ ವೈಶ್ಯ ಮಹಾಸಭಾ ಆಯೋಜಿಸಿದ್ದ ಗ್ಲೋಬಿಲ್ ಆಕ್ಸಿಲೇಟರ್ ಸಮ್ಮಿಟ್‌ನ ಪ್ರಚಾರ ಅಭಿಯಾನ ಉದ್ಘಾಟನಾ ಕಾರ್ಯಕ್ರಮ ದಲ್ಲಿ ಭಾಗವಹಿಸಿ, ಆರ್ಯವೈಶ್ಯ ಸಮುದಾಯದ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು. ಆರ್ಯವೈಶ್ಯ ಸಮುದಾಯದ ಕುಲದೇವಿ ಕನ್ನಿಕಾ ಪರಮೇಶ್ವರಿ ತಾಯಿಗೆ ನಮಿಸಿ ಮಾತು ಪ್ರಾರಂಭಿಸಿದ ಮುಖ್ಯಮಂತ್ರಿಗಳು, ಆರ್ಯ ವೈಶ್ಯ ಸಮುದಾಯದ ಬದುಕುಬವಣೆಗಳನ್ನು ಹತ್ತಿರದಿಂದ ಬಲ್ಲೆ. ನ್ಯಾಯಧರ್ಮಗಳು ಬೇರೂರಿರುವ ಈ ವಾಸವಿ ಸಮುದಾಯದಲ್ಲಿ ಸಣ್ಣ ಸಮುದಾಯವಲ್ಲ. ವಾಸವಿ ಸಮಾಜ ಸಾವಿರಾರು ಜನರಿಗೆ ಉದ್ಯೋಗ ಸೃಷ್ಟಿ ಮಾಡಿದವರು. ಕನ್ನಡಿಗರೊಂದಿಗೆ ಬೆರತು ಬಾಳುವ ವಾಸವಿ ಸಮಾಜದೊಂದಿಗೆ ಕರ್ನಾಟಕ ಹಾಗೂ ನಾನು ಸದಾ ನಿಮ್ಮೊಂದಿಗಿದ್ದೇವೆ", ಎಂದರು. ನೆಲದ ಕಾನೂನನ್ನು ಗೌರವಿಸುವ ನಿಮ್ಮ ಜೊತೆಗೆ ನಮ್ಮ ಸರ್ಕಾರವಿದೆ. ಮೃದುಭಾಷಿಕರಾಗಿ ಬದುಕು ಕಟ್ಟಿಕೊಂಡಿರುವ ಸಮುದಾಯ ನಿಮ್ಮದು. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಮಹಾತ್ಮಾ ಗಾಂಧಿಯವರೂ ಕೂಡ ಈ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ವ್ಯಾಪಾರಕ್ಕೂ ಸೈ , ಹೋರಾಟಕ್ಕೂ ಸೈ ಎನ್ನುವುದೇ ವಾಸವಿ ಸಮಾಜದ ಶಕ್ತಿ ಎಂದರು.

### ಆರ್ಯವೈಶ್ಯ ಸಮಾದ ಮೇಲೆ ನನಗೆ ಅಪಾರ ನಂಬಿಕೆಯಿದೆ

ಮರಕ್ಕೆ ಬೇರು ಮುಖ್ಯವಾದಂತೆ , ಮನುಷ್ಯನಿಗೆ ನಂಬಿಕೆ ಮುಖ್ಯ, ಆರ್ಯವೈಶ್ಯ ಸಮಾದ ಮೇಲೆ ನನಗೆ ಅಪಾರ ನಂಬಿಕೆಯಿದೆ. ಈ ಸಮುದಾಯಕ್ಕೆ ನೆರವಾಗುವವರ ಕೈ ಹಿಡಿಯುವಿರೆಂಬ ನಂಬಿಕೆಯಿದೆ. ಆರ್ಯವೈಶ್ಯ ಸಮುದಾಯದ ಅಭಿವೃದ್ಧಿಗೆ ನಾನು ಬದ್ಧನಾಗಿದ್ದೇನೆ ಎಂದರು.

### ಯುವ ಸಮುದಾಯಕ್ಕೆ ಪೂರಕವಾದ ಸಮ್ಮಿಟ್ – ಡಿ.ಎಸ್.ಅರುಣ್

ವಿಧಾನ ಪರಿಷತ್ ಸದಸ್ಯ ಅರುಣ್ ಮಾತನಾಡಿ, ಸಮುದಾಯದ ಇಂದಿನ ಯುವ ಸಮುದಾಯ ಉದ್ಯಮ ಸ್ಥಾಪಿಸಲು ಈ ಸಮಿಟ್ ಪೂರಕವಾಗಿದೆ. ಗ್ಲೋಬಲ್ ಆಕ್ಸಿಲೇಟರ್ ವಿಷನ್ ಸಮ್ಮಿಟ್ ಒಂದು ಅವಕಾಶ. ಸ್ಟಾರ್ಟ್ ಅಪ್‌ಗಳಿಗೆ ಪ್ರೋತ್ಸಾಹ ದೊರೆಯಲಿದೆ. ಮುಂದಿನ 25 ವರ್ಷಗಳ ಭವಿಷ್ಯವನ್ನು ರೂಪಿಸಲಿದೆ ಎಂದರು.

### ವಿಶ್ವ ಮಟ್ಟದಲ್ಲಿ ಉದ್ಯಮ ವಿಸ್ತರಿಸಲು ಅವಕಾಶ

ಸ್ವಾಗತ ಕೋರುವ ಜೊತೆಗೆ ಪ್ರಾಸ್ತಾವಿಕವಿಕವಾಗಿ ಮಾತನಾಡಿದ ಕರ್ನಾಟಕ ಆರ್ಯವೈಶ್ಯ ಮಹಾಸಭಾದ ಅಧ್ಯಕ್ಷ ಆರ್.ಪಿ.ರವಿಶಂಕರ್, ಡಿಸೆಂಬರ್ 25, 26, 27ರಂದು ಬೆಂಗಳೂರು ಅರಮನೆ ಮೈದಾನದಲ್ಲಿ ನಡೆಯುವ ಗ್ಲೋಬಲ್ ಆಕ್ಸಿಲೇಟರ್ ವಿಷನ್ ಸಮ್ಮಿಟ್, ಸ್ಥಳೀಯ ಮಟ್ಟದಿಂದ ವಿಶ್ವ ಮಟ್ಟಕ್ಕೆ ಬೆಳೆಯಲು ಒಂದು ಅವಕಾಶವನ್ನು ಇಂದಿನ ಯುವ ಸಮುದಾಯಕ್ಕೆ ಕಲ್ಪಿಸಲಾಗುತ್ತದೆ. ವ್ಯಾಪಾರ, ಉದ್ಯಮವನ್ನು ಸಾಗರದಾಚೆಗೆ ವಿಸ್ತರಿಸಲು ಬೇಕಾದ ಮಾಹಿತಿ ಸಮಿಟ್‌ನಲ್ಲಿ ದೊರೆಯಲಿದೆ ಎಂದರು. ಮಹಾಸಭಾದ ಹಾಲಿ ಕಾರ್ಯಚಟುವಟಿಕೆಗಳ ಬಗ್ಗೆ ಅವರು ಮಾಹಿತಿ ಕೊಟ್ಟರು.

### ಸಮುದಾಯದ ಬೇಡಿಕೆ ಈಡೇರಿಸುವ ಭರವಸೆ

**ಇಂದು ಆರ್ಯವೈಶ್ಯ ಮಹಾಸಭಾದವರು ಸಂಸ್ಥೆಗೆ ಬನಶಂಕರಿಯಲ್ಲಿ ಸ್ಥಳ, ತುಮಕೂರಿನ ಡಾಬಸ್ಪೇಟೆಯ ಶಾಲೆಗೆ ನೆರವು ಸೇರಿದಂತೆ ಕೆಲವು ಬೇಡಿಕೆಗಳನ್ನು ಮುಂದಿಟ್ಟಿದ್ದು, ಅವುಗಳನ್ನು ಈಡೇರಿಸುವ ಭರವಸೆಯನ್ನು ನೀಡುತ್ತಾ, "ಸಮಾಜದವರು ನನ್ನೊಂದಿಗಿರಬೇಕು". ಮೇಲಿನ ಬೇಡಿಕೆಗಳ ಬಗ್ಗೆ ಸಧ್ಯದಲ್ಲಿಯೇ ತೀರ್ಮಾನ ಕೈಗೊಳ್ಳುತ್ತೇನೆ ಎಂದರು. "ನಾನು ನಿಮ್ಮೊಂದಿಗಿದ್ದೇನೆ , ನೀವೂ ನನ್ನೊಂದಿಗಿರಬೇಕು. 2028 ರಲ್ಲಿ ಪುನ: ನಾನು ರಾಜ್ಯದ ಮುಖ್ಯಮಂತ್ರಿಯಾಗುವಂತೆ ಬೆಂಬಲ ನೀಡಬೇಕು" ಎಂದು ಕೋರಿದರು. "ಸ್ವಾತಂತ್ರ್ಯ ಉದ್ಯಾನದಲ್ಲಿ ಈ ಕಾರ್ಯಕ್ರಮ ಆಯೋಜಿಸಿದ್ದು, ನಿಮ್ಮ ಸಮಸ್ಯೆಗಳಿಂದ ನಿಮಗೆ ಬಿಡುಗಡೆ ನೀಡಲು ನಾನು ಬದ್ಧನಾಗಿದ್ದೇನೆ", ಎಂದು ತಿಳಿಸಿದರು.**

**– ಆರ್.ಪಿ.ರವಿಶಂಕರ್**

### ಡಾ.ಕೆ.ಆರ್.ಪ್ರದೀಪ್ ಅವರಿಗೆ ಅಭಿನಂದನೆ

ಇತ್ತೀಚೆಗೆ ತುಮಕೂರು ವಿವಿಯಿಂದ ಗೌರವ ಡಾಕ್ಟರೇಟ್ ಪಡೆದ ಡಾ.ಕೆ.ಆರ್.ಪ್ರದೀಪ್ ಅವರನ್ನು ಇದೇ ವೇದಿಕೆಯಲ್ಲಿ ಅಭಿನಂದಿಸಿ, ಗೌರವಿಸಲಾಯಿತು. ಆಂಧ್ರಪ್ರದೇಶದ ವಾಣಿಜ್ಯ, ಕೈಗಾರಿಕೆ, ಆಹಾರ ಸಂಸ್ಕರಣಾ ಇಲಾಖೆಯ ಸಚಿವ ಟಿ.ಜಿ.ಭರತ್, ಆಂಧ್ರಪ್ರದೇಶದ ಶಾಸಕರುಗಳಾದ ರಾಜಗೋಪಾಲ್ ಶ್ರೀರಾಮ್ (ತಾತಯ್ಯ), ಧನಪಾಲ್ ಸೂರ್ಯನಾರಾಯಣ ಗುಪ್ತ, ರಾಜ್ಯ ಸಭಾ ಸದಸ್ಯ ಟಿ.ಜಿ.ವೆಂಕಟೇಶ್, ಬೊಗ್ಗರಪು ದಯಾನಂದ, ಕರ್ನಾಟಕದ ಮಾಜಿ ಶಾಸಕ ಎಚ್.ಪಿ.ಮಂಜುನಾಥ್, ಜೈವಿಕ ಇಂಧನ ಅಭಿವೃದ್ದಿ ಮಂಡಳಿ ಅಧ್ಯಕ್ಷ ಎಸ್.ಇ.ಸುಧೀಂದ್ರ, ಕರ್ನಾಟಕ ಆರ್ಯವಯಶ್ಯ ಅಭಿವೃದ್ದಿ ನಿಗಮದ ಅಧ್ಯಕ್ಷ ಕೆ.ವಿ.ರಾಂಪ್ರಸಾದ್, ಕರ್ನಾಟಕ ಆರ್ಯವೈಶ್ಯ ಮಹಿಳಾ ಮಂಡಳಿ ಅಧ್ಯಕ್ಷೆ ಉಮಾಸಾಯಿರಾಂ, ಆಂಧ್ರಪ್ರದೇಶ ಆರ್ಯವೈಶ್ಯ ಅಭಿವೃದ್ದಿ ಮಂಡಳಿ ಅಧ್ಯಕ್ಷೆ ಸುಜಾತ, ಪ್ರಮುಖರಾದ ಭೀಮರಾಜ್, ನಾಗಮಹೇಶ್, ಪ್ರಶಾಂತ್ ಮುಂತಾದವರು ಉಪಸ್ಥಿತರಿದ್ದರು.

## ಬಹಿರಂಗ ಹರಾಜು

ಮೈಸೂರು:– ಹೆಚ್.ಡಿ.ಕೋಟೆ ತಾಲ್ಲೂಕಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ತರಬೇತಿಗೆ ಬಳಸಿ ಪ್ರಸ್ತುತ ನಿರುಪಯುಕ್ತವಾಗಿರುವ ಸಣ್ಣ ಉಪಕರಣಗಳು, ಎಂ.ಎಸ್ /ಅಲ್ಯೂಮಿನಿಯಂ/ಬ್ರಾಸ್ ಸ್ಕ್ರಾಪ್, ಕಚ್ಚಾ ಸಾಮಗ್ರಿಗಳು, ಯಂತ್ರೋಪಕರಣಗಳು ಹಾಗೂ ಪೀಠೋಪಕರಣಗಳ ವಿಲೇವಾರಿಗಾಗಿ ಸಂಸ್ಥೆಯ ಆವರಣದಲ್ಲಿ ಸೆಪ್ಟೆಂಬರ್ 23 ಬೆಳಿಗ್ಗೆ 11:30 ಗಂಟೆಗೆ ಬಹಿರಂಗ ಹರಾಜು ಆಯೋಜಿಸಲಾಗಿದೆ. ಆಸಕ್ತ ಹರಾಜುದಾರರು ಕಚೇರಿ ಕೆಲಸದ ಸಮಯದಲ್ಲಿ ಸಂಸ್ಥೆಗೆ ಭೇಟಿ ನೀಡಿ ನಿರುಪಯುಕ್ತ ಸಾಮಗ್ರಿಗಳನ್ನು ಪರಿಶೀಲಿಸಬಹುದಾಗಿದ್ದು, ಅತಿ ಹೆಚ್ಚು ಬಿಡ್ ಕೂಗುವವರಿಗೆ ಸಾಮಗ್ರಿಗಳನ್ನು ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಪ್ರಾಚಾರ್ಯರಾದ ನಟರಾಜ ಡಿ.ಸಿ (ಮೊ: 9945653853) ಅಥವಾ ಕಚೇರಿ ಅಧೀಕ್ಷಕರಾದ ಗುರುಪ್ರಸನ್ನ ಎಸ್. (ಮೊ: 9480294926) ಅವರನ್ನು ಸಂಪರ್ಕಿಸಬಹುದು ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ನಟರಾಜ ಡಿ.ಸಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಕಲಿ ಔಷಧಿ ಮಾರಾಟ ತಡೆಗೆ ಒತ್ತಾಯ



ಮೈಸೂರು: ರಾಜ್ಯದಲ್ಲಿ ನಕಲಿ ಔಷಧಿಗಳ ಮಾರಾಟ ತಡೆಗಟ್ಟಲು ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಪ್ರಜ್ಞಾವಂತ ನಾಗರಿಕ ವೇದಿಕೆ ತಹಸೀಲ್ದಾರ್ ಶಿವಪ್ರಸಾದ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಸಿದ್ದಾರ್ಥ ನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿಗೆ ಭೇಟಿ ನೀಡಿ ರಾಜ್ಯದಲ್ಲಿ ನಕಲಿ ಔಷಧಿಗಳ ಮಾರಾಟ ತಡೆಗಟ್ಟಲು ಸರ್ಕಾರ ಈ ಕೂಡಲೇ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ರಾಜ್ಯದಲ್ಲಿ ನಕಲಿ ಹಾಗೂ ಕಳಪೆ ಗುಣಮಟ್ಟದ ಔಷಧಿಗಳ ಜಾಲ ವ್ಯಾಪಕವಾಗಿ ಹರಡುತ್ತಿರುವುದು ಅತ್ಯಂತ ಆತಂಕಕಾರಿ ಸಂಗತಿಯಾಗಿದೆ. ಇತ್ತೀಚಿನ ತನಿಖೆಯಲ್ಲಿ ಸುಮಾರು 3500 ಔಷಧ ಮಾದರಿಗಳನ್ನು ಪರೀಕ್ಷಿಸಿದಾಗ, ಸುಮಾರು 300 ಔಷಧಗಳು ನಕಲಿ ಅಥವಾ ಗುಣಮಟ್ಟವಿಲ್ಲದವುಗಳಾಗಿವೆ ಎಂಬುದು ಬೆಳಕಿಗೆ ಬಂದಿದೆ ಎಂದರು.

ವಿಶೇಷವಾಗಿ ಆಂಟಿಬಯೋಟಿಕ್ಸ್, ಪ್ಯಾರಾಸಿಟಮಾಲ್ ಮತ್ತು ವಿವಿಧ ಸಿರಪ್‌ಗಳಂತಹ ಅಗತ್ಯ ಔಷಧಿಗಳು ನಕಲಿಯಾಗಿ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿರುವುದು ಸಾರ್ವಜನಿಕ ಆರೋಗ್ಯಕ್ಕೆ ಗಂಭೀರ ಅಪಾಯವನ್ನುಂಟು ಮಾಡುತ್ತಿದೆ. ಇಂತಹ ಕೃತ್ಯಗಳು ನಾಗರಿಕರ ಜೀವದೊಂದಿಗೆ ಚೆಲ್ಲಾಟವಾಡುವ ಅಪರಾಧವಾಗಿದ್ದು, ಇದನ್ನು ಯಾವುದೇ ಕಾರಣಕ್ಕೂ ಸಹಿಸಲಾಗದು. ಆದ್ದರಿಂದ ಜಿಲ್ಲಾಡಳಿತವು ಔಷಧ ನಿಯಂತ್ರಣ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಸಂಬಂಧಿತ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಜಿಲ್ಲೆಯಾದ್ಯಂತ ಔಷಧ ಅಂಗಡಿಗಳು, ಗೋದಾಮುಗಳು ಹಾಗೂ ವಿತರಣಾ ಕೇಂದ್ರಗಳ ಮೇಲೆ ವಿಶೇಷ ತಪಾಸಣೆ ನಡೆಸಬೇಕು. ನಕಲಿ ಔಷಧ ಜಾಲದ ಹಿಂದಿರುವ ಅಪರಾಧಿಗಳನ್ನು ಪತ್ತೆಹಚ್ಚಿ ಕಾನೂನು ಪ್ರಕಾರ ಕಠಿಣ ಶಿಕ್ಷೆಗೆ ಒಳಪಡಿಸುವಂತೆ ಕ್ರಮ ಕೈಗೊಳ್ಳಬೇಕೆಂದರು. ಇದೇ ಸಂದರ್ಭದಲ್ಲಿ ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೋಳ ಜಗದೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಆನಂದ್, ಸಂದೇಶ್ ಪವಾರ್, ದಯಾನಂದ ನಾಯಕ್ ಇನ್ನಿತರರು ಹಾಜರಿದ್ದರು.

**ನೇರ ಫೋನ್ ಇನ್ ಕಾರ್ಯಕ್ರಮ**

# 34 ದೂರುಗಳು ದಾಖಲು

## ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿದ ಜಿಲ್ಲಾಡಳಿತ

ಚಾಮರಾಜನಗರ: ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಿ ಪರಿಹರಿಸುವ ಸಲುವಾಗಿ ಜಿಲ್ಲಾಡಳಿತದ ವತಿಯಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನೇರ ಫೋನ್ ಇನ್ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಜಿಲ್ಲಾಧಿಕಾರಿ ಶ್ರೀರೂಪ ಅವರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಒಟ್ಟು 34 ದೂರುಗಳು ದಾಖಲಾಗಿವೆ.

ಜಿಲ್ಲೆಯ ನಾನಾ ಭಾಗಗಳಿಂದ ಕರೆ ಮಾಡಿದ ಸಾರ್ವಜನಿಕರು ಮೂಲಸೌಕರ್ಯಗಳ ಕೊರತೆ, ಕೆಎಸ್.ಆರ್.ಟಿಸಿ ಬಸ್ಸುಗಳ ವ್ಯವಸ್ಥೆ ಸೇರಿದಂತೆ ಹಲವು ಸಮಸ್ಯೆಗಳ ಬಗ್ಗೆ ಅಧಿಕಾರಿಗಳ ಗಮನಸೆಳೆದರು.

### ಗ್ರಾಮೀಣ ಭಾಗದ ಮೂಲಸೌಕರ್ಯ ಮತ್ತು ನೀರಿನ ಸಮಸ್ಯೆ

ತಾಲೂಕಿನ ಮಾದಾಪುರ ಗ್ರಾಮದ ಸ್ಥಳೀಯರೊಬ್ಬರು ಕರೆ ಮಾಡಿ, ಗ್ರಾಮದಲ್ಲಿ ಮೂಲ ಸೌಲಭ್ಯಗಳಿಗೆ ತೊಂದರೆಯಾಗಿದ್ದು, ಚರಂಡಿ ತುಂಬಿ ದುರ್ವಾಸನೆ ಬರುತ್ತಿದೆ. ಕೂಡಲೇ ಸ್ವಚ್ಛಗೊಳಿಸಿ ಬೀದಿ ದೀಪದ ವ್ಯವಸ್ಥೆ ಮಾಡಿಕೊಡಬೇಕು ಎಂದು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಯವರು ಅಗತ್ಯ ಕ್ರಮ ವಹಿಸಲು ಸೂಚಿಸುವುದಾಗಿ ತಿಳಿಸಿದರು. ಹಾಗೆಯೇ, ಹನೂರು ತಾಲೂಕಿನ ಹುತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಕೆರೆಗೆ ನೀರು ತುಂಬಿಸಿದರೆ ಶಾಶ್ವತ ಪರಿಹಾರ ಸಿಗಲಿದೆ ಎಂದು ಸ್ಥಳೀಯರು ಮನವಿ ಮಾಡಿದರು. ಈ ಬಗ್ಗೆ ಉತ್ತರಿಸಿದ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶ್ರುತಿ ಅವರು, ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

### ನಗರದ ಸಮಸ್ಯೆಗಳು ಮತ್ತು ಸಾರಿಗೆ ವ್ಯವಸ್ಥೆ



ನಗರದ ಕರಿನಂಜನಪುರದಿಂದ ಕರೆ ಮಾಡಿದ ನಾಗರಿಕರೊಬ್ಬರು, ಪಿಡಬ್ಲ್ಯೂಡಿ ಶಾಲೆಯ ಹತ್ತಿರ ಮ್ಯಾನ್ ಹೋಲ್ ಪೈಪ್ಲೈನ್‌ಗಾಗಿ ಗುಂಡಿ ತೆಗೆದು ಬಹಳ ದಿನಗಳಿಂದ ಹಾಗೆಯೇ ಬಿಡಲಾಗಿದೆ, ಇದರಿಂದ ಓಡಾಟಕ್ಕೆ ತೊಂದರೆಯಾಗಿದೆ ಎಂದು ದೂರಿದರು. ಸಭೆಯಲ್ಲಿಯೇ ಇದ್ದ ನಗರಸಭೆ ಪೌರಾಯುಕ್ತರಿಗೆ ಕೂಡಲೇ ಸಮಸ್ಯೆ ಪರಿಹರಿಸುವಂತೆ ಜಿಲ್ಲಾಧಿಕಾರಿಯವರು ಸೂಚನೆ ನೀಡಿದರು. ಯಳಂದೂರು ಪಟ್ಟಣದಿಂದ ವಿದ್ಯಾರ್ಥಿಗಳು ಹಾಗೂ ಕೂಲಿ ಕಾರ್ಮಿಕರು ಕೊಳ್ಳೇಗಾಲ ಮತ್ತು ಚಾಮರಾಜನಗರಕ್ಕೆ ಪ್ರಯಾಣಿಸಲು ಬಸ್ಸುಗಳು ಮೊದಲೇ ಭರ್ತಿಯಾಗಿ ಬರುವುದರಿಂದ ತೊಂದರೆಯಾಗುತ್ತಿದ್ದು, ಯಳಂದೂರಿನಿಂದಲೇ ಪ್ರತ್ಯೇಕ ಬಸ್ ವ್ಯವಸ್ಥೆ ಮಾಡಬೇಕು ಎಂದು ನಿವಾಸಿಯೊಬ್ಬರು ಕೋರಿದರು. ಈ ಬಗ್ಗೆ ಕೆಎಸ್. ಆರ್.ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

### ಅಕ್ರಮ ಮದ್ಯ ಮಾರಾಟ ಸ್ವಚ್ಛತೆಯ ಕೊರತೆ

**ಬದನಗುಪ್ಪೆ ಕೈಗಾರಿಕಾ ಪ್ರದೇಶದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡಲಾಗುತ್ತಿದ್ದು, ಸಣ್ಣಪುಟ್ಟ ಅಂಗಡಿಗಳಲ್ಲಿ ಕಳ್ಳತನವಾಗುತ್ತಿದೆ ಎಂಬ ದೂರಿಗೆ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್ ಅವರು ಸೂಕ್ತ ಕ್ರಮ ವಹಿಸುವ ಭರವಸೆ ನೀಡಿದರು. ತೆರಕಣಾಂಬಿಯ ಸರ್ಕಾರಿ ಶಾಲೆ ಬಳಿ ಕಸ ಸುರಿಯಲಾಗುತ್ತಿದ್ದು, ಗ್ರಾಮ ಪಂಚಾಯಿತಿಯಿಂದ ಸ್ವಚ್ಛತೆ ನಡೆಯುತ್ತಿಲ್ಲ ಎಂಬ ದೂರಿಗೆ ಸ್ಪಂದಿಸಿದ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶ್ರುತಿ ಅವರು, ಇಂದೇ ಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ ಸೂಚನೆ ನೀಡಿ ಸ್ವಚ್ಛತೆ ಕೈಗೊಳ್ಳಲು ತಿಳಿಸಲಾಗುವುದು ಎಂದರು.**

### ಇತರೆ ಪ್ರಮುಖ ದೂರುಗಳು

**ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯರ ನೇಮಕ, ಜಲ ಜೀವನ್ ಮಿಷನ್ ಅಡಿ ನಿರ್ಮಾಣವಾದ ವಾಟರ್ ಟ್ಯಾಂಕ್ ತೆರೆದುಕೊಂಡಿರುವುದು, ನಗರದಲ್ಲಿ ಅನುಮತಿ ಪಡೆಯದ ಅನಧಿಕೃತ ಕೋಚಿಂಗ್ ಸೆಂಟರ್ ಮತ್ತು ಟ್ಯೂಟೋರಿಯಲ್ಗಳ ಕಾರ್ಯನಿರ್ವಹಣೆ, ಪಡಿತರ ವಿತರಣೆಯ ಸಮಯದ ಫಲಕ ಅಳವಡಿಸದಿರುವುದು ಸೇರಿದಂತೆ ಇನ್ನಿತರ ಮೂಲ ಸೌಕರ್ಯ ಸಮಸ್ಯೆಗಳ ಬಗ್ಗೆ ಸಾರ್ವಜನಿಕರು ಜಿಲ್ಲಾಧಿಕಾರಿಯವರ ಗಮನಕ್ಕೆ ತಂದರು. ಈ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ತಹಶೀಲ್ದಾರರು ಉಪಸ್ಥಿತರಿದ್ದರು.**

## ಫೈನಾನ್ಸ್ ಕಿರುಕುಳದಿಂದ ವ್ಯಕ್ತಿ ಸಾವು: ಪ್ರತಿಭಟನೆ



ಕೊಳ್ಳೇಗಾಲ. ಖಾಸಗಿ ಫೈನಾನ್ಸ್ ರವರ ಕಿರುಕುಳಕ್ಕೆ ವ್ಯಕ್ತಿಯೊರ್ವ ವಿಷ ಕುಡಿದು ಸಾವನ್ನಪ್ಪಿದ್ದ ಹಿನ್ನಲ್ಲೆ ಕುಣಗಳ್ಳಿ ಗ್ರಾಮಸ್ಥರು ಹಾಗೂ ವಿವಿಧ ಸಂಘಟನೆಯ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಪಟ್ಟಣದ ರಾಜಕುಮಾರ ರಸ್ತೆಯಲ್ಲಿರುವ ಖಾಸಗಿ ಫೈನಾನ್ಸ್ ಬಳಿ ಧಿಕ್ಕಾರ ಕೂಗುವ ಮೂಲಕ ಪ್ರಗತಿಪರ ಸಂಘಟನೆ ಪದಾಧಿಕಾರಿಗಳು ಹಾಗೂ ಕುಣಗಳ್ಳಿ ಗ್ರಾಮಸ್ಥರು ಪ್ರತಿಭಟಿಸಿದರು. ಫೈನಾನ್ಸ್ ನಿಂದ ಹಣ ಪಡೆದಿದ್ದು ಹಣ ಕಟ್ಟುವಲ್ಲಿ ವಿಳಂಬ ವಾದ್ದುದರಿಂದ ಫೈನಾನ್ಸ್ ರವರು ಕುಣಗಳ್ಳಿ ಗ್ರಾಮದ ಮಹೇಶ್ ಮನೆಗೆ ಅವ್ಯಾಚ ಪದಗಳಿಂದ ಬೈದು ನಿಂದಿಸಿದ್ದರಿಂದ ಬೇಸತ್ತು ಮಹೇಶ್ ಫೈನಾನ್ಸ್ ರವರ ಎದುರಿಗೆ ಜು.28 ರಂದು ವಿಷ ಸೇವಿಸಿ ಅಸ್ವಸ್ಥನಾಗಿ ಮೈಸೂರು ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾನೆ. ಆದ್ದರಿಂದ ಕೂಡಲೇ ಮಹೇಶ್ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು. ಮೃತ್ತರ ಮಕ್ಕಳ ವಿದ್ಯಾಭ್ಯಾಸ ನೀಡಲು ಫೈನಾನ್ಸ್ ರವರು ಅವರ ಕುಟುಂಬವನ್ನು ದತ್ತು ಪಡೆಯಬೇಕು ಎಂದು ಆಗ್ರಹಿಸಿದರು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಎಲ್&ಟಿ ಫೈನಾನ್ಸ್ ಎದುರು ಉಗ್ರಹೋರಾಟ ನಡೆಸಬೇಕು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಮೃತ್ತನ ಪತ್ನಿ ಶಾಂತಮ್ಮ, ಮೃತ್ತನ ಚಿಕ್ಕಪ್ಪ ಮರಿಸ್ವಾಮಿ, ಜಿ.ಪಂ ಮಾಜಿ ಸದಸ್ಯ ಕಮಲ್, ರೈತ ಸಂಘದ ರಾಜ್ಯಾಧ್ಯಕ್ಷ ಶೈಲೇಂದ್ರ, ತಾಲ್ಲೂಕು ಅಧ್ಯಕ್ಷ ಮೋಳೆ ರಾಜು, ಪ್ರಧಾನ ಕಾರ್ಯದರ್ಶಿ ಪೆರಿಯಾನಾಯಗಂ, ಪಿವಿಎಸ್‌ಎಸ್ ಜಿಲ್ಲಾಧ್ಯಕ್ಷ ಕುಣಗಳ್ಳಿ ಮಹೇಶ್, ಕಾರ್ಯಧ್ಯಕ್ಷ ಮಹದೇವ, ಹೋಬಳಿ ಅಧ್ಯಕ್ಷ ಗೋವಿಂದರಾಜು,ಕರವೇ(ಪ್ರವೀಣ್ ಶೆಟ್ಟಿ ಬಣ) ಅಧ್ಯಕ್ಷ ಜಗದೀಶ್ ಶಾಸ್ತ್ರೀ, ಕರವೇ (ನಾರಾಯಣ ಗೌಡ ಬಣ)ಅಧ್ಯಕ್ಷ ಮೆಹಬೂಬ್ ಷರೀಫ್, ಯಜಮಾನರು ಶ್ರೀನಿವಾಸ್ ಮೂರ್ತಿ, ಕುಮಾರ್, ಪುಟ್ಟಮ್ಮ, ರತ್ನಮ್ಮ, ಮಂಗಳಮ್ಮ ಹಾಗೂ ಇತರರು ಇದ್ದರು.

## ಗ್ರಾಮೀಣ ಪ್ರದೇಶಗಳಲ್ಲಿ ಬಾಲ್ಯ ವಿವಾಹ ತಡೆಗೆ ಆಶಾ ಕಾರ್ಯಕರ್ತರ ಸಹಕಾರ ಅಗತ್ಯ



ಗುಂಡ್ಲುಪೇಟೆ: ಗ್ರಾಮೀಣ ಪ್ರದೇಶಗಳಲ್ಲಿ ಬಾಲ್ಯ ವಿವಾಹ ಪದ್ಧತಿಯನ್ನು ಸಂಪೂರ್ಣವಾಗಿ ತಡೆಗಟ್ಟುವಲ್ಲಿ ಆಶಾ ಕಾರ್ಯಕರ್ತರು ಸಮಾಜಕ್ಕೆ ಅಗತ್ಯವಾಗಿದೆ ಎಂದು ಅಪರ ಸಿವಿಲ್ ಮತ್ತು ಜೆಎಂಎಫ್ಸಿ ನ್ಯಾಯಾಧೀಶ ಗಿರೀಶ್ ಆರ್.ಬಿ. ಹೇಳಿದರು.

ಪಟ್ಟಣದ 21ನೇ ವಾರ್ಡಿನ ಸಮುದಾಯ ಭವನದಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ, ತಾಲೂಕು ಅಂಗನವಾಡಿ ನೌಕರರ ಸಂಘ ಹಾಗೂ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರದ ಸಹಯೋಗದಲ್ಲಿ ಆಯೋಜಿಸಿದ್ದ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಬಾಲ್ಯ ವಿವಾಹವು ಮಕ್ಕಳ ಹಕ್ಕುಗಳಿಗೆ ಧಕ್ಕೆ ತರುವುದಲ್ಲದೆ, ಬಾಲಕಿಯರ ಶಿಕ್ಷಣ, ಆರೋಗ್ಯ ಹಾಗೂ ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಗ್ರಾಮ ಮಟ್ಟದಲ್ಲಿಯೇ ಜಾಗೃತಿ ಮೂಡಿಸಿ ಬಾಲ್ಯ ವಿವಾಹ ನಡೆಯದಂತೆ ತಡೆಯುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ 2006, ಪೋಕ್ಸೋ ಕಾಯ್ದೆ 2012, ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣೆ ಕಾಯ್ದೆ 2005 ಹಾಗೂ ವರದಕ್ಷಿಣೆ ನಿಷೇಧ ಕಾಯ್ದೆ ಕುರಿತು ಕಾನೂನು ಅರಿವು ಮೂಡಿಸಲಾಯಿತು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹೇಮಾವತಿ ಹಾಗೂ ಸಂಪನ್ಮೂಲ ವ್ಯಕ್ತಿ ಮತ್ತು ಬಾಲ ನ್ಯಾಯ ಮಂಡಳಿ ಸದಸ್ಯೆ ಸರಸ್ವತಿ ಎಂ.ಎನ್. ರವರು ಮಾತನಾಡಿ, ಮಹಿಳೆಯರು ಮತ್ತು ಮಕ್ಕಳಿಗೆ ಕಾನೂನು ನೀಡಿರುವ ರಕ್ಷಣೆ ಹಾಗೂ ಹಕ್ಕುಗಳ ಬಗ್ಗೆ ವಿವರಿಸಿದರು. ತಾಲೂಕು ಸ್ತ್ರೀಶಕ್ತಿ ಮಹಿಳಾ ಒಕ್ಕೂಟದ ಅಧ್ಯಕ್ಷೆ ದ್ರಾಕ್ಷಾಯಣಮ್ಮ, ತಾಲೂಕು ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಎಂ. ಗುರುಮಲ್ಲಮ್ಮ ಸೇರಿದಂತೆ ಇತರರು ಉಪಸ್ಥಿತರಿದ್ದರು.

**ನಂಜುಂಡಸ್ವಾಮಿ ಹೇಳಿಕೆ | ಕರಿನಂಜನಪುರ ಡೇರಿ ಸರ್ವಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟನೆ**

# ಚಾಮುಲ್‌ನಿಂದ ಐಸ್‌ಕ್ರೀಂ ಘಟಕ ಶೀಘ್ರದಲ್ಲಿಯೇ ಆರಂಭ



ಚಾಮರಾಜನಗರ, ಚಾಮುಲ್ ಅವರಣದಲ್ಲಿ ನಂದಿನಿ ಐಸ್‌ಕ್ರೀಂ ಘಟಕ ನಿರ್ಮಾಣ ಕಾಮಗಾರಿಗೆ ಸದ್ಯದಲ್ಲಿಯೇ ಶಂಕುಸ್ಥಾಪನೆ ಮಾಡಲಿದ್ದು, ಐಸ್‌ಕ್ರೀಂ ಘಟಕ ನಿರ್ಮಾಣದಿಂದ ರೈತರಿಗೆ ಇನ್ನು ಹೆಚ್ಚಿನ ಲಾಭವಾಗಲಿದೆ ಎಂದು ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ ತಿಳಿಸಿದರು.

ನಗರದ ಸಮೀಪದ ಕರಿನಂಜನಪುರ ಹಾಲು ಉತ್ಪಾದಕರ ಸಹಕಾರ ಸಂಘದ 2025–26ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಹಕಾರ ಸಚಿವರಾಗಿದ್ದ ದಿ. ಎಚ್.ಎಸ್. ಮಹದೇವಪ್ರಸಾದ್ ಅವರ ಶ್ರಮದ ಫಲವಾಗಿ ಇಂದು ಜಿಲ್ಲೆಯಲ್ಲಿ ಪ್ರತ್ಯೇಕ ಹಾಲು ಒಕ್ಕೂಟ ರಚನೆಯಾಗಿದೆ. ಅವರು ಅಂದು ಕುದೇರು ಬಳಿ 42 ಎಕರೆ ಜಾಗವನ್ನು ಮಂಜೂರು ಮಾಡಿಸಿ, ಪ್ರಭಾವ ಬೆಳೆಸಿ, ಪ್ರತ್ಯೇಕ ಹಾಲು ಒಕ್ಕೂಟದ ರಚನೆ ಮಾಡಿದ ಪರಿಣಾಮ ನಮ್ಮ ಒಕ್ಕೂಟ ಲಾಭದಲ್ಲಿ ನಡೆಯುತ್ತಿದೆ. ಪ್ರತಿ ದಿನ 3 ಲಕ್ಷಕ್ಕೂ ಹೆಚ್ಚು ಲೀಟರ್ ಹಾಲ ಸಂಗ್ರಹವಾಗುತ್ತಿದೆ. ನಮ್ಮ ಜಿಲ್ಲೆಯಲ್ಲಿಯೇ ಹಾಲು ಮೊಸರು ಸೇರಿ 1ಲಕ್ಷ ಲೀಟರ್ ಹಾಲು ಮಾರಾಟವಾಗಿ, ಇನ್ನುಳಿದ ಹಾಲನ್ನು ಪೌಡರ್ ಹಾಗೂ ಇತರೇ ಒಕ್ಕುಟಗಳಿಗೆ ಕಳುಹಿಸುತ್ತಿದ್ದೇವೆ.

ನಂದಿನಿ ಐಸ್‌ಕ್ರಿಂಗೆ ಹೆಚ್ಚಿನ ಬೇಡಿಕೆ ಇದೆ. ಕೇರಳ, ತಮಿಳುನಾಡು ಹಾಗೂ ರಾಜ್ಯದ ಇತರೇ ಜಿಲ್ಲೆಗಳಲ್ಲಿ ನಂದಿನಿ ಐಸ್‌ಕ್ರೀಂಗಾಗಿ ಬೇಡಿಕೆ ಇದನ್ನು ಇದನ್ನ ಮನಗಂಡು ನಮ್ಮ ಒಕ್ಕೂಟ, ಸರ್ಕಾರ ಹಾಗೂ ಮಹಾ ಮಂಡಳದ ನೆರವು ಪಡೆದು ಚಾಮುಲ್ ಆವರಣದಲ್ಲಿ ಐಸ್‌ಕ್ರೀಂ ಘಟಕವನ್ನು ಸ್ಥಾಪನೆ ಮಾಡಲಾಗುತ್ತದೆ. ಇದರ ಸಂಪೂರ್ಣ ಲಾಭವನ್ನು ರೈತರಿಗೆ ನೀಡುವ ಚಿಂತನೆ ನಮ್ಮದಾಗಿದೆ. ಕ್ರಿಯಾ ಯೋಜನೆ ಸಿದ್ದವಾಗಿದ್ದು, ಇನ್ನು ಒಂದು ತಿಂಗಳಲ್ಲಿ ಘಟಕ ನಿರ್ಮಾಣಕ್ಕೆ ಭೂಮಿ ಪೂಜೆ ಮಾಡಿ, ಘಟಕವನ್ನು ಆರಂಭಿಸುತ್ತೇವೆ ಎಂದು ನಂಜುಂಡಪ್ರಸಾದ್ ತಿಳಿಸಿದರು.

ರೈತ ಕಲ್ಯಾಣ ಟ್ರಸ್ಟ್‌ನ ಸದಸ್ಯರಾಗಿದ್ದು, ಅಕಾಲಿಕವಾಗಿ ಮೃತಪಟ್ಟರೆ ಅಂಥ ರೈತರಿಗೆ ಕಲ್ಯಾಣ ಟ್ರಸ್ಟ್‌ನಿಧಿಯಿಂದ ನೀಡುತ್ತಿದ್ದ ಹಣವನ್ನು 20 ಸಾವಿರ ರೂ. ಗಳಿಗೆ ಏರಿಕೆ ಮಾಡಲಾಗಿದೆ. ವೈಜ್ಞಾನಿಕ ಹಾಗು ತಾಂತ್ರಿಕವಾಗಿ ಹೈನುಗಾರಿಕೆಯನ್ನು ರೈತರು ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ ರಿಯಾಯಿತಿ ದರದಲ್ಲಿ ರಬ್ಬರ್ ಮ್ಯಾಟ್ ಅನ್ನು ಒಕ್ಕೂಟದಿಂದ ನೀಡಲಾಗುತ್ತದೆ. ಈಗಾಗಲೇ ಮೇವು ಕಟಾವ್ ಯಂತ್ರವನ್ನು ನೀಡುತ್ತಿದ್ದೇವೆ. ಇದರೊಟ್ಟಿಗೆ ರೈತರು ಸರಬರಾಜು ಮಾಡಿದ ಹಾಲಿಗೆ ಸ್ಪರ್ಧಾತ್ಮಕ ಬೆಲೆ ನೀಡುತ್ತಿದ್ದು, ಸಹಾಯಧನ ಹಾಗೂ ಹಾಲಿನ ದರ ಏರಿಕೆ ಮಾಡುವಂತೆ ಸರ್ಕಾರ ಹಾಗು ಹಾಲು ಮಹಾಮಂಡಲಕ್ಕೆ ಮನವಿ ಮಾಡಿಕೊಂಡಿದ್ದೇವೆ. ಗುಜರಾತ್ ಪ್ರಥಮ ಸ್ಥಾನದಲ್ಲಿದ್ದರೆ, ನಮ್ಮ ರಾಜ್ಯ ಹಾಲು ಶೇಖರಣೆ ಮತ್ತು ಮಾರಾಟ ಮತ್ತು ಉತ್ಕೃಷ್ಟತೆಯಲ್ಲಿ ನಂದಿನಿ ಬ್ರಾಂಡ್ 2 ಸ್ಥಾನದಲ್ಲಿದೆ. ನಮ್ಮೆಲ್ಲರ ಹೆಮ್ಮೆಯಾಗಿದೆ. ರೈತರು ಗುಣಮಟ್ಟದ ಹಾಲು ಹಾಕುವ ಮೂಲಕ ರೈತ ಸಂಸ್ಥೆಯನ್ನು ಇನ್ನು ಹೆಚ್ಚಿನ ಪ್ರಗತಿಗೆ ಮುಂದಾಗಬೇಕು ಎಂದು ತಿಳಿಸಿದರು.

ಚಾಮುಲ್ ನಿರ್ದೇಶಕರಾದ ಎಚ್.ಎಸ್. ಬಸವರಾಜು, ಸದಾಶಿವಮೂರ್ತಿ ಮಾತನಾಡಿ, ಕರಿನಂಜನಪುರ ಡೇರಿಗೆ 45 ವರ್ಷಗಳ ಇತಿಹಾಸ ಇದೆ. ಗುಣಮಟ್ಟದ ಹಾಲು ಶೇಖರಣೆ ಮಾಡುವುದಲ್ಲಿ ಮುಂಚೂಣಿಯಲ್ಲಿದ್ದು, ನಗರಕ್ಕೆ ಹೊಂದಿಕೊಂಡಂತೆ ಇರುವ ಕಾರಣ ಸ್ಥಳೀಯ ಮಾರಾಟ ಹೆಚ್ಚಾಗಿದೆ. ಹೀಗಾಗಿ ಲಾಭಾಂಶ ಹೆಚ್ಚಿದೆ. ಈ ಹಣದಲ್ಲಿ ರೈತರ ಅಭಿವೃದ್ದಿಗೆ ಬಳಕೆಯಾ ಗುತ್ತಿದೆ. ಹಸು ಎತ್ತುವ ಯಂತ್ರವನ್ನು ಖರೀದಿ ಮಾಡು ವುದು ಸೇರಿದಂತೆ ಒಕ್ಕೂಟ ಹಾಗೂ ಸರ್ಕಾರದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ ಎಂದರು. ಸಂಘದ ಅಧ್ಯಕ್ಷ ಬಸವಣ್ಣ ಮಾತನಾಡಿ, ನಮ್ಮ ಸಂಘವು ಉತ್ತಮವಾಗಿ ವಹಿವಾಟು ನಡೆಸಿ, ಪ್ರಸಕ್ತ ವರ್ಷದಲ್ಲಿ 69.48 ಲಕ್ಷ ರೂ. ಹಾಲು ಖರೀದಿ ಮಾಡಿದೆ. 3.88 ಲಕ್ಷ ರೂ.ಗಳ ನಿವ್ವಳ ಲಾಭ ಬಂದಿದ್ದು, ಸದಸ್ಯೆಇಗೆ 1.81 ಲಕ್ಷ ರೂ. ಗಳ ಬೋನಸ್ ವಿತರಣೆ ಮಾಡಲಾಗುತ್ತದೆ ಎಂದರು. ಸಂಘದ ಮುಖ್ಯ ಕಾರ್ಯನಿರ್ವಾಹಕ ವೃಷಬೇಂದ್ರ ವಾರ್ಷಿಕ ವರದಿಯನ್ನು ಮಂಡಿಸಿ, ಅನುಮೋದನೆ ಪಡೆದುಕೊಂಡರು. ಸಭೆಯಲ್ಲಿ ಚಾಮುಲ್ ಉಪ ವ್ಯವಸ್ಥಾಪಕ ಡಾ. ಅಮರ್, ವಿಸ್ತರಣಾಧಿಕಾರಿ ಎಚ್.ಜೆ. ಲಕ್ಷ್ಮಿ, ವಿರೂಪಾಕ್ಷ ನಿರ್ದೇಶಕರಾದ ಕೆ.ಎನ್. ಕುಮಾರಸ್ವಾಮಿ, ಸೋಮಣ್ಣ, ಮಹದೇವಪ್ಪ, ನಾಗೇಂದ್ರ, ಕೆ.ಪಿ. ರೇಚಣ್ಣ, ಗುರುಸ್ವಾಮಿ, ಸ್ವಾಮಿ, ಜಗದೀಶ್, ಸುಂದ್ರಮ್ಮ, ರೂಪ, ನೌಕರಾದ ನಂಜುಂಡ, ಬಿ. ಮಹೇಂದ್ರ ಹಾಗೂ ಸರ್ವ ಸದಸ್ಯರು ಹಾಜರಿದ್ದರು.

## ಚಿದಾನಂದ ಮಹಾಸ್ವಾಮೀಜಿ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಭಾಗಿ

# ಶಿಕ್ಷಣ ವಂಚಿತರ ಮಕ್ಕಳಿಗೆ ಬೆಳಕಾಗಿದ್ದ ಹೊಸಮಠದ ಶ್ರೀಗಳು: ವಿ.ಸೋಮಣ್ಣ



**ಮೈಸೂರು:** ಬಡವರು, ನಿರ್ಗತಿಕರು ಹಾಗೂ ಶಿಕ್ಷಣದಿಂದ ವಂಚಿತರಾದ ಮಕ್ಕಳ ಬದುಕಿಗೆ ಬೆಳಕಾಗುವ ಕೆಲಸವನ್ನು ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ನಮೆಲ್ಲರಿಗೂ ತೋರಿಸಿಕೊಟ್ಟಿದ್ದಾರೆ ಎಂದು ಕೇಂದ್ರದ ರಾಜ್ಯ ರೈಲ್ವೆ ಸಚಿವ ವಿ.ಸೋಮಣ್ಣ ಹೇಳಿದರು.

ನಗರದ ಶ್ರೀ ಹೊಸಮಠದ ಆವರಣದಲ್ಲಿ ಸೋಮವಾರ ನಡೆದ ಚಿದಾನಂದ ಮಹಾಸ್ವಾಮೀಜಿ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವೆಲ್ಲರೂ ಏನು ಮಾಡಿದ್ದೇವೆ, ಎಷ್ಟು ಮಾಡಿದ್ದೇವೆ ಎನ್ನುವುದಕ್ಕಿಂತ ಸಮಾಜಕ್ಕೆ ಏನು ಬಿಟ್ಟು ಹೋಗಿದ್ದೇವೆ ಎಂಬುದು ಬಹಳ ಮುಖ್ಯ. ಇದರಂತೆ ನಡೆದವರು, ತಮ್ಮ ಬದುಕಿನ ಮೂಲಕ ತೋರಿಸಿಕೊಟ್ಟವರು ಚಿದಾನಂದಸ್ವಾಮೀಜಿಗಳಾಗಿದ್ದಾರೆ. ಬಡತನ ಯಾರಿಗೂ ಶಾಶ್ವತವಲ್ಲ ಎಂಬ ಸಂದೇಶವನ್ನು ಅವರು ಸಮಾಜಕ್ಕೆ ನೀಡಿದ್ದರು. ಬಡವರ ಮಕ್ಕಳು ಕೂಡ ದೇಶದ ಮುಖ್ಯವಾಹಿನಿಗೆ ಬರಬೇಕು ಎಂಬ ಆಶಯದಿಂದ ಶಿಕ್ಷಣ ಮತ್ತು ಸವಾಜಸೇವೆಗೆ ಒತ್ತು ನೀಡಿದ್ದರು ಎಂದರು.

ಸಮಾಜದಲ್ಲಿ ಧ್ವನಿ ಇಲ್ಲದ, ಆಸರೆ ಇಲ್ಲದ, ಕಡುಬಡವರ ಭಾವನೆಗಳನ್ನು ಅರ್ಥ ವಾಡಿಕೊಂಡು ಅವರಿಗೆ ನೆರವಾಗುವುದು ದೊಡ್ಡ ಕೆಲಸ. ವಿಶೇಷವಾಗಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಅವರು ನೀಡಿದ ಕೊಡುಗೆ ಮರೆಯಲಾಗದು. ಸುತ್ತೂರು ಮಠದ ಸ್ವಾಮೀಜಿಯವರ ಮಾರ್ಗದರ್ಶನವನ್ನು ಶ್ರೀ ಚಿದಾನಂದ ಸ್ವಾಮೀಜಿ ತಮ್ಮ ಸೇವಾ ಬದುಕಿನಲ್ಲಿ ಅಳವಡಿಸಿಕೊಂಡಿದ್ದರು. ಹಿರಿಯ ಸಂತರ ಸಲಹೆ, ವಾರ್ಗದರ್ಶನ ಹಾಗೂ ಸಂಸ್ಕಾರವನ್ನು ಮೈಗೂಡಿಸಿಕೊಂಡು ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಿದರು. ಚಿದಾನಂದ ಸ್ವಾಮೀಜಿಯವರ ನೇರನುಡಿ ಕೆಲವೊಮ್ಮೆ ನಿಷ್ಠುರವಾಗಿ ಕಂಡರೂ ಅದರ ಹಿಂದೆ ಸವಾಜದ ಒಳಿತಿನ ಕಾಳಜಿ ಇರುತ್ತಿತ್ತು. ವಾಸ್ತವಾಂಶವನ್ನು ನೇರವಾಗಿ ಹೇಳುವ ಧೈರ್ಯ ಅವರಲ್ಲಿತ್ತು. ನಾನು ಅನೇಕ ಸಂದರ್ಭಗಳಲ್ಲಿ ಅವರೊಂದಿಗೆ ಮಾತನಾಡಿದ್ದೇನೆ. ಅವರ ಚಿಂತನೆಗಳು ನನ್ನ ಮೇಲೂ ಪ್ರಭಾವ ಬೀರಿವೆ. ಅವರು ಹೊಸಮಠ ಹಾಗೂ ನಟರಾಜ ಮಹಾಸಂಸ್ಥಾನವನ್ನು ಯಾವ ರೀತಿಯಲ್ಲಿ ಮುನ್ನಡೆಸಬೇಕು ಎಂಬುದಕ್ಕೂ ಮಾರ್ಗದರ್ಶನ ನೀಡಿದ್ದಾರೆ ಎಂದರು.

ಮಠ-ಮಾನ್ಯಗಳನ್ನು ಕಟ್ಟುವುದು ಸುಲಭವಾದರೂ ಅವುಗಳನ್ನು ನಡೆಸಿಕೊಂಡು ಹೋಗುವುದು ಕಷ್ಟ. ಆದಾಯದ ಮೂಲಗಳ ಕೊರತೆಯ ನಡುವೆಯೂ ಸಮಾಜಮುಖಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದಿರುವ ಹೊಸಮಠದ ಸೇವೆ ಶ್ಲಾಘನೀಯ. ಶ್ರೀ ಚಿದಾನಂದ ಮಹಾಸ್ವಾಮೀಜಿ ದೇಹತ್ಯಾಗ ಮಾಡಿದ್ದಾರೆ. ಆದರೆ, ಅವರ ಉಸಿರು, ಸಂದೇಶ, ನಡವಳಿಕೆ ಹಾಗೂ ಸವಾಜಮುಖಿ ಚಿಂತನೆಗಳು ಈ ಮಠದೊಂದಿಗೆ ಸದಾ ಜೀವಂತವಾಗಿರುತ್ತವೆ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಇಂದಿನ ಕಿರಿಯ ಶ್ರೀಗಳು ಮುನ್ನಡೆಯಬೇಕು. ಹಿರಿಯ ಗುರುಗಳ ಆಶೀರ್ವಾದ ಅವರ ಮೇಲೆ ಸದಾ ಇರಲಿ ಎಂದ ಅವರು ಹೊಸಮಠದ ಬೆಳವಣಿಗೆಗೆ ತಾವು ಹಾಗೂ ಸವಾಜದ ಎಲ್ಲರೂ ಕೈಜೋಡಿಸುವುದಾಗಿ ಭರವಸೆ ನೀಡಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಶ್ರೀ ಚಿದಾನಂದ ಸ್ವಾಮೀಜಿಗಳೊಂದಿಗೆ ತಮ್ಮದು ಸುವಾರು 30 ವರ್ಷಗಳ ಆತ್ಮೀಯ ಸಂಬಂಧವಾಗಿತ್ತು. ತಾವು ಶಾಸಕನಾಗುವ ಮುನ್ನವೇ, ಭಾರತೀಯ ಜನತಾ ಪಕ್ಷದ ಮೈಸೂರು ನಗರ ಅಧ್ಯಕ್ಷರಾಗಿದ್ದ ಸಂದರ್ಭದಲ್ಲೂ ಶ್ರೀಗಳು ತಮ್ಮನ್ನು ಪ್ರತಿಯೊಂದು ಕಾರ್ಯಕ್ರಮಕ್ಕೂ ಕರೆದು ಪಕ್ಕದಲ್ಲಿ ಕೂರಿಸಿಕೊಂಡು, ರಾಜಕೀಯವಾಗಿ ಹೇಗೆ ಮುನ್ನಡೆಯಬೇಕು ಎಂಬುದರ ಕುರಿತು ಮಾರ್ಗದರ್ಶನ ನೀಡುತ್ತಿದ್ದರು. ಅವರ ಮಾರ್ಗದರ್ಶನವನ್ನು ಜೀವನಪೂರ್ತಿ ಮರೆಯಲು ಸಾಧ್ಯವಿಲ್ಲ ಎಂದರು.

### ಭಕ್ತರ ಕಷ್ಟಕ್ಕೆ ತಕ್ಷಣ ಸ್ಪಂದಿಸುತ್ತಿದ್ದ ಚಿದಾನಂದ ಶ್ರೀಗಳು

“ ಚಿದಾನಂದ ಸ್ವಾಮೀಜಿಗಳು ಭಕ್ತರ ಕಷ್ಟಗಳಿಗೆ ತಕ್ಷಣ ಸ್ಪಂದಿಸುತ್ತಿದ್ದ ಕರುಣಾಮಯಿ ಸ್ವಭಾವದವರಾಗಿದ್ದರು. ಶಿಕ್ಷಣಕ್ಕಾಗಿ ಹಣದ ಕೊರತೆ ಎದುರಿಸುತ್ತಿದ್ದವರಿಗೆ ನೆರವು ನೀಡುತ್ತಿದ್ದರು. ಸುತ್ತೂರು ಜಗದ್ಗುರುಗಳೊಂದಿಗೆ ಅವರಿಗೆ ಅತ್ಯಂತ ಆತ್ಮೀ?ಂ ಬಾಂಧವ್ಯವಿತ್ತು. ತಮ್ಮ ಅನಾರೋಗ್ಯದ ಸಂದರ್ಭದಲ್ಲೂ ಜಗದ್ಗುರುಗಳು ನಿರಂತರವಾಗಿ ಅವರ ಆರೋಗ್ಯ ವಿಚಾರಿಸಿ, ಅಗತ್ಯವಿದ್ದರೆ ವೈದ್ಯರನ್ನು ಕರೆಸುವಂತೆ ಸೂಚಿಸುತ್ತಿದ್ದರು. ಮಠದ ಪೀಠಾಧಿಪತಿಗಳಾಗುವ ಸಂದರ್ಭದಲ್ಲೂ ಚಿದಾನಂದ ಶ್ರೀಗಳು ನೀಡಿದ ವಾರ್ಗದರ್ಶನ ಮತ್ತು ಪ್ರೀತಿ ಅವಿಸ್ಮರಣೀ?ಂ. ಮಠದ ಅಭಿವೃದ್ಧಿ ಹಾಗೂ ಹೊಸ ಪೀಠಾಧಿಪತಿಗಳ ಸೇವಾ ಕಾರ್ಯಗಳಿಗೆ ಎಲ್ಲರೂ ಸಹಕಾರ ನೀಡಬೇಕು. ಚಿದಾನಂದ ಮಹಾಸ್ವಾಮಿಗಳ ಆದರ್ಶಗಳನ್ನು ಮುಂದುವರಿಸಿಕೊಂಡು ಮಠವನ್ನು ಇನ್ನಷ್ಟು ಅಭಿವೃದ್ಧಿಪಡಿಸಬೇಕು ಎಂದು ಆಶಿಸಿದರು.

**– ಶ್ರೀ ಸಾಂಬಸದಾಶಿವ ಸ್ವಾಮೀಜಿ, ಉಕ್ಕಿನ ಕಂತೆ ಮಠ, ವಾದಹಳ್ಳಿ, ಹುಣಸೂರು.**

“ ಶ್ರೀ ಚಿದಾನಂದ ಮಹಾಸ್ವಾಮಿಗಳು ನೇರವಾಗಿ ಮಾತನಾಡುವ ಸ್ವಭಾವದವರಾಗಿದ್ದರೂ ಹೃದುಂದಲ್ಲಿ ಅಪಾರ ಕರುಣೆ ಹೊಂದಿದ್ದರು. ಯಾರಾದರೂ ಲಿಂಗೈಕ್ಯರಾದ ಸುದ್ದಿ ತಿಳಿದರೆ ತಕ್ಷಣ ಅವರ ಮನೆಗೆ ತೆರಳಿ ಕುಟುಂಬದವರಿಗೆ ಸಾಂತ್ವನ ಹೇಳುತ್ತಿದ್ದರು. ನಮಸ್ಕಾರ ಸ್ವೀಕರಿಸುವ ಬದಲು ಇತರ ಸಂತರಿಗೆ ಗೌರವ ಸಲ್ಲಿಸುವಂತೆ ಹೇಳುತ್ತಿದ್ದರು. ತಮ್ಮ ಆರೋಗ್ಯ ಹದಗೆಟ್ಟಿದ್ದರೂ ಸಿದ್ದಗಂಗಾ ಸೇರಿ ವಿವಿಧ ಮಠಗಳಿಗೆ ತೆರಳಿ ಸೇವೆ ಸಲ್ಲಿಸುತ್ತಿದ್ದರು. ಯಾರಿಂದಲೂ ದಕ್ಷಿಣೆ ಪಡೆಯದೆ, ಬಂದ ಹಣವನ್ನು ಅಗತ್ಯವಿರುವವರಿಗೆ ನೀಡುತ್ತಿದ್ದರು. ಇಂತಹ ಅಪರೂಪದ ಸಂತನನ್ನು ಕಳೆದುಕೊಂಡಿರುವುದು ಸಮಾಜಕ್ಕೆ ದೊಡ್ಡ ನಷ್ಟ. ಸಿದ್ದಬಸವ ಸ್ವಾಮೀಜಿಗಳು ಸಿದ್ದಗಂಗಾ ಕ್ಷೇತ್ರದಲ್ಲಿ ಸೇವೆ ಹಾಗೂ ಸಂಸ್ಕಾರ ಪಡೆದು, ಜಗದ್ಗುರುಗಳ ವಾರ್ಗದರ್ಶನದಲ್ಲಿ ಹೊಸಮಠವನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಬೇಕು.

**– ಶ್ರೀ ಗುರುಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಕುದೇರು ಮಠ**

“ ಶ್ರೀ ಚಿದಾನಂದ ಸ್ವಾಮೀಜಿ ಅವರು ಮಠದ ಆಧ್ಯಾತ್ಮಿಕ ಮತ್ತು ಧಾರ್ಮಿಕ ಚಟುವಟಿಕೆಗಳನ್ನು ಮುನ್ನಡೆಸುವುದರೊಂದಿಗೆ ಜ್ಞಾನ ಮತ್ತು ದಾಸೋಹವನ್ನು ನಿರಂತರವಾಗಿ ನಡೆಸಿಕೊಂಡು ಬಂದಿದ್ದರು. ಕಡಿಮೆ ವಾತು, ಹೆಚ್ಚು ಕಾ?ಂಕ ಎಂಬ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಪೂಜ್ಯರ ಆಶುಂದಂತೆ ಬಸವತತ್ವವನ್ನು ಅನುಷ್ಠಾನಗೊಳಿಸಲು ತಾವು ಪ್ರಾವಾಣಿಕವಾಗಿ ಪ್ರಯತ್ನಿಸುವೆ. ಮಠದ ಮುಂದಿನ ಅಭಿವೃದ್ಧಿಗೆ ಭಕ್ತರು ಹಿಂದಿನಂತೆಯೇ ಸಹಕಾರ ನೀಡಬೇಕು

**– ಶ್ರೀ ಸಿದ್ದಬಸವ ಸ್ವಾಮೀಜಿ, ಶ್ರೀ ಹೊಸಮಠ.**

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಶ್ರೀ ಚಿದಾನಂದ ಸ್ವಾಮೀಜಿ?ಂವರ ಸವಾಜಮುಖಿ ಸೇವೆ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಸ್ಮರಣೀಯ. ಹೊಸಮಠವು ಮುಂದಿನ ದಿನಗಳಲ್ಲೂ ಶಿಕ್ಷಣ ಹಾಗೂ ಸಮಾಜಸೇವಾ ಕಾರ್ಯಗಳನ್ನು ಮತ್ತಷ್ಟು ವಿಸ್ತರಿಸಬೇಕು. ಇದಕ್ಕೆ ಸಮಾಜದ ಎಲ್ಲ ವರ್ಗಗಳ ಸಹಕಾರ ಅಗತ್ಯ ಎಂದು ಹೇಳಿದರು.

ಶಾಸಕ ಎಚ್.ಎಂ.ಗಣೇಶ ಪ್ರಸಾದ್ ಮಾತನಾಡಿದರು.

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಶ್ರೀ ಕನಕಪುರ ದೇಗುಲ ಮಠದ ಡಾ.ಚೆನ್ನಬಸವ ಸ್ವಾಮೀಜಿ, ದೇವನೂರಿನ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಶ್ರೀ ಮಹಾಂತ ಸ್ವಾಮೀಜಿ, ಶ್ರೀ ಹೊಸಮಠದ ನಿಪ್ರಸ್ವ ಶ್ರೀ ಸಿದ್ದಬಸವ ಸ್ವಾಮೀಜಿ, ಶ್ರೀ ನಟರಾಜ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ವಿ.ಡಿ.ಸುನೀತಾ ರಾಣಿ, ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಸಿ.ಎನ್.ಸಂತೋಷ್ ಪಟೇಲ್ ವೇದಿಕೆಯಲ್ಲಿ ಹಾಜರಿದ್ದರು. ಜೆಎಸ್ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ತೋಂಟದಾರ್ಯ, ಮಾಜಿ ಶಾಸಕ ಎಲ್.ನಾಗೇಂದ್ರ, ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಕಾಂಗ್ರೆಸ್ ಮುಖಂಡರಾದ ಕೆ.ವಿ.ಮಲ್ಲೇಶ್ ಇನ್ನಿತರರು ಪಾಲ್ಗೊಂಡಿದ್ದರು. ನಟರಾಜ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಹಿನಕಲ್ ಬಸವರಾಜು ನಿರೂಪಿಸಿದರು. ಎಸ್.ಗುರುಪ್ರಸಾದ್ ಮತ್ತು ವೃಂದದವರು ಪ್ರಾರ್ಥಿಸಿದರು. ಚೂಡಾಮಣಿ ವಚನ ಗಾಯನ ಮಾಡಿದರು.

# ಆ.26ರಿಂದ ಕೈಮಗ್ಗ ವಸ್ತುಗಳ ಪ್ರದರ್ಶನ

**ಮೈಸೂರು:** ನಗರದ ಜೆಎಸ್ಎಸ್ ಅರ್ಬನ್ ಹಾತ್ನಲ್ಲಿ ಆ.26 ರಿಂದ ಸೆ. 8 ರವರೆಗೆ ಗೌರಿ ಗಣೇಶ ಹಬ್ಬದ ಪ್ರಯುಕ್ತ ನನ್ನ ಕೈಮಗ್ಗ ನನ್ನ ಹೆಮ್ಮೆ ಶೀರ್ಷಿಕೆ ಅಡಿಯಲ್ಲಿ ಕೈಮಗ್ಗ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳ ಆಯೋಜಿಸಲಾಗಿದೆ ಎಮದು ಉಪ ನಿರ್ದೇಶಕ ಇಳಂಗೋವನ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಆ. 26 ರಂದು ಸಂಜೆ 4ಕ್ಕೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ, ಸಚಿವ ರುದ್ರಪ್ಪ ಮಾನಪ್ಪ ಲಮಾಣಿ, ಮಾಜಿ ಸಿಎಂ ಸಿದ್ದರಾಮಯ್ಯ ಅವರ ಉಪಸ್ಥಿತಿಯಲ್ಲಿ ಚಾಲನೆ ದೊರೆಯಲಿದೆ. ಮೇಳ ಸೆ. 8 ರವರೆಗೆ ನಿತ್ಯ ಬೆಳಗ್ಗೆ 10 ರಿಂದ ರಾತ್ರಿ 9 ರವರೆಗೆ ತೆರೆದಿರಲಿದೆ ಎಂದರು.

ಇದರಲ್ಲಿ ಮೊಳಕಾಲ್ಮೂರು ಸೀರೆ, ಇಳಕಲ್ ಸೀರೆ, ರೇಷ್ಮೆ, ಕಾಟನ್ ಸೀರೆ, ಕಸೂತಿ ಸೀರೆ, ಬೆಡ್ಶೀಟ್, ನೆಲಹಾಸು ಸೇರಿದಂತೆ ವಿವಿಧ ಕೈಮಗ್ಗ ಉತ್ಪನ್ನಗಳು, ತಮಿಳುನಾಡಿ ಕಾಂಜೀವರಂ ಸೀರೆ, ಬಿಹಾರ ಮತ್ತು ಜಾರ್ಖಂಡ್ನ ತಸ್ಸರ್ ಸೀರೆ, ಪಶ್ಚಿಮ ಬಂಗಾಳದ ಕಾಂತಾ ಮತ್ತು ಬಾಲುಚರಿ ಸೀರೆ, ಉತ್ತರ ಪ್ರದೇಶದ ಬನಾರಸಿ ಸಿಲ್ಕ್, ಚಿಕನ್ ಎಂಬ್ರಾಯಿಡರಿ ಸೀರೆ, ಮಧ್ಯಪ್ರದೇಶದ ಚಂದೇರಿ ಮತ್ತು ಮಹೇಶ್ವರಿ ಸೀರೆ, ಒಡಿಶಾದ ಸಂಬಲ್ಪುಪಿ, ಇಕ್ಕತ್ ಮತ್ತು ಬೋಂಕಾಯಿ ಸೀರೆಗಳು, ಇನ್ನಿತರ ಕೈಮಗ್ಗದ ಉತ್ಪನ್ನಗಳು ನೇಕಾರರಿಂದ ನೇರವಾಗಿ ಗ್ರಾಹಕರ ಕೈಗೆ ಸೂಕ್ತ ದರದಲ್ಲಿ ತಲುಪಲಿವೆ. ವೀಕ್ಷಿಸಲು ಸಹಾ ಅವಕಾಶವಿದೆ. ನಮ್ಮ ನಾಡಿನ ಮತ್ತು ದೇಶದ ಪಾರಂಪರಿಕ ಕೈಮಗ್ಗ ಮತ್ತು ಕರಕುಶಲ ಪರಂಪರೆ ಬೆಂಬಲಿಸುವ ಅವಕಾಶ ಇದಾಗಿದೆ ಎಂದು ಮಾಹಿತಿ ನೀಡಿದರು. ರಾಕೇಶ್ರೈ ಇದ್ದರು.

# ಆ.27ರಂದು ಆರ್ಗ್ಯಾನಿಕ್ಸ್ ಗಳ ಬಿಡುಗಡೆ



**ಮೈಸೂರು:** ಶಿಖಾ ಆರ್ಗ್ಯಾನಿಕ್ಸ್ ವತಿಯಿಂದ ಸ್ವತಃ ಬೆಳೆದ ಜಾಕಾಯಿಯಿಂದ ತಯಾರಿಸಿದ ಗಂಜಿ, ಅಂಬಲಿ, ಟೀ, ಲಸ್ಸಿ, ತಂಬುಳಗಳ ಬಿಡುಗಡೆ ಕಾರ್ಯಕ್ರಮ ಆ.27 ರ ಸಂಜೆ 6ಕ್ಕೆ ಬೋಗಾದಿಯ ರಿಜೆಟಿ ಸೆಂಟ್ರಲ್ ಹಾಲ್ನಲ್ಲಿ ನಡೆಯಲಿದೆ ಎಂದು ಸಂಸ್ಥೆಯ ರಮ್ಯಾ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ವಾಣಿ ಮಂಜುನಾಥ್ ಈ ಸಂಸ್ಥೆಯ ಮಾಲೀಕರಾಗಿದ್ದು, ಸ್ವತಃ ತಮ್ಮ ತೋಟದಲ್ಲಿ ಬೆಳೆದ ಜಾಕಾಯಿಗಳಿಂದ ಜೀರ್ಣವ್ಯವಸ್ಥೆ ಸುಧಾರಿಸಿ, ಇನ್ನಿತರ ಆರೋಗ್ಯ ಸುಧಾರಿಸುವ ಈ ಉತ್ಪನ್ನ ತಯಾರಿಸಲಾಗುತ್ತಿದೆ. ನಗರದಲ್ಲಿ ಈ ರೀತಿಯ ಉತ್ಪನ್ನ ಇದೇ ಮೊದಲನೆಯದ್ದಾಗಿವೆ. ಇವುಗಳು ಒಂದು ಕಪ್ಗೆ 50 ರಿಂದ 30 ರೂ. ಗಳಾಗಿವೆ ಎಂದು ಮಾಹಿತಿ ನೀಡಿದರು. ಸಂಸ್ಥೆಯ ಸ್ನೇಹಾ, ಲಕ್ಷ್ಮಿಕುಪೇಂದ್ರ ಇದ್ದರು.

# ಫುಟ್ ಪಾತ್ ಅತಿಕ್ರಮಣ ತೆರವುಗೊಳಿಸಿ: ಮೈಕಾ ಪ್ರೇಮ್ ಕುಮಾರ್ ಆಗ್ರಹ



**ಮೈಸೂರು:** ದೇವರಾಜ ಮಾರುಕಟ್ಟೆಯ ಬಳಿ ಫುಟ್ ಪಾತ್ ಅತಿಕ್ರಮಣ ತೆರವುಗೊಳಿಸಿ. ಸಾರ್ವಜನಿಕರ ಸುಗಮ ಸಂಚಾರಕ್ಕೆ ಅಗತ್ಯಕ್ರಮ ಕೈಗೊಳ್ಳಬೇಕು ಎಂದು ಮೈಸೂರು ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಮೈಕಾ ಪ್ರೇಮ್ ಕುಮಾರ್ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ನಡೆದ ವರಮಹಾಲಕ್ಷ್ಮೀ ಹಬ್ಬದ ವೇಳೆ ದೇವರಾಜ ಮಾರುಕಟ್ಟೆಯಲ್ಲಿ ಉಂಟಾದ ಪರಿಸ್ಥಿತಿ ಅತ್ಯಂತ ದುಃಖಕರವಾಗಿತ್ತು ಮಾರುಕಟ್ಟೆಗೆ ಆಗಮಿಸುವ ಸಾರ್ವಜನಿಕರು ಸಂಚರಿಸಿ ವ್ಯಾಪಾರ ಮಾಡಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿತ್ತು. ವ್ಯಾಪಾರಿಗಳಿಗೆ ನಿಗದಿಪಡಿಸಿರುವ ಸ್ಥಳವನ್ನು ಮೀರಿ ನಾಲ್ಕೈದು ಅಡಿ ಜಾಗದಲ್ಲಿಯೂ ಸರಕುಗಳನ್ನು ಇಟ್ಟು ವ್ಯಾಪಾರ ಮಾಡಲಾಗುತ್ತಿದೆ. ಇದರಿಂದ ಸಾರ್ವಜನಿಕರಿಗೆ, ಅದರಲ್ಲೂ ಮಹಿಳೆಯರಿಗೆ, ಸಂಚರಿಸಲು ತೀವ್ರ ತೊಂದರೆಯಾಗುತ್ತಿದೆ. ಮುಂದಿನ ದಿನಗಳಲ್ಲಿ ಗೌರಿ-ಗಣೇಶ ಹಬ್ಬ ಸೇರಿದಂತೆ ಹಲವು ಪ್ರಮುಖ ಹಬ್ಬಗಳಿರುವ ಹಿನ್ನೆಲೆ ದೇವರಾಜ ಮಾರುಕಟ್ಟೆಯಲ್ಲಿ ಸುಗಮ ಸಂಚಾರಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ದೇವರಾಜ ಮಾರುಕಟ್ಟೆ ಹಾಗೂ ಸುತ್ತಮುತ್ತಲಿನ ರಸ್ತೆಗಳಲ್ಲಿ ಫುಟ್ಪಾತ್ ಗಳನ್ನು ಅತಿಕ್ರಮಿಸಿ ಅಂಗಡಿಗಳನ್ನು ವಿಸ್ತರಿಸಿರುವುದು ಕಂಡುಬರುತ್ತಿದೆ. ಇದರಿಂದ ಪಾದಚಾರಿಗಳು ರಸ್ತೆಯಲ್ಲೇ ಸಂಚರಿಸುವಂತಾಗಿದೆ. ಹೀಗಾಗಿ, ಪೊಲೀಸ್ ಇಲಾಖೆ ಮತ್ತು ಮಹಾನಗರ ಪಾಲಿಕೆ ಜಂಟಿಯಾಗಿ ಅತಿಕ್ರಮಣ ತೆರವುಗೊಳಿಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

# ಕೆರೆಗಳಿಗೆ ನೀರು ತುಂಬಿಸಲು ಆಗ್ರಹಿಸಿ ರೈತಸಂಘದಿಂದ ಅಹೋರಾತ್ರಿ ಧರಣಿ



**ಗುಂಡ್ಲುಪೇಟೆ:** ತಾಲ್ಲೂಕಿನ ರೈತರಿಗೆ ಕಳೆದ ಐವತ್ತು?ಅರವತ್ತು ವರ್ಷಗಳಿಂದ ಸಾಗುವಳಿ ಪತ್ರ ನೀಡದಿರುವುದು, ನಾಲ್ಕನೇ ಹಂತದ ಕೆರೆಗಳನ್ನು ತುಂಬಿಸದಿರುವುದು ಹಾಗೂ ಸಾಗುವಳಿ ಜಮೀನುಗಳಿಗೆ ಅರಣ್ಯ ಇಲಾಖೆ ಎನ್ಒಸಿ ನೀಡದಿರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ರೈತಸಂಘದ ವತಿಯಿಂದ ಅಹೋರಾತ್ರಿ ಧರಣಿ ನಡೆಸಿದರು

ಪಟ್ಟಣದ ಹೊಸ ಪ್ರವಾಸಿ ಮಂದಿರದಿಂದ ಪ್ರತಿಭಟನಾ ಮೆರವಣಿಗೆ ನಡೆಸಿದ ರೈತರು ತಾಲ್ಲೂಕು ಕಚೇರಿ ಮುಂಭಾಗಕ್ಕೆ ಆಗಮಿಸಿ, ಜಿಲ್ಲಾಡಳಿತ, ತಾಲ್ಲೂಕು ಆಡಳಿತ ಹಾಗೂ ಜನಪ್ರತಿನಿಧಿಗಳ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ರೈತ ಮುಖಂಡ ಹಾಗೂ ಜಿಲ್ಲಾಧ್ಯಕ್ಷ ಮಹದೇವಪ್ಪ ಶಿವಪುರ ಮಾತನಾಡಿ, 1935ರಿಂದ 1992ರವರೆಗೆ ಸಾಗುವಳಿ ಮಾಡಿರುವ ರೈತರಿಗೆ ಪೋಡು, ದುರಸ್ತಿ ಹಾಗೂ ಹದ್ದುಬಸ್ತು?ಪೋಡಿ ಕಾರ್ಯ ಪೂರ್ಣಗೊಳಿಸಿ ಹಕ್ಕುಪತ್ರ ನೀಡಬೇಕು. ಸಾಗುವಳಿ ಜಮೀನುಗಳಿಗೆ ಅರಣ್ಯ ಇಲಾಖೆಯಿಂದ ಎನ್ಒಸಿ ನೀಡಬೇಕು. ಜೊತೆಗೆ 110 ಕೆರೆಗಳ ವಿಚಾರ ಸೇರಿದಂತೆ ನಾಲ್ಕನೇ ಹಂತದ ಕೆರೆಗಳನ್ನು ನೀರಿನಿಂದ ತುಂಬಿಸಬೇಕು ಎಂದು ಒತ್ತಾಯಿಸಿದರು.

ಕಳೆದ 2025ರ ಅಕ್ಟೋಬರ್ನಲ್ಲಿ ತಾಲ್ಲೂಕು ಕಚೇರಿ ಮುಂದೆ 37 ದಿನಗಳ ಕಾಲ ಅಹೋರಾತ್ರಿ ಧರಣಿ ನಡೆಸಿದ್ದ ಸಂದರ್ಭದಲ್ಲಿ ಅಂದಿನ ಅರಣ್ಯ ಸಚಿವ ಈಶ್ವರ್ ಖಂಡ್ರೆ, ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಛಲವಾದಿ ನಾರಾಯಣಸ್ವಾಮಿ, ಸಂಸದರು, ಶಾಸಕರು ಹಾಗೂ ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದರು. ಜಂಟಿ ಸರ್ವೆ ನಡೆಸಿ ಸಮಸ್ಯೆ ಬಗೆಹರಿಸುವುದಾಗಿ ಅರಣ್ಯ ಸಚಿವರು ಭರವಸೆ ನೀಡಿದ್ದರು. ಅಲ್ಲದೆ, ಒಂದು ವಾರದೊಳಗೆ ಎನ್ಒಸಿ ನೀಡುವುದಾಗಿ ಸಿಎಫ್ ಭರವಸೆ ನೀಡಿದ್ದರೂ, ಹತ್ತು ತಿಂಗಳು ಕಳೆದರೂ ಹತ್ತು ಜನ ರೈತರಿಗೂ ಎನ್ಒಸಿ ನೀಡಿಲ್ಲ ಎಂದು ಅವರು ಆರೋಪಿಸಿದರು.

ಅದೇ ರೀತಿ ಡಿ.6ರಂದು ಕೆರೆಗಳಿಗೆ ನೀರು ಹರಿಸುವುದಾಗಿ ಭರವಸೆ ನೀಡಲಾಗಿತ್ತು. ಹುತ್ತೂರು ಕೆರೆಯಿಂದ ಮುಂದಿನ ಏಳೆಂಟು ಕೆರೆಗಳನ್ನು ತುಂಬಿಸುವುದಾಗಿ ಹೇಳಿದ್ದರೂ ಇದುವರೆಗೆ ಕಾರ್ಯರೂಪಕ್ಕೆ ಬಂದಿಲ್ಲ. ಆದ್ದರಿಂದ ನಾಲ್ಕನೇ ಹಂತದ ಕೆರೆಗಳಿಗೆ ನೀರು ತುಂಬಿಸುವವರೆಗೆ ಹಾಗೂ ರೈತರಿಗೆ ಸಾಗುವಳಿ ಹಕ್ಕುಪತ್ರ, ಎನ್ಒಸಿ, ಹದ್ದುಬಸ್ತು ಮತ್ತು ಪೋಡಿ ಕಾರ್ಯಗಳನ್ನು ಪೂರ್ಣಗೊಳಿಸುವವರೆಗೆ ಅಹೋರಾತ್ರಿ ಧರಣಿ ಕೈಬಿಡುವುದಿಲ್ಲ ಎಂದು ಮಹದೇವಪ್ಪ ಶಿವಪುರ ಎಚ್ಚರಿಸಿದರು.

ಧರಣಿಯಲ್ಲಿ ತಾಲ್ಲೂಕು ಅಧ್ಯಕ್ಷ ಶಿವಣ್ಣ, ಪ್ರಧಾನ ಕಾರ್ಯದರ್ಶಿ ಮಹದೇವಪ್ರಸಾದ್, ತಾಲ್ಲೂಕು ಮಹಿಳಾ ಅಧ್ಯಕ್ಷೆ ಬಸಮ್ಮ, ಪ್ರವೀಣ, ಸಿದ್ದಶೆಟ್ಟಿ, ಪ್ರಭು, ಮಹದೇವಸ್ವಾಮಿ, ಪುಟ್ಟೇಗೌಡ, ಕುಮಾರ್, ಶಿವಕುಮಾರ್, ರಾಜೇಂದ್ರ ಸೇರಿದಂತೆ ಹಲವರು ಭಾಗವಹಿಸಿದ್ದರು.

## ಕರಡಿಕಲ್ಲು ಗುಡ್ಡ ಶೂಟೌಟ್ - ಪ್ರಕರಣ ಸಿಐಡಿ ಹೆಗಲಿಗೆ

# ಡಿಜಿಪಿಯಿಂದ ಮಹತ್ವದ ಆದೇಶ



**ಹನೂರು:** ಕಾವೇರಿ ವನ್ಯಜೀವಿಧಾಮದ ಶಾಗ್ಯ ವಲಯದ ಕರಡಿಕಲ್ಲು ಗುಡ್ಡದಲ್ಲಿ ನಡೆದ ಶೂಟೌಟ್ ಪ್ರಕರಣ ಇದೀಗ ತಿರುವು ಪಡೆದುಕೊಂಡಿದೆ. ವಿವಾದದ ಕೇಂದ್ರವಾಗಿರುವ ಈ ಪ್ರಕರಣವನ್ನು ರಾಜ್ಯ ಸರ್ಕಾರ ಸಿಐಡಿಗೆ ವಹಿಸಿ ಮಹತ್ವದ ನಿರ್ಧಾರ ಕೈಗೊಂಡಿದೆ. ಈ ಕುರಿತು ಪೊಲೀಸ್ ಮಹಾ ನಿರ್ದೇಶಕ ಮತ್ತು ಮಹಾ ನಿರೀಕ್ಷಕ ಡಾ. ಎಂ.ಎ. ಸಲೀಂ ಅವರು ಲಿಖಿತ ಆದೇಶ ಹೊರಡಿಸಿದ್ದಾರೆ.

**ಎಸ್ಪಿಗೆ ಡಿಜಿಪಿ ಫ್ಯಾಕ್ಸ್ ಸಂದೇಶ: ತಕ್ಷಣ ಕಡತ ಹಸ್ತಾಂತರ**

ಚಾಮರಾಜನಗರ ಎಸ್ಪಿ ಎಂ. ಮುತ್ತುರಾಜ್ ಅವರಿಗೆ ಫ್ಯಾಕ್ಸ್ ಮೂಲಕ ರವಾನೆಯಾಗಿರುವ ಆದೇಶದಲ್ಲಿ, "ಜಿಲ್ಲೆಯ ರಾಮಾಪುರ, ಹನೂರು ಮತ್ತು ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಶೂಟೌಟ್ ಪ್ರಕರಣ, ಕಳ್ಳಬೇಟೆ ಶಿಬಿರಗಳ ಧ್ವಂಸ, ಸರ್ಕಾರಿ ಜೀಪ್ ಜಖಂಗೊಳಿಸುವಿಕೆ ಮತ್ತು ಕಾಡಿಗೆ ಬೆಂಕಿ ಹಚ್ಚಿದ ಪ್ರಕರಣಗಳು ಸೇರಿದಂತೆ ಎಲ್ಲಾ ಪ್ರಕರಣಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸಿಐಡಿಗೆ ವರ್ಗಾಯಿಸಲಾಗಿದೆ " ಎಂದು ತಿಳಿಸಲಾಗಿದೆ.

ಪ್ರಕರಣದ ಎಲ್ಲಾ ದಾಖಲೆಗಳು, ಎಫ್ಐಆರ್, ಸ್ಥಳ ಮಹಜರು, ಪಂಚನಾಮೆ ಮತ್ತು ಸಾಕ್ಷ್ಯಾಧಾರಗಳನ್ನು ಸಿಐಡಿ ತನಿಖಾಧಿಕಾರಿಗೆ ಖುದ್ದು ವೈಯಕ್ತಿಕವಾಗಿ ಹಸ್ತಾಂತರಿಸಬೇಕು ಎಂದು ಡಿಜಿಪಿ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳ ವಿಭಾಗದ ಪೊಲೀಸ್ ಮಹಾನಿರ್ದೇಶಕರು ತನಿಖೆಯನ್ನು ಕೈಗೊಂಡು, ಪೂರ್ಣಗೊಂಡ ಬಳಿಕ ವಿವರವಾದ ಅಂತಿಮ ವರದಿಯನ್ನು ಡಿಜಿಪಿ ಕಚೇರಿಗೆ ಸಲ್ಲಿಸಬೇಕು ಎಂದು ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ಆ.15ರ ಮುಂಜಾನೆ ನಡೆದಿದ್ದೇನು?

ಆಗಸ್ಟ್ 15ರ ಮುಂಜಾನೆ 5:30ರ ಸುಮಾರಿಗೆ ಕಾವೇರಿ ವನ್ಯಜೀವಿಧಾಮದ ಹೊಳೆಮೂರ್ದಟ್ಟಿ ಅರಣ್ಯದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಮತ್ತು ಬೇಟೆಗಾರರ ನಡುವೆ ಗುಂಡಿನ ಚಕಮಕಿ ನಡೆದಿದೆ ಎಂದು ಅರಣ್ಯ ಇಲಾಖೆ ಹೇಳಿತ್ತು.

ಈ ಚಕಮಕಿಯಲ್ಲಿ ಮರಿಯಮಂಗಲದ ಅಂತೋನಿಸ್ವಾಮಿ (32), ಜಗನ್ನಾಥ ದೊಡ್ಡಿಯ ಜಾನ್ ರೋಸ್ ಪೀಟರ್ (28) ಮತ್ತು ಲಾಜರ್ ದೊಡ್ಡಿಯ ಡೇವಿಡ್ ಕುಮಾರ್ (35) ಎಂಬ ಮೂವರು ಮೃತಪಟ್ಟಿದ್ದರು. ಮೃತರೆಲ್ಲರೂ ಕ್ರೈಸ್ತ ಸಮುದಾಯಕ್ಕೆ ಸೇರಿದ ಬಡ ಕೂಲಿ ಕಾರ್ಮಿಕರು.

ಆದರೆ "ಅರಣ್ಯ ಸಿಬ್ಬಂದಿ ಅತೀ ಹತ್ತಿರದಿಂದ ಗುಂಡು ಹಾರಿಸಿ ಹತ್ಯೆ ಮಾಡಿದ್ದಾರೆ, ಇದು ನಕಲಿ ಎನ್ಕೌಂಟರ್" ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಹನೂರಿನಲ್ಲಿ ಎರಡು ದಿನ ಬೃಹತ್ ಪ್ರತಿಭಟನೆ

ಈ ಸಾವನ್ನು ಖಂಡಿಸಿ ಆ.15 ಮತ್ತು 16ರಂದು ಹನೂರು ಪಟ್ಟಣದಲ್ಲಿ ಎರಡು ದಿನಗಳ ಕಾಲ ಬೃಹತ್ ಪ್ರತಿಭಟನೆ ನಡೆದಿತ್ತು. ಮೃತರ ಕುಟುಂಬಸ್ಥರು, ಮಾರ್ಟಳ್ಳಿ, ಸಂದನಪಾಳ್ಯ, ಜಾಗೇರಿ ಭಾಗದ ನೂರಾರು ಗ್ರಾಮಸ್ಥರು, ವಿವಿಧ ಕನ್ನಡಪರ ಸಂಘಟನೆಗಳು ಮತ್ತು ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು ರಸ್ತೆಗಿಳಿದು "ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿ" ಎಂದು ಆಗ್ರಹಿಸಿದ್ದರು. ಇದೇ ವೇಳೆ ಶಾಸಕ ಎಂ.ಆರ್ ಮಂಜುನಾಥ್ ಮಧ್ಯಪ್ರವೇಶಿಸಿ ತಲಾ 15 ಲಕ್ಷ ಪರಿಹಾರ ಘೋಷಿಸಿದ್ದರು.

# ಗುರಿ ಮುಟ್ಟಲು ಏಕಲವ್ಯನಂತೆ ಅಭ್ಯಾಸ ಮಾಡಿ



## ವಿದ್ಯಾರ್ಥಿಗಳಿಗೆ ಎಂ.ಮರಿಸ್ವಾಮಿ ಕರೆ

**ರಾಮನಗರ:** ರಾಮನಗರ: ಅರ್ಜುನನ ಏಕಾಗ್ರತೆ, ಏಕಲವ್ಯನಂತೆ ಸತತ ಅಭ್ಯಾಸಗಳನ್ನು ಮಾಡುವುದರಿಂದ ವಿದ್ಯಾರ್ಥಿಗಳು ನಿರೀಕ್ಷಿತ ಗುರಿ ಮುಟ್ಟುತ್ತೀರಿ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಜಿಲ್ಲಾ ಉಪನಿರ್ದೇಶಕ ಎಂ.ಮರಿಸ್ವಾಮಿ ಕರೆ ನೀಡಿದರು.

ನಗರದ ಕೃಷ್ಣಸ್ಮೃತಿ ಕಲ್ಯಾಣ ಮಂಟಪದಲ್ಲಿ ಸೋಮವಾರ 202627ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ಉದ್ಘಾಟನೆ, ಹಿರಿಯ ವಿದ್ಯಾರ್ಥಿಗಳಿಂದ ಕಿರಿಯ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಸಂಸ್ಥಾಪಕರ ದಿನಾಚರಣೆಯನ್ನು ಒಳಗೊಂಡಿರುವ ಎಕ್ಸ್ ಪರ್ಟ್ ಪರ್ವ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಜೊತೆಗೆ ಹಿರಿಯ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ನಿರಂತರ ಸಂಪರ್ಕದಲ್ಲಿದ್ದು, ಮಾರ್ಗದರ್ಶನ ಪಡೆಯುವುದ ರಿಂದ ಯಶಸ್ಸಿನ ಹಾದಿಯನ್ನು ಸಹ ಸುಲಭಗೊಳಿಸಿ ಕೊಳ್ಳಬಹುದು ಎಂದರು.

ವಿದ್ಯಾರ್ಥಿಗಳು ಓದಿನ ಜೊತೆಗೆ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ಉತ್ಸಾಹ ಮತ್ತು ಆರೋಗ್ಯ ರಕ್ಷಣೆಗೆ ಒತ್ತು ಕೊಟ್ಟರೆ ವಿದ್ಯಾರ್ಥಿ ಜೀವನ ಯಶಸ್ವಿಯಾಗುತ್ತದೆ ಎಂದು ಅವರು ತಿಳಿಸಿದರು.

**ಪ್ರಯತ್ನಶೀಲತೆ ಉನ್ನತಿಯತ್ತ ಸಾಗಿಸುವ ಸಾಧನ – ಜಿ.ಶಿವಣ್ಣ**

ಜಿಲ್ಲಾ ಪ್ರಾಂಶುಪಾಲರ ಸಂಘದ ಅಧ್ಯಕ್ಷ ಜಿ.ಶಿವಣ್ಣ ಮಾತನಾಡಿ, ಪ್ರಯತ್ನಶೀಲತೆ ವಿದ್ಯಾರ್ಥಿಯನ್ನು ಉನ್ನತಿಯತ್ತ ಸಾಗಿಸುವ ಸಾಧನ. ಪ್ರಯತ್ನವೂ ಒಂದರ ವಿಫಲತೆಯನ್ನು ಬದಿಗಿರಿಸಿ, ಮತ್ತೊಂದು ಯಶಸ್ಸನ್ನು ತಂದು ಕೊಡುತ್ತದೆ. ಉತ್ತಮ ಕೇಳುಗರಾಗಿ, ಉಪಾಧ್ಯಾಯರ ಮಾತುಗಳನ್ನು ಕೇಳಿ, ಮನನ ಮಾಡಿ,ವಿಚಾರಗಳನ್ನು ಮತ್ತೊಬ್ಬರಿಗೆ ಮುಟ್ಟಿಸುವ ಉತ್ತಮ ಸಂವಹನ ಕೌಶಲ್ಯ ಬೆಳೆಸಿಕೊಳ್ಳಿ. ಬರವಣಿಯನ್ನು ಗಂಭೀರವಾಗಿ ಪರಿಗಣಿಸಿ. ಉತ್ತಮ ಬರೆವಣಿಗೆಯ ಶೈಲಿಯನ್ನು ಕಲಿತು ಕೊಂಡಾಗ ಫಲಿತಾಂಶ ಹೆಚ್ಚಾಗಲು ಅನುಕೂಲವಾಗುತ್ತದೆ ಎಂದು ಹೇಳಿದರು.ವೇದಿಕೆ ಕಾರ್ಯಕ್ರಮಕ್ಕೂ ಮುನ್ನಾ ಕಾಲೇಜು ವಿದ್ಯಾರ್ಥಿಗಳು ಸಾಮಾಜಿಕ ಸಂದೇಶ ನೀಡುವ ಕಿರು ನಾಟಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

# ಆ.27ರಂದು ಹನೂರು ತಾಲೂಕು ಸಂಪೂರ್ಣ ಬಂದ್‌ಗೆ ರೈತ ಸಂಘಟನೆಗಳ ಕರೆ



**ಹನೂರು:** ಕಾವೇರಿ ವನ್ಯಧಾಮದ ಚಿಕ್ಕಲೂರು ಮೀಸಲು ಅರಣ್ಯದಲ್ಲಿ ಆಗಸ್ಟ್ 15ರಂದು ನಡೆದ ಗುಂಡಿನ ದಾಳಿ ಪ್ರಕರಣವನ್ನು ಖಂಡಿಸಿ, ಎಲ್ಲಾ ರೈತ ಸಂಘಟನೆಗಳ ಒಕ್ಕೂಟದಿಂದ ಆಗಸ್ಟ್ 27ರ ಗುರುವಾರ ಹನೂರು ತಾಲೂಕು ಸಂಪೂರ್ಣ ಬಂದ್ಗೆ ಕರೆ ನೀಡಲಾಗಿದೆ.

ಈ ಸಂಬಂಧ ತಹಶೀಲ್ದಾರ್ ಅವರಿಗೆ ಮನವಿ ಪತ್ರ ಸಲ್ಲಿಸಿದ ರೈತ ಮುಖಂಡರು, ಆಗಸ್ಟ್ 27ರಂದು ಬೆಳಿಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಹನೂರು ತಾಲೂಕು ಬಂದ್ ಮಾಡಿ, ಕೆಂಪೇಗೌಡ ವೃತ್ತದಿಂದ ತಾಲೂಕು ಕಚೇರಿವರೆಗೆ ಮೆರವಣಿಗೆ ನಡೆಸಿ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುವುದು ಎಂದು ತಿಳಿಸಿದರು.

ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪಿ ಅರಣ್ಯ ಸಿಬ್ಬಂದಿಯನ್ನು ಕೂಡಲೇ ಬಂಧಿಸಿ ತನಿಖೆ ನಡೆಸಬೇಕು, ಅರಣ್ಯ ಸಚಿವರು ಖುದ್ದು ಭೇಟಿ ನೀಡಿ ಸಂತ್ರಸ್ತ ಕುಟುಂಬಗಳಿಗೆ ಸಾಂತ್ವನ ಹೇಳಬೇಕು, ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆಗೆ ಆದೇಶಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಈ ವೇಳೆ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯದರ್ಶಿ ಅಮ್ಜದ್ ಖಾನ್, ರೈತ ಮುಖಂಡರುಗಳಾದ ಬೋಸ್ಕೋ, ಕೂಡ್ಲೂರು ವೆಂಕಟೇಶ್, ವಿನೇಶ್, ಅಮೋಘ ರಾವ್, ಮಾದಪ್ಪ ಸೇರಿದಂತೆ ಇತರರು ಹಾಜರಿದ್ದರು.

**ಹನೂರು ಬಂದ್ಗೆ ವರ್ತಕರಿಂದ ಬೆಂಬಲವಿಲ್ಲ – ಶಾಂತಿಯುತ ಪ್ರತಿಭಟನೆಗೆ ಮಾತ್ರ ಸಹಕಾರ**

ಕಾವೇರಿ ವನ್ಯಜೀವಿಧಾಮದಲ್ಲಿ ನಡೆದ ಶೂಟೌಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ವಿವಿಧ ಸಂಘಟನೆಗಳು ಕರೆ ನೀಡಿರುವ ಹನೂರು ಬಂದ್ಗೆ ವರ್ತಕರ ಸಂಘ ಹಾಗೂ ಬೀದಿ ಬದಿ ವ್ಯಾಪಾರಿಗಳು ಬೆಂಬಲ ನೀಡಿಲ್ಲ.

ಶಾಂತಿಯುತ ಪ್ರತಿಭಟನೆಗೆ ಮಾತ್ರ ಸಹಕಾರ ನೀಡುವುದಾಗಿ ವರ್ತಕರು ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣದ ಮೂಲಕ ತಿಳಿಸಿದ್ದಾರೆ.

ಲಕ್ಷಾಂತರ ರೂಪಾಯಿ ಬಂಡವಾಳ ಹಾಕಿ ಸಾವಿರಾರು ರೂಪಾಯಿ ಬಾಡಿಗೆ ಕಟ್ಟುತ್ತಿದ್ದೇವೆ. ಒಂದು ದಿನ ಬಂದ್ ಮಾಡಿದರೆ ಸಾವಿರಾರು ರೂಪಾಯಿ ನಷ್ಟವಾಗುತ್ತದೆ. ನಾವು ಅಂಗಡಿ ತೆರೆದು ವ್ಯಾಪಾರ ಮಾಡುವ ಸಂದರ್ಭದಲ್ಲಿ ಯಾವುದಾದರೂ ಅನಾಹುತ ಸಂಭವಿಸಬಹುದು. ಈ ನಿಟ್ಟಿನಲ್ಲಿ ಪೊಲೀಸರು ನಮ್ಮ ವ್ಯಾಪಾರಕ್ಕೆ ರಕ್ಷಣೆ ನೀಡಬೇಕು ಎಂದು ವರ್ತಕರು ಮನವಿ ಮಾಡಿದ್ದಾರೆ.

# ಶಾಲೆಗಳ ಬಸ್ ಹಳದಿ ಯಾಕೆ?



| ಡಾ. ಪ್ರಸನ್ನ ದೇವರ ಮಠ ಅನಿಲಕುಮಾರ್, ಮಾಗಳ

ಪ್ರತಿದಿನ ರಸ್ತೆಗಿಳಿಯುವ ಲಕ್ಷಾಂತರ ಶಾಲಾ ಬಸ್‌ಗಳಲ್ಲಿ ಸಾಮಾನ್ಯವಾಗಿ ಕಾಣುವ ಪ್ರಮುಖ ಅಂಶವೆಂದರೆ ಅವುಗಳ ಪ್ರಕಾಶಮಾನವಾದ ಹಳದಿ ಬಣ್ಣ. ಕೆಂಪು, ನೀಲಿ ಅಥವಾ ಹಸಿರು ಬಣ್ಣಗಳ ಬದಲು ಜಗತ್ತಿನಾದ್ಯಂತ ಶಾಲಾ ವಾಹನಗಳಿಗೆ ಹಳದಿ ಬಣ್ಣವನ್ನೇ ಆಯ್ಕೆ ಮಾಡಿರುವುದರ ಹಿಂದೆ ಆಳವಾದ ದೃಗ್ವಿಜ್ಞಾನ, ಮಾನವನ ನೇತ್ರ ವಿಜ್ಞಾನ ಹಾಗೂ ಸುರಕ್ಷತಾ ಇತಿಹಾಸ ಅಡಗಿದೆ.

**ದೃಗ್ವಿಜ್ಞಾನ ಮತ್ತು ಗೋಚರತೆಯ ಶಕ್ತಿ:** ಬೆಳಕಿನ ವರ್ಣಪಟಲದಲ್ಲಿ (VIBGYOR) ಹಳದಿ ಬಣ್ಣವು ಮಧ್ಯಮದಿಂದ ದೀರ್ಘ ತರಂಗಾಂತರದ ವ್ಯಾಪ್ತಿಯಲ್ಲಿ (ಸರಿಸುಮಾರು 570 ರಿಂದ 590 ಟಿಟ) ಬರುತ್ತದೆ. ಬಣ್ಣಗಳ ಭೌತಶಾಸ್ತ್ರದ ಪ್ರಕಾರ, ಬೆಳಕಿನ ತರಂಗಾಂತರ ಮತ್ತು ಚದುರುವಿಕೆ ಪರಸ್ಪರ ಸಂಬಂಧ ಹೊಂದಿವೆ:

**ಕಡಿಮೆ ಚದುರುವಿಕೆ (Low Scattering):**
ನೀಲಿ ಮತ್ತು ನೇರಳೆ ಬಣ್ಣಗಳು ಕಡಿಮೆ ತರಂಗಾಂತರ ಹೊಂದಿದ್ದು ವಾತಾವರಣದಲ್ಲಿನ ಧೂಳು ಹಾಗೂ ತೇವಾಂಶದಿಂದ ಸುಲಭವಾಗಿ ಚದುರಿಹೋಗುತ್ತವೆ (ಇದರಿಂದಲೇ ಆಕಾಶ ನೀಲಿಯಾಗಿ ಕಾಣುತ್ತದೆ). ಆದರೆ ಹಳದಿ ಬಣ್ಣವು ಕಡಿಮೆ ಪ್ರಮಾಣದಲ್ಲಿ ಚದುರುವುದರಿಂದ, ದಟ್ಟವಾದ ಮಂಜು, ಮಳೆ, ಧೂಳು ಅಥವಾ ಮುಂಜಾನೆಯ ಮಂದ ಬೆಳಕಿನಲ್ಲೂ ಅತ್ಯಂತ ಸ್ಪಷ್ಟವಾಗಿ ಗೋಚರಿಸುತ್ತದೆ.

**ಕಾಂಟ್ರಾಸ್ಟ್ ಮತ್ತು ಸುಲಭ ವಾಚನೀಯತೆ:** ಪ್ರಕಾಶಮಾನವಾದ ಹಳದಿ ಬಣ್ಣದ ಹಿನ್ನೆಲೆಯ ಮೇಲೆ ದಪ್ಪನೆಯ ಕಪ್ಪು ಅಕ್ಷರಗಳನ್ನು ಬರೆದಾಗ



ಅತ್ಯುನ್ನತ ಮಟ್ಟದ ವ್ಯತಿರಿಕ್ತತೆ (High Contrast) ಉಂಟಾಗುತ್ತದೆ. ಇದು ಶಾಲೆಯ ಹೆಸರು, ತುರ್ತು ಸಂಪರ್ಕ ಸಂಖ್ಯೆಗಳು ಹಾಗೂ ನಿಯಮಾವಳಿಗಳನ್ನು ದೂರದಿಂದಲೇ ಯಾವುದೇ ಗೊಂದಲವಿಲ್ಲದೆ ಓದಲು ಸಹಾಯ ಮಾಡುತ್ತದೆ.

**ಮಾನವ ನೇತ್ರ ವಿಜ್ಞಾನ:** ಪಾರ್ಶ್ವ ದೃಷ್ಟಿ (Peripheral Vision) ಸಾಮಾನ್ಯವಾಗಿ ಅತಿ ಉದ್ದದ ತರಂಗಾಂತರ ಹೊಂದಿರುವ ಕೆಂಪು ಬಣ್ಣವನ್ನು (620x750 nm) ಅಪಾಯದ ಸಂಕೇತಗಳು ಮತ್ತು ನಿಲುಗಡೆ ದೀಪಗಳಿಗೆ ಬಳಸಲಾಗುತ್ತದೆ. ಆದರೆ ಚಲಿಸುವ ವಾಹನಗಳ ವಿಷಯಕ್ಕೆ ಬಂದಾಗ ಹಳದಿ ಬಣ್ಣವು ಕೆಂಪು ಬಣ್ಣಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿದೆ:

**ಪಾರ್ಶ್ವ ಬಾಹ್ಯ ದೃಷ್ಟಿ:** ಮಾನವನ ಕಣ್ಣಿನ ಮೂಲೆಗಳಿಂದ ಗಮನಿಸುವ ಸಾಮರ್ಥ್ಯವನ್ನು ಪಾರ್ಶ್ವ ದೃಷ್ಟಿ ಎನ್ನಲಾಗುತ್ತದೆ. ವೈಜ್ಞಾನಿಕ ಸಂಶೋಧನೆಗಳ ಪ್ರಕಾರ, ಹಳದಿ ಬಣ್ಣವನ್ನು ಪತ್ತೆಹಚ್ಚುವ ಪಾರ್ಶ್ವ ದೃಷ್ಟಿಯ ಸಾಮರ್ಥ್ಯವು ಕೆಂಪು ಬಣ್ಣಕ್ಕಿಂತ ಸರಿಸುಮಾರು 1.24 ಪಟ್ಟು ಹೆಚ್ಚಾಗಿದೆ.

**ತ್ವರಿತ ಮೆದುಳಿನ ಗ್ರಹಿಕೆ:** ವಾಹನ ಚಾಲಕರು ನೇರವಾಗಿ ಶಾಲಾ ಬಸ್‌ನತ್ತ ನೋಡದಿದ್ದರೂ ಸಹ, ಅವರ ದೃಷ್ಟಿಯ ಮೂಲೆಯಲ್ಲಿ ಹಾದುಹೋಗುವ ಹಳದಿ ಬಣ್ಣದ ಹೊಳಪನ್ನು ಮೆದುಳು ಅತ್ಯಂತ ವೇಗವಾಗಿ ಗ್ರಹಿಸುತ್ತದೆ. ರಸ್ತೆಯ ತಿರುವುಗಳಲ್ಲಿ ಮತ್ತು ಅಡ್ಡರಸ್ತೆಗಳಲ್ಲಿ ಇದು ಅಪಘಾತಗಳನ್ನು ತಪ್ಪಿಸಲು ಪ್ರಮುಖ ಪಾತ್ರ ವಹಿಸುತ್ತದೆ.

**ಇತಿಹಾಸ:** "ಹಳದಿ ಶಾಲಾ ಬಸ್‌ನ ಪಿತಾಮಹ" ಶಾಲಾ ಬಸ್‌ಗಳಿಗೆ ಹಳದಿ ಬಣ್ಣವನ್ನು ನಿಗದಿಪಡಿಸಿದ ಇತಿಹಾಸ 1939 ರಿಂದ ಪ್ರಾರಂಭವಾಗುತ್ತದೆ. ಆ ಸಮಯದಲ್ಲಿ ಅಮೆರಿಕಾದಲ್ಲಿ ಶಾಲಾ ವಾಹನಗಳಿಗೆ ಯಾವುದೇ ನಿರ್ದಿಷ್ಟ ನಿಯಮ ಅಥವಾ ಬಣ್ಣದ ಮಾನದಂಡಗಳಿರಲಿಲ್ಲ:

**ರಾಷ್ಟ್ರೀಯ ಸಮ್ಮೇಳನ (1939):** ಕೊಲಂಬಿಯಾ ವಿಶ್ವವಿದ್ಯಾಲಯದ ಶಿಕ್ಷಣ ತಜ್ಞ ಡಾ. ಫ್ರಾಂಕ್ ಡಬ್ಲ್ಯೂ. ಸಿರ್ ಅವರು ಅಮೆರಿಕದಾದ್ಯಂತ ಶಾಲಾ ಸಾರಿಗೆಯ ಗಾತ್ರ, ಸಾಮರ್ಥ್ಯ ಮತ್ತು ಸುರಕ್ಷತೆಯನ್ನು ಪ್ರಮಾಣೀಕರಿಸಲು ಒಂದು ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿದರು. ಇವರ ಈ ಕೊಡುಗೆಯಿಂದಾಗಿ ಅವರನ್ನು "ಹಳದಿ ಶಾಲಾ ಬಸ್‌ನ ಪಿತಾಮಹ" ಎಂದು ಕರೆಯಲಾಗುತ್ತದೆ.

**ಮಾನದಂಡದ ಆಯ್ಕೆ:** ತಜ್ಞರು ವಿವಿಧ ಬಣ್ಣಗಳ ಮಾದರಿಗಳನ್ನು ರಸ್ತೆಯ ಪರಿಸರದಲ್ಲಿ ಪರೀಕ್ಷಿಸಿ, ಹಳದಿ ಬಣ್ಣವು ಸುರಕ್ಷತೆಗೆ ಅತ್ಯಂತ ಸೂಕ್ತವೆಂದು ನಿರ್ಧರಿಸಿದರು. ಅವರು ಈ ನಿರ್ದಿಷ್ಟ ಛಾಯೆಗೆ "ನ್ಯಾಷನಲ್ ಸ್ಕೂಲ್ ಬಸ್ ಗ್ಲಾಸಿ ಹಳದಿ" (National School Bus Glossy Yellow) ಎಂದು ಹೆಸರಿಸಿದರು.

**"ಕ್ರೋಮ್ ಹಳದಿ"ಯಿಂದ ಆಧುನಿಕ ಸುರಕ್ಷತೆಗೆ**

ಈ ಬಣ್ಣವನ್ನು ಅಧಿಕೃತವಾಗಿ ಫೆಡರಲ್ ಸ್ಟ್ಯಾಂಡರ್ಡ್ ಸಂಖ್ಯೆ 595ಚಿ, ಬಣ್ಣ 13432 ಎಂದು ನೋಂದಾಯಿಸಲಾಗಿದೆ. ಆರಂಭಿಕ ದಿನಗಳಲ್ಲಿ ಈ ಪ್ರಕಾಶಮಾನ ಬಣ್ಣವನ್ನು ತಯಾರಿಸಲು ಸೀಸದ ಕ್ರೋಮೇಟ್ (Lead Chromate) ಎಂಬ ವರ್ಣದ್ರವ್ಯವನ್ನು ಬಳಸಲಾಗುತ್ತಿತ್ತು, ಆದ್ದರಿಂದ ಇದನ್ನು "ಸ್ಕೂಲ್ ಬಸ್ ಕ್ರೋಮ್ ಹಳದಿ" ಎಂದೂ ಕರೆಯಲಾಗುತ್ತಿತ್ತು.

ಕಾಲಾನಂತರದಲ್ಲಿ ಸೀಸದಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳನ್ನು ತಡೆಗಟ್ಟಲು ತಯಾರಕರು ಸೀಸ-ಮುಕ್ತ ಸುರಕ್ಷಿತ ವರ್ಣದ್ರವ್ಯಗಳಿಗೆ ಬದಲಾದರು. ರಾಸಾಯನಿಕ ಸಂಯೋಜನೆ ಬದಲಾದರೂ ಬಣ್ಣದ ಗೋಚರತೆಯ ಮಾನದಂಡವನ್ನು ಇಂದಿಗೂ ಹಾಗೆಯೇ ಕಾಯ್ದುಕೊಳ್ಳಲಾಗಿದೆ. ಶಾಲಾ ಬಸ್‌ಗಳ ಹಳದಿ ಬಣ್ಣವು ಕೇವಲ ಒಂದು ಸಂಪ್ರದಾಯವಾಗಿರದೆ, ರಸ್ತೆಯಲ್ಲಿ ಮಕ್ಕಳ ಪ್ರಾಣ ರಕ್ಷಣೆ ಮಾಡುವ ಅತ್ಯಂತ ಪ್ರಮುಖ ವೈಜ್ಞಾನಿಕ ಮತ್ತು ಸುರಕ್ಷತಾ ತಂತ್ರಜ್ಞಾನವಾಗಿದೆ.

# ಈದ್-ಎ-ಮಿಲಾದ್-ಉನ್-ನಬಿ






| ಪುಷ್ಪ ಪ್ರಸಾದ್

ಮುಸ್ಲಿಮರಿಗೆ ಪವಿತ್ರವಾದ ಎರಡು ಹಬ್ಬಗಳಾದ ಈದ್ ಉಲ್ ಫಿತ್ರ್ ಮತ್ತು ಈದ್ ಉಲ್ ಅಧಾ ಬಳಿಕ ಪ್ರಮುಖವಾದ ದಿನವೆಂದರೆ ಮಿಲಾದುನ್ನಬೀ ಅಥವಾ ಈದ್ ಮಿಲಾದ್ ಆಗಿದೆ. ಇದು ಪ್ರವಾದಿಯವರ ಜನ್ಮ ಮತ್ತು ಪುಣ್ಯ ತಿಥಿಯದಿನದ ರೂಪದಲ್ಲಿ ಆಚರಿಸಲಾಗುತ್ತದೆ. ಇಸ್ಲಾಮಿಕ್ ತಿಂಗಳಾದ ರಬಿ ಅಲ್ ಅವ್ವಲ್ ನಲ್ಲಿ ಬರುವ ಈ ದಿನವನ್ನು ಸುನ್ನಿಗಳು ಮತ್ತು ಶಿಯಾಗಳು ಬೇರೆ ಬೇರೆ ದಿನದಂದು ಆಚರಿಸುತ್ತಾರೆ.

**ಇತಿಹಾಸ ಮತ್ತು ಮಹತ್ವ:** ರಬೀ ಅಲ್-ಅವ್ವಲ್ ಇಸ್ಲಾಮಿಕ್ ಕ್ಯಾಲೆಂಡರ್‌ನಲ್ಲಿ ಮೂರನೇ ತಿಂಗಳು. ಪ್ರವಾದಿ ಮುಹಮ್ಮದ್ (ಸ) ಸುಮಾರು ಕ್ರಿ.ಶ. 570 ರಲ್ಲಿ ಮೆಕ್ಕಾ ನಗರದಲ್ಲಿ ಜನಿಸಿದರು. ಇದು ಪ್ರವಾದಿಯವರ ಜನನ ಮತ್ತು ಅವರ ಕರುಣೆ, ದಯೆ ಮತ್ತು ನ್ಯಾಯದ ಬೋಧನೆಗಳನ್ನು ಗುರುತಿಸುತ್ತದೆ. ಈ ಹಬ್ಬವನ್ನು ಸುನ್ನಿ ಮುಸ್ಲಿಮರು ಇಸ್ಲಾಮಿಕ್ ಧರ್ಮದ 12 ನೇ ದಿನದಂದು ಈ ದಿನವನ್ನು ಆಚರಿಸಿದರೆ, ಶಿಯಾ ಮುಸ್ಲಿಮರು ರಬಿ ಅಲ್ ಅವ್ವಾಲ್ ನ 17 ನೇ ದಿನದಂದು ಈ ದಿನವನ್ನು ಆಚರಿಸುತ್ತಾರೆ. ಈ ದಿನದಂದು ಸಮಾಜದಲ್ಲಿ ಶಾಂತಿ, ನೆಮ್ಮದಿ, ಸೌಹಾರ್ದತೆ, ಸಾಮರಸ್ಯ ಮೂಡಿಸಲು ಪ್ರವಾದಿಯವರು ನೀಡಿದ ಸಂದೇಶವನ್ನು ಬದುಕಿನಲ್ಲಿ ಪಾಲಿಸುವುದಕ್ಕಾಗಿ ಈ ಹಬ್ಬವು ಮಹತ್ವದ್ದಾಗಿದೆ. ಈದ್-ಇ- ಮಿಲಾದ್ ಹಬ್ಬವನ್ನು ಪ್ರಪಂಚದಾದ್ಯಂತದ ಎಲ್ಲಾ ಮುಸ್ಲಿಮರು ಬಹಳ ಉತ್ಸಾಹ ಮತ್ತು ಸಂತೋಷದಿಂದ ಆಚರಿಸುತ್ತಾರೆ.

**ಈದ್- ಇ ? ಮಿಲಾದ್ ಹಬ್ಬದ ಆಚರಣೆ ಹೇಗೆ?:** ಮನೆ ಹಾಗೂ ಸುತ್ತಲಿನ ಪರಿಸರವನ್ನು ಬಣ್ಣ ಬಣ್ಣದ ದೀಪಗಳಿಂದ ಅಲಂಕರಿಸುವುದಲ್ಲದೆ, ಹಬ್ಬದ ದಿನ ಹೊಸ ಬಟ್ಟೆಗಳನ್ನು ಧರಿಸುವುದು, ಸಿಹಿ ತಿಂಡಿಗಳನ್ನು ವಿತರಿಸಲಾಗುತ್ತದೆ. ಮಸೀದಿಗೆ ಭೇಟಿ ನೀಡಿ ಈ ದಿನ ವಿಶೇಷ ಪ್ರಾರ್ಥನೆಗಳನ್ನು ಸಲ್ಲಿಸುತ್ತಾರೆ. ಮಹಿಳೆಯರು ಶೀರ್ ಖುರ್ಮಾ ಮತ್ತು ಸೇವಾಯನ್ ನಂತಹ ವಿವಿಧ ರೀತಿಯ ಭಕ್ಷ್ಯಗಳನ್ನು ತಯಾರಿಸಿ ಮನೆ ಮಂದಿಯೆಲ್ಲಾ ಜೊತೆ ಸೇರಿ ಹಬ್ಬವನ್ನು ಆಚರಿಸುತ್ತಾರೆ. ಪ್ರಪಂಚದಾದ್ಯಂತದ ಮುಸ್ಲಿಮರು ತಮ್ಮ ಮನೆಗಳು, ಮಸೀದಿಗಳು ಮತ್ತು ಬೀದಿಗಳನ್ನು ವರ್ಣರಂಜಿತ ದೀಪಗಳು ಮತ್ತು ಹಸಿರು ಧ್ವಜಗಳಿಂದ ಅಲಂಕರಿಸುವ ಮೂಲಕ ಈದ್ ಮಿಲಾದ್ ಉನ್ ನಬಿಯನ್ನು ಆಚರಿಸುತ್ತಾರೆ. ಅವರು ವಿಶೇಷ ಪ್ರಾರ್ಥನೆಗಳನ್ನು ಸಲ್ಲಿಸುತ್ತಾರೆ ಮತ್ತು ಅಲ್ಲಾಹನ ಆಶೀರ್ವಾದವನ್ನು ಪಡೆಯುತ್ತಾರೆ. ಅನೇಕರು ಭಾರತದ ಪ್ರಮುಖ ಧಾರ್ಮಿಕ ಸ್ಥಳಗಳಾದ ಹಾಜಿ ಅಲಿ ದರ್ಗಾ, ಜಾಮಾ ಮಸೀದಿ, ನಿಜಾಮುದ್ದೀನ್ ಔಲಿಯಾ ಮತ್ತು ಅಜ್ಮೀರ್ ಷರೀಫ್‌ಗಳಿಗೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸುತ್ತಾರೆ ಮತ್ತು ಆಶೀರ್ವಾದ ಪಡೆಯುತ್ತಾರೆ. ರಬಿ ಅಲ್ ಅವ್ವಲ್ ತಿಂಗಳ ಆರಂಭದಿಂದ ತಿಂಗಳ ಕೊನೆಯವರೆಗೂ ಒಂದು ತಿಂಗಳ ಕಾಲ ವಿಶ್ವದಾದ್ಯಂತ ಈದ್ ಮಿಲಾದ್ ಆಚರಣೆಗಳು ನಡೆಯುತ್ತವೆ. ಭಾರತದಲ್ಲಿ ಈದ್ ಮಿಲಾದ್ ಆಚರಣೆಯನ್ನು ಎಲ್ಲಾ ಪಂಗಡದ ಮುಸಲ್ಮಾನರು ಆಚರಿಸುತ್ತಾರೆ. ಈದ್ ಮಿಲಾದ್ ದಿನದಂದು ವಿವಿಧ ಸಾಂಸ್ಕೃತಿಕ, ಪ್ರತಿಭಾ ಕಾರ್ಯಕ್ರಮಗಳನ್ನು ನಡೆಸುವುದು. ಮೌಲೀದ್ ಪಾರಾಯಣ ಮಾಡುವುದು, ಅನ್ನಸಂತರ್ಪಣೆ ಮಾಡುವುದು, ಮೆರವಣಿಗೆ ಮಾಡುವುದು ಈದ್ ಮಿಲಾದ್ ಆಚರಣೆಯ ಒಂದು ಭಾಗವಾಗಿದೆ. ಈದ್ ಮಿಲಾದ್ ಆಚರಣೆಯ ರಬಿ ಅಲ್ ಅವ್ವಲ್ ತಿಂಗಳಲ್ಲಿ ಮುಸಲ್ಮಾನರ ಎಲ್ಲಾ ಧಾರ್ಮಿಕ ಕೇಂದ್ರಗಳು ಮತ್ತು ವಿದ್ಯಾ ಸಂಸ್ಥೆಗಳನ್ನು ಬಣ್ಣದ ದೀಪಗಳು, ಮತ್ತು ಕಾಗದಗಳಿಂದ ಅಲಂಕರಿಸಲಾಗುತ್ತದೆ. ಈ ದಿನವು ಪ್ರಪಂಚದಾದ್ಯಂತದ ಮುಸ್ಲಿಮರಿಗೆ ಅಪಾರ ಆಧ್ಯಾತ್ಮಿಕ ಮಹತ್ವದ್ದಾಗಿದೆ, ಏಕೆಂದರೆ ಇದು ಪ್ರವಾದಿಯವರ ಬೋಧನೆಗಳನ್ನು ಪ್ರತಿಬಿಂಬಿಸಲು ಮತ್ತು ಅವರ ದಯೆ, ಸಹಾನುಭೂತಿ ಮತ್ತು ನಂಬಿಕೆಯ ತತ್ವಗಳ ಮೂಲಕ ಬದುಕುವ ಬದ್ಧತೆಯನ್ನು ನವೀಕರಿಸಲು ಅನುವು ಮಾಡಿಕೊಡುತ್ತದೆ.

**ಈದ್ ಮಿಲಾದ್ ಆಚರಣೆಯ ಪ್ರಮುಖ** ಕಾರ್ಯಕ್ರಮಗಳಲ್ಲಿ ಮೆರವಣಿಗೆಯೂ ಒಂದು. ರಬಿ ಅಲ್ ಅವ್ವಲ್ ತಿಂಗಳ ಹನ್ನೆರಡನೆಯ ದಿನ ಅಂದರೆ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಜನಿಸಿದ ದಿನದಂದು ಜಗತ್ತಿನ ಎಲ್ಲಾ ಕಡೆಗಳಲ್ಲೂ ಆಯ ಪ್ರದೇಶದ ಸಮಯಕ್ಕೆ ಹೊಂದಿಕೊಂಡು ಮೆರವಣಿಗೆಯನ್ನು ಆಯೋಜಿಸಲಾಗುತ್ತದೆ. ಪ್ರವಾದಿಯ ಮುಹಮ್ಮದರ ಜನ್ಮ ದಿನದ ಖುಷಿಗಾಗಿ ಮೆರವಣಿಗೆಯನ್ನು ಆಯೋಜಿಸಲಾಗುತ್ತದೆ.

ಮೆರವಣಿಗೆಯಲ್ಲಿ ವಿವಿಧ ಇಸ್ಲಾಮಿಕ್ ಕಲಾ ತಂಡಗಳು ಭಾಗವಹಿಸುತ್ತವೆ. ವಾಹನ ಮೆರವಣಿಗೆ, ಕಾಲ್ನಡಿಗೆ ಜಾಥಾ ಇವುಗಳಲ್ಲಿ ಪ್ರಮುಖವಾದವು. ಈದ್ ಮಿಲಾದ್ ಮೆರವಣಿಗೆಯ ದಾರಿಯುದ್ದಕ್ಕೂ ಸಿಹಿ ತಿಂಡಿಗಳನ್ನು ವಿತರಿಸುವುದು ಮೆರವಣಿಗೆಯ ಪ್ರಮುಖ ಆಕರ್ಷಣೆಗಳಲ್ಲಿ ಒಂದು. ಈದ್ ಮಿಲಾದ್ ಮೆರವಣಿಗೆಯಲ್ಲಿ ಕೇವಲ ಮುಸಲ್ಮಾನರಲ್ಲದೆ ಇತರ ಧರ್ಮೀಯರು ಕೂಡ ಪಾಲ್ಗೊಳ್ಳುತ್ತಾರೆ.

ಈದ್ ಮಿಲಾದ್ ಆಚರಣೆಯ ಬಗ್ಗೆ ಕೆಲ ಚರ್ಚೆಗಳು ಸಹ ನಡೆದಿವೆ. ಪ್ರವಾದಿ ಮೊಹಮ್ಮದ್ ಅವರು ಎಂದು ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡಿಲ್ಲ. ಹದೀಸ್, ಖುರಾನ್ ಎಲ್ಲಿಯೂ ಜಯಂತಿ ಆಚರಿಸಿ ಎಂದು ಹೇಳಿಲ್ಲ. ಹಾಗಾಗಿ ಇಸ್ಲಾಂನಲ್ಲಿ ಹುಟ್ಟುಹಬ್ಬ ಆಚರಣೆ ನಿಷಿದ್ಧ ಎಂಬುವುದು ಕೆಲವರ ವಾದ. ನಾನಿದನ್ನು ಕೆಲವು ಮೂಲಗಳಿಂದ ತಿಳಿದು ಬರೆದಿರುತ್ತೇನೆ. ಅದೇನೆ ಇರಲಿ ಈ ಈದ್-ಇ-ಮಿಲಾದ್ ಹಬ್ಬವು ಎಲ್ಲಾರಿಗೂ ಶುಭವನ್ನುಂಟು ಮಾಡಲಿ.

# ಶ್ರಮವೇ ಆಯುಷ್ಯದ ಮಂತ್ರ



ಶ್ರಮ ಶಾಪವಲ್ಲ, ಅದು ಬದುಕಿನ ಸಂಜೀವಿನಿ. ಬೆವರಿನ ಪ್ರತಿ ಹನಿಯೂ ಆಯುಷ್ಯದ ಖಾತೆಗೆ ಜಮೆಯಾಗುವ ಚಿನ್ನದ ಬಡ್ಡಿ ಎಂಬುದು ಕಾವ್ಯದ ಉತ್ಪ್ರೇಕ್ಷೆಯಲ್ಲ, ವೈದ್ಯ ವಿಜ್ಞಾನದ ಸ್ಫಟಿಕ ಸತ್ಯ. ಕಾಯ ದುಡಿದಾಗ ಸ್ನಾಯುಗಳಿಂದ ಮಯೋಕೈನ್ ಎಂಬ ದಿವ್ಯ ಜೀವ-ರಸಾಯನ ಸ್ರವಿಸಿ, ಮೆದುಳಿನ ಸ್ಮೃತಿ ಸಾಮ್ರಾಜ್ಯವಾದ ಹಿಪೊಕ್ಯಾಂಪಸ್‌ನಲ್ಲಿ ನವಕೋಶಗಳ ಅಂಕುರವನ್ನು ಅರಳಿಸುತ್ತದೆ. ಇದು ಖಿನ್ನತೆಯ ಕತ್ತಲೆಯನ್ನು ಸೀಳುವ ನೈಸರ್ಗಿಕ ದೀಪ.

ವಾರಕ್ಕೆ ಮೂರು ದಿನದ ಭಾರೋತ್ತೋಲನ ಮತ್ತು ಚುರುಕು ಚಲನೆಯ ಕಸರತ್ತು ಸ್ನಾಯುಕ್ಷಯದ ಸವಕಳಿಯನ್ನು ತಡೆದು, ಅಸ್ಥಿ ಸಾಂದ್ರತೆಯನ್ನು ವಜ್ರಸದೃಶವಾಗಿಸುತ್ತದೆ. ಇದು ಮಧುಮೇಹ, ರಕ್ತದೊತ್ತಡದಂತಹ ಜೀವನಶೈಲಿ ವ್ಯಾಧಿಗಳ ಲಗಾಮನ್ನು ಬಿಗಿಗೊಳಿಸುತ್ತದೆ. ತಬಾಟಾ ಶೈಲಿಯ ಅಧಿಕ-ತೀವ್ರತೆಯ ಮಧ್ಯಂತರ ತರಬೇತಿಯು ರಕ್ತನಾಳಗಳ ಕಾಠಿಣ್ಯದ ಕವಚವನ್ನು ಕರಗಿಸಿ, ಹೃದಯಕ್ಕೆ ನವೋಲ್ಲಾಸದ ನವಚೈತನ್ಯ ನೀಡುತ್ತದೆ.

ಏಕಾಂಗಿ ಬೆವರಿಗಿಂತ ಸಾಮೂಹಿಕ ಶ್ರಮವೇ ಸಾರ್ಥಕ. ಕೆರೆ ಹೂಳೆತ್ತುವ ಸಂಭ್ರಮ, ವನೀಕರಣದ ಹಬ್ಬ, ಸ್ವಚ್ಛತಾ ಆಂದೋಲನದ ಉತ್ಸವಗಳು ದೇಹಕ್ಕೆ ಯಜ್ಞ, ಮನಸ್ಸಿಗೆ ಯೋಗ. ಜೊತೆಗೂಡಿ ದುಡಿದಾಗ ಮಿದುಳಿನಲ್ಲಿ ಆಕ್ಸಿಟೋಸಿನ್-ಎಂಡಾರ್ಫಿನ್ ಎಂಬ ಆನಂದಾಮೃತ ಉಕ್ಕಿ ಹರಿದು ಒಂಟಿತನದ ವಿಷಾದದ ಮಂಜು ಕರಗುತ್ತದೆ. ಬಾಲ್ಯದಲ್ಲೇ ಮಕ್ಕಳನ್ನು ಪ್ರಕೃತಿಯ ಮಡಿಲಿಗೆ ಒಪ್ಪಿಸಿದರೆ ಅವರು ಮಾನಸಿಕವಾಗಿ ಅಜೇಯರು, ಅಭೇದ್ಯರು.

ಆರೋಗ್ಯದ ಮರ್ಮ ಅತಿ ಸರಳ, ಅತಿ ಸುಂದರ. ಲಿಫ್ಟ್ ತಿರಸ್ಕರಿಸಿ ಮೆಟ್ಟಿಲುಗಳನ್ನು ಅಪ್ಪಿ, ಒಂದು ನಿಲ್ದಾಣ ಮೊದಲೇ ಇಳಿದು ಹೆಜ್ಜೆ ಹಾಕಿ, ದಿನದ ಅರ್ಧ ಗಂಟೆಯನ್ನು ಈಜು, ಸೈಕಲ್, ಹಗ್ಗದಾಟದ ಉತ್ಸವಕ್ಕೆ ಮೀಸಲಿಡಿ. ಕಚೇರಿಯಲ್ಲಿ ನಿಂತು ಸಂವಾದಿಸಿ, ಮನೆಯಲ್ಲಿ ರುಬ್ಬಿ, ಗುಡಿಸಿ, ಬಗ್ಗಿ ರಂಗೋಲಿ ಬಿಡಿ. ಇವು ಚಯಾಪಚಯವನ್ನು ಚುರುಕುಗೊಳಿಸುವ ಗುಪ್ತ ಯೋಗಗಳು. ಯಾಂತ್ರಿಕತೆಯ ಬಿರುಗಾಳಿಯಲ್ಲಿ ದೇಹವನ್ನು ನಿತ್ಯ ಶ್ರಮದ ತಪಸ್ಸಿಗೆ ಒಡ್ಡುವುದೇ ದೀರ್ಘಾಯುಷ್ಯದ ದಿವ್ಯ ಮಂತ್ರ, ಅಮೃತ ಪಥ.

ಅಂಕಣ-04
ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ

# ಉತ್ತಮರ ಗೌರವಿಸುವುದು ಪ್ರಮುಖ ಕಾರ್ಯ




**ಮೈಸೂರು:** ಸಮಾಜದಲ್ಲಿ ಉತ್ತಮ ಕಾರ್ಯ ಮಾಡುವವರನ್ನು ಗುರುತಿಸಿ ಗೌರವಿಸುವುದು ಕೂಡ ರಾಷ್ಟ್ರ ನಿರ್ಮಾಣದ ಒಂದು ಪ್ರಮುಖ ಕಾರ್ಯವಾಗಿದೆ ಎಂದು ಚಲನಚಿತ್ರ ನಟ ಶಂಕರ್ ಅಶ್ವಥ್ ಹೇಳಿದರು.

ನಗರದ ರೋಟರಿ ಭವನದಲ್ಲಿ ಕರುನಾಡ ದೀಪ ಸೇವಾ ಟ್ರಸ್ಟ್ ವತಿಯಿಂದ 80ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ವಿವಿಧ ಕ್ಷೇತ್ರಗಳ ನಾಡಿನ ಸಾಧಕರುಗಳಿಗೆ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಸ್ವಾತಂತ್ರ್ಯವೆಂದರೆ ಕೇವಲ ಬಂಧನಗಳಿಂದ ಮುಕ್ತಿಯಾಗುವುದಲ್ಲ, ಪ್ರತಿಯೊಬ್ಬ ನಾಗರೀಕರು ತನ್ನ ಕರ್ತವ್ಯ, ಜವಾಬ್ದಾರಿ ಹಾಗೂ ಸಾಮಾಜಿಕ ಹೊಣೆಗಾರಿಕೆಯನ್ನು ಅರಿತು ದೇಶದ ಪ್ರಗತಿಗೆ ಕೈಜೋಡಿಸಬೇಕು. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರ ತ್ಯಾಗ ಮತ್ತು ಬಲಿದಾನವನ್ನು ಸ್ಮರಿಸುವುದರ ಜೊತೆಗೆ, ಇಂದಿನ ಪೀಳಿಗೆ ದೇಶದ ಸ್ವಾತಂತ್ರ್ಯದ ಮೌಲ್ಯವನ್ನು ಅರಿತು ಅದನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಹೊಂದಿದೆ ಎಂದರು.

ಸಮಾರಂಭದಲ್ಲಿ ಸಮಾಜ ಸೇವೆ, ಶಿಕ್ಷಣ, ವೈದ್ಯಕೀಯ, ಆರೋಗ್ಯ, ಸಂಘಟನೆ, ಇಂಜಿನಿಯರಿಂಗ್, ಅರಣ್ಯ, ಕೃಷಿ, ಧಾರ್ಮಿಕ, ಆಡಳಿತ, ಉದ್ಯಮ, ಕಲೆ-ಸಾಂಸ್ಕೃತಿಕ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 19 ಸಾಧಕರನ್ನು ಗೌರವಿಸಲಾಯಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಮಾದಳ್ಳಿ ಉಕ್ಕಿನ ಕಂತೆ ಮಠದ ಶ್ರೀ ಸಾಂಬ ಸದಾಶಿವ ಸ್ವಾಮೀಜಿವಹಿಸಿದ್ದರು.

ಸಮಾರಂಭದಲ್ಲಿ ಕರುನಾಡ ದೀಪ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ಟಿ.ಮೋಹನ್ ಕುಮಾರ್, ಚಲನಚಿತ್ರ ನಟಿ ಕಾವ್ಯ, ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಸೋಮಶೇಖರ್, ನಂಜನಗೂಡು ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಕರಳಾಪುರ ನಾಗರಾಜು, ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಕೆ.ಆರ್.ಶ್ಯಾಮಸುಂದರ್, ನಿರ್ದೇಶಕ ಎಂ.ಎಸ್.ನರಸಿಂಹ, ಯುವರಾಜ ಕಾಲೇಜು ಪ್ರಾಂಶುಪಾಲ ಡಾ.ಅಜಯ್ ಕುಮಾರ್, ನಿವೃತ್ತ ಪ್ರಾಂಶುಪಾಲ ಡಾ.ಎಂ.ಗೋವಿಂದರಾಜು, ಮುಖ್ಯ ಶಿಕ್ಷಕರಾದ ಹೆಚ್.ಪಿ.ಲೋಕೇಶ್, ಎಂ.ಪಿ.ಶಿವಶಂಕರ್, ನಗರ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಪ್ರಧಾನ ಕಾರ್ಯದರ್ಶಿ ಆರ್.ವಿನೋದ್ ಉಪ್ಪಾರ್, ಯುವ ಮುಖಂಡರಾದ ಕೆ.ಎಲ್.ಲೋಕೇಶ್, ಪ್ರದೀಪ್, ಯೋಗೇಶ್ ಕುಮಾರ್, ಶಿವರಾಜ್ ಸೇರಿ ಹಲವರು ಇದ್ದರು.

# ವಿದ್ಯೆ ವ್ಯಕ್ತಿತ್ವವನ್ನು ರೂಪಿಸುವ ಸಾಧನ

**ವಿದ್ಯಾದಧಾತಿ ವಿನಯಂ**
**ವಿನಯಾದ್ ಮಾತಿ ಪತ್ರತಾಂ**
**ಪಾತ್ರದ್ವಾದ್ ಧನಮಾಪ್ನೋತಿ**
**ಧನಾದ್ ಧರ್ಮಂ,ತತಃ ಸುಖಮ್॥**



| ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ವಿದ್ಯೆ ಮನುಷ್ಯನಿಗೆ ವಿನಯ ತಂದುಕೊಡುತ್ತದೆ. ವಿನಯದಿಂದ ಮನುಷ್ಯನ ವ್ಯಕ್ತಿತ್ವ ರೂಪುಗೊಳ್ಳುತ್ತದೆ.ಆ ವ್ಯಕ್ತಿತ್ವದಿಂದ ಹಣ ಸಂಪಾದನೆ ಯಾಗುತ್ತದೆ. ಸಂಪಾದಿಸಿದ ಹಣ ಧರ್ಮಕಾರ್ಯಗಳಲ್ಲಿ ಸದ್ವಿನಿಯೋಗವಾಗಿ ಸುಖ ದೊರೆಯುತ್ತದೆ.

ನಮ್ಮ ದೇಶದ ಮಕ್ಕಳಿಗೆ ನಮ್ಮ ಸಂಸ್ಕೃತಿಗೆ ಅನುಗುಣವಾಗಿ ಕೆಲವೊಂದು ಆದರ್ಶದ ಕನಸುಗಳಿರುತ್ತವೆ.ಅವರ ಮನೋಧರ್ಮ ಹಣಮಾಡುವದರ ಕಡೆ ಇರುವದಿಲ್ಲ.ಬದಲಾಗಿ ಸಮಾಜದ ಒಳಿತಿಗಾಗಿ ಏನಾದರೂ ಮಾಡಬೇಕೆಂಬ ತುಡಿತ ಇರುತ್ತದೆ.ಮಕ್ಕಳನ್ನು ನೀವು ಏನಾಗುತ್ತೀರಿ ಎಂದು ವಿಚಾರಿಸಿದಾಗ ಡಾಕ್ಟರ,ಇಂಜನಿಯರ,ಶಿಕ್ಷಕ,ರಾಜಕಾರಣಿ,ಎಂದು ಹೇಳುತ್ತಾರೆ.ಅದಲ್ಲದೇ ಮಕ್ಕಳು ಬಡವರ ಸೇವೆ ಮಾಡುತ್ತೇವೆ ಎಂದೂ ಹೇಳುವದುಂಟು.ಅದೇ ರೀತಿ ವಿದೇಶದ ಮಕ್ಕಳನ್ನು ವಿಚಾರಿಸಿದಾಗ ನಮಗೆ ಗೊತ್ತಿಲ್ಲ,ಇನ್ನೂ ಅದರ ಬಗ್ಗೆ ಯೋಚನೆ ಮಾಡಿಲ್ಲ ಎಂಬ ಉತ್ತರ ಥಟ್ ಎಂದು ಬರುತ್ತದೆ.ಮಕ್ಕಳಿಗೆ ತಿಳುವಳಿಕೆ ವಯಸ್ಸು ಬಂದಾಗ ನಮ್ಮ ಸಂಸ್ಕೃತಿಗೆ ಅನುಗುಣವಾಗಿ ಕೆಲವೊಂದು ಆದರ್ಶದ ಕನಸನ್ನು ಕಂಡಿರುತ್ತಾರೆ.ಆದರೆ ಪೋಷಕರು ನಮ್ಮ ಮಗುವು ಚೆನ್ನಾಗಿ ಓದಿ ಹಣಗಳಿಸಲಿ ಎಂಬ ಆಸೆ ಹೊಂದಿರುತ್ತಾರೆ.ಬಟ್ಟೆ ಎಷ್ಟೇ ಶುಭ್ರವಾಗಿದ್ದರೂ ಅದರ ಮೇಲೆ ಕೆಸರು ಸಿಡಿದರೆಹೇಗೆ ಕೊಳೆಯಾಗುವದೋ ಹಾಗೆ ಬಾಲ್ಯಾವಸ್ಥೆಯಲ್ಲಿ ನಿರ್ಮಲವಾಗಿದ್ದ ಮಕ್ಕಳ ಮನಸ್ಸು ಕ್ರಮೇಣ ಪ್ರೌಢಾವಸ್ಥೆ ತಲುಪಿದಾಗ ಕೊಳಕು ಸಾಮಾಜಿಕ ಪರಿಸರದಲ್ಲಿ ಮಲಿನವಾಗಿ ಪರಿಶುದ್ಧತೆಯನ್ನು ಕಳೆದುಕೊಳ್ಳುತ್ತದೆ.ಮಕ್ಕಳಿಗೆ ಪೋಷಕರು ಹೆಚ್ಚು ಹಣ ಸಂಪಾದಿಸುವ ವೃತ್ತಿ ಶಿಕ್ಷಣ ಕೊಡಿಸಲು ಇಚ್ಛೆ ಪಡುತ್ತಾರೆ.ಅಗತ್ಯವಾದ ಗುಣಸಂಪಾದನೆ ಮಾಡಲು ಬೇಕಾದ ನೈತಿಕ ಶಿಕ್ಷಣ ಕೊಡಿಸಲು ಪ್ರಯತ್ನಿಸುವದು ಮುಖ್ಯವಾಗಿದೆ.ಶಿಕ್ಷಣವೆಂದರೆ ಕೇವಲ ಪುಸ್ತಕ ಜ್ಞಾನ ಅಕ್ಷರ ಜ್ಞಾನ ಮಾತ್ರವಲ್ಲ. ಮನಸ್ಸಿಗೆ ಸಂಸ್ಕಾರ ಕೊಡುವದೂ ಕೂಡ ಶಿಕ್ಷಣದ ಒಂದು ಭಾಗ.ವಿದ್ಯಾರ್ಥಿಗಳಿಗೆ ಔದ್ಯೋಗಿಕ,ವ್ಯವಹಾರಿಕ,ಅದ್ಯಾತ್ಮಿಕ ಈ ಮೂರು ಶಿಕ್ಷಣಗಳನ್ನು ಕೊಡಬೇಕು.ಬುದ್ಧಿಯ ವಿಕಾಸದೊಂದಿಗೆ ಹೃದಯವಂತಿಕೆ ಬೆಳೆಸುವದೂ ಶಿಕ್ಷಣದ ಗುರಿಯಾಗಿದೆ.



ಶಾಲೆಗಳಲ್ಲಿ ಮಗುವು ತನ್ನ ಜನ್ಮದಿನದಂದು ಶಾಲೆಯಲ್ಲಿ ,ಮನೆಯ ಅಕ್ಕಪಕ್ಕ ಚಾಕೊಲೇಟ,ಕೊಡುವ ಪ್ರಕ್ರಿಯೆಗೆ ಪ್ರೋತ್ಸಾಹಿಸಲಾಗುತ್ತದೆ.ಮಗು ಚಾಕಲೇಟ್ ಕೊಟ್ಟಾಗ ಸಹಪಾಠಿಗಳೂ ಸಹ ಶುಭಾಶಯ ಕೋರಿ ಸಂತಸವನ್ನು ಹೆಚ್ಚಿಸುತ್ತಾರೆ. ಹಾಗೆಯೇ ವ್ಯಕ್ತಿಯು ತನ್ನ ದುಡಿಮೆಯ ಸ್ವಲ್ಪ ಭಾಗ ನಾನಾ ರೀತಿಯಲ್ಲಿ ಉಪಕಾರ ಪಡೆದ ಸಮಾಜಕ್ಕೆ ಸಮರ್ಪಿಸಿ ಸಾಮಾಜಿಕ ಋಣವನ್ನು ಸ್ವಲ್ಪವಾದರೂ ತೀರಿಸಿ ಸಾರ್ಥಕತೆ ಪಡೆಯುವದರ ಬೀಜರೂಪವೇ ಈ ಪ್ರಕ್ರಿಯೆ ಎನ್ನಬಹುದು.ವಿದ್ಯೆ ಹಣಗಳಿಕೆಯ ಸಾಧನವಾಗದೇ ವ್ಯಕ್ತಿತ್ವವನ್ನು ರೂಪಿಸುವ ಸಾಧನವಾದಾಗ ಮಾತ್ರ ಬದುಕಿನಲ್ಲಿ ಸುಖ,ಶಾಂತಿ,ನೆಮ್ಮದಿ ಸಿಗಲು ಸಾಧ್ಯ.



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,